ಕರ್ನಾಟಕ ಇತಿಹಾಸ ಮಾಲಿಕೆ

ಹೊಯ್ಸಳರ ಇತಿಹಾಸ



ಕರ್ನಾಟಕ ಇತಿಹಾಸ ಮಾಲಿಕೆ: ಪುಸ್ತಕ-೨

ಹೊಯ್ಸಳರ ಇತಿಹಾಸ

(History of the Hoysalas)

ಲೇಖಕರು :

ಎ. ಎಸ್. ನಂಜುಂಡಸ್ವಾಮಿ

ಎಂ. ಎ., (ಇತಿಹಾಸ), ಬಿ. ಟಿ., ಎಂ. ಎ., (ಇಂಗ್ಲಿಷ್)

ಪ್ರಾಧ್ಯಾಪಕರು : ರಾಷ್ಟ್ರೀಯ ವಿದ್ಯಾಲಯ ಟೀಚರ್ಸ್ ಕಾಲೇಜು, ಬೆಂಗಳೂರು

ಪ್ರಕಾಶಕರು :

ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧

ಪ್ರಕಾಶಕರು :
ಮನೋಹರ ಘಾಣೇಕರ, ಬಿ. ಎ., ಬಿ. ಕಾಂ.
ಸಮಾಜ ಪುಸ್ತಕಾಲಯ, ಧಾರವಾಡ-೧

*

ಪ್ರಥಮ ಮುದ್ರಣ : ೧೯೭೦

*

ಬೆಲೆ : ರೂ. ೨-೦೦

*

ಮುದ್ರಕರು :
ರವೀಂದ್ರ ಘಾಣೇಕರ, ಡಿಪ್. ಇನ್. ಪ್ರಿಂಟ್. ಟೆಕ್.
ಪ್ರತಿಭಾ ಮುದ್ರಣ, ಧಾರವಾಡ-೧

ಮುನ್ನುಡಿ

ಕರ್ನಾಟಕ ಇತಿಹಾಸ ಮಾಲಿಕೆಯ ದ್ವಿತೀಯ ಪುಷ್ಪವಾದ 'ಹೊಯ್ಸಳರ ಇತಿಹಾಸ' ವನ್ನು ಕನ್ನಡ ಸಾಹಿತ್ಯ ದೇವಿಯ ಪಾದಪದ್ಮ ಗಳಿಗೆ ಅರ್ಪಿಸಲು ಅತ್ಯಂತ ಹರ್ಷವಾಗುತ್ತಿದೆ.

ಹಲವಾರು ದೃಷ್ಟಿಗಳಿಂದ ಹೊಯ್ಸಳರ ಚರಿತ್ರೆಯು ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ. ಹೊಯ್ಸಳರು ಅಪ್ಪಟ ಕನ್ನಡಿಗರು. ಅವರ ಕನ್ನಡತನವ ಬಗ್ಗೆ ಯಾವ ಅನುಮಾನಕ್ಕೂ ವಿವಾದಕ್ಕೂ ಆಸ್ಪದವೇ ಇಲ್ಲ. ಅಷ್ಟೇ ಅಲ್ಲ. ಕನ್ನಡಿಗರ ಹೃದಯದಲ್ಲಿ ಕನ್ನಡಿಗ ಎಂಬ ಅಭಿಮಾನವನ್ನು ಉಕ್ಕಿಸಿದ ಶ್ರೇಯಸ್ಸು ಹೊಯ್ಸಳರಿಗೆ ಸಲ್ಲಬೇಕು.

ಶ್ರೀ ಶಂ. ಬಾ. ಜೋಶಿಯವರು ಬರೆದಿರುವಂತೆ ಹೊಯ್ಸಳರ ಓಲಗ ದಲ್ಲಿ ಕನ್ನಡ ಅಭಿಮಾನದ ಹೊಸ ಸ್ಫೂರ್ತಿಯು ಮೈದೋರದಿದ್ದರೆ ಇನ್ನು ಸ್ವಲ್ಪ ಅವಧಿಯಲ್ಲಿ ಕರ್ಣಾಟಕವು ನಿಜವಾಗಿಯೂ ಹೇಳಹೆಸರಿಲ್ಲದಂತಾಗು ತ್ತಿದ್ದಿತೆಂಬುದಕ್ಕೆ ಸಂದೇಹವಿಲ್ಲ.

ವಿನಾಶದ ಹಾದಿಯಲ್ಲಿ ತನ್ನ ವಿಜಯಯಾತ್ರೆಯನ್ನು ಕೈಗೊಂಡಿದ್ದ ಇಸ್ಲಾಂ ಧರ್ಮದ ದುರಾಕ್ರಮಣವನ್ನು ಹನ್ನೊಂದರಿಂದ ಹದಿನಾಲ್ಕನೆಯ ಶತಮಾನಗಳ ನಡುವೆ ತಡೆಗಟ್ಟಿದವರಲ್ಲಿಯೂ ಹೊಯ್ಸಳರೇ ಮೊದಲಿಗರು. ಆದರೆ ಹೊಯ್ಸಳರ ಧಾರ್ಮಿಕ ಶ್ರದ್ಧೆಯಲ್ಲಿ ಯಾವುದೇ ರೀತಿಯ ದುರಭಿ ಮಾನವಿದ್ದಂತೆ ಕಾಣುವುದಿಲ್ಲ. ಹೊಯ್ಸಳ ಅರಸರು ಸರ್ವಧರ್ಮಗಳ ಪೋಷಕರಾಗಿದ್ದರು. ಅವರಲ್ಲಿ ಮತಾಂಧತೆಯೆಂಬುದು ಸುಳಿದಿರಲಿಲ್ಲ. ಮೂರನೆಯ ಬಲ್ಲಾಳನ ಸೈನ್ಯದಲ್ಲಿ ಇಪ್ಪತ್ತು ಸಹಸ್ರ ಮುಸಲ್ಮಾನರಿದ್ದ ರೆಂದು ಮುಸ್ಲಿಂ ಚರಿತ್ರಕಾರನೇ ಹೊರಗೆಡಹಿರುವುದು ಗಮನಾರ್ಹ ವಾಗಿದೆ.

ದಾನ, ಧರ್ಮಗಳಿಗೂ ಲೋಕೋಪಕಾರಿ ಕಾರ್ಯಗಳಿಗೂ ಹೊಯ್ಸ‌ಳರ ಕಾಲವು ಅದ್ವಿತೀಯವೆನಿಸಿತು.

ಅರಸರ ಇಲ್ಲವೇ ಮಂತ್ರಿಗಳ ಪ್ರೋತ್ಸಾಹದಿಂದಾಗಿ ಕನ್ನಡ ಸಾಹಿತ್ಯವೂ ಸಂಸ್ಕೃತ ಸಾಹಿತ್ಯವೂ ಅಪಾರವಾಗಿ ಬೆಳೆಯಲು ಅನುಕೂಲವಾಯಿತು.

ಕಲಾದೃಷ್ಟಿಯಿಂದ ಹೇಳುವುದಾದರೆ ಹೊಯ್ಸಳರು ನಿರ್ಮಿಸಿದ ದೇವಾಲಯಗಳು ಭಾರತದ ವಾಸ್ತುಶಿಲ್ಪ ಸೌಂದರ್ಯವನ್ನೇ ಶ್ರೀಮಂತಗೊಳಿಸಿದವು.

ವೈಭವ ಪೂರ್ಣ ಸಾಮ್ರಾಜ್ಯವೆನಿಸಿದ ವಿಜಯನಗರದ ಸ್ಥಾಪನೆಗೆ ಭೂಮಿಕೆಯನ್ನು ಸಿದ್ಧಗೊಳಿಸಿದ ಕೀರ್ತಿಯೂ ಹೊಯ್ಸಳರದು.

ಇಂಥಾ ಭವ್ಯ ಸಂತತಿಯ ಕಥೆಯನ್ನು ವೈಜ್ಞಾನಿಕವಾಗಿ, ಅಂದರೆ, ಶಾಸನಾಧಾರದಿಂದ ನನ್ನಿಂದ ಬರೆಯಿಸಿ, ಅಚ್ಚು ಹಾಕಿಸಿರುವ ಸಮಾಜ ಪುಸ್ತಕಾಲಯದ ಒಡೆಯರಾದ ಶ್ರೀ ಮನೋಹರ ಘಾಣೇಕರರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಈ ಕೃತಿಯ ರಚನೆಗೆ ಅಗತ್ಯವಾದ ಆಧಾರ ಗ್ರಂಥಗಳನ್ನು ದೊರಕಿಸಿ ಕೊಟ್ಟ ಹಿರಿಯ, ಕಿರಿಯ ಮಿತ್ರರಿಗೂ, ಇದನ್ನು ಅಚ್ಚುಕಟ್ಟಾಗಿ ಹೊರತರಲು ಶ್ರಮಿಸಿದ ಮುದ್ರಣಾಲಯದ ನೌಕರರಿಗೂ ನನ್ನ ಕೃತಜ್ಞತೆಗಳು ಸಲ್ಲಬೇಕಾಗಿವೆ.

ಎ. ಎಸ್. ನಂಜುಂಡಸ್ವಾಮಿ

ಪ ರಿ ವಿ ಡಿ

ಎ. ಎಸ್. ನಂಜುಂಡಸ್ವಾಮಿಯವರ

ಪ್ರಕಟಿತ ಕೃತಿಗಳು

೧. ಭಾರತೀಯ ರಾಷ್ಟ್ರೀಯತೆಯ ವಿಕಾಸ
೨. ಪ್ರಾಚೀನ ಹಿಂದೂರಾಜ್ಯ ಪದ್ಧತಿ
೩. ಬಾಪೂ ಬೀರಿದ ಬೆಳಕು
೪. ಗೌರವ ತಪಸ್ವಿ
೫. ಭಾರತೀಯ ಶಿಕ್ಷಣದ ಇತಿಹಾಸ
೬. ರಾಷ್ಟ್ರಕೂಟದ ಇತಿಹಾಸ
೭. ಹೊಯ್ಸಳರ ಇತಿಹಾಸ

ಬರಲಿವೆ

೮. ಕದಂಬ ಮತ್ತು ಗಂಗರ ಇತಿಹಾಸ
೯. ಚಾಲುಕ್ಯರ ಇತಿಹಾಸ
೧೦. ವಿಜಯನಗರದ ಇತಿಹಾಸ

೧. ಹೊಯ್ಸಳರ ಉಗಮ

ಪ್ರಾಚೀನ ಕರ್ನಾಟಕದಲ್ಲಿ ಇಂದಿನ ಗಿರಿಜನರನ್ನು ಹೋಲುವ ಅನೇಕ ಕುಟುಂಬಗಳು ಹಾಸನ ಜಿಲ್ಲೆ ಹಾಗೂ ಮೈಸೂರು, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಾಸಿಸುತ್ತಿದ್ದವು. ಆರೋಗ್ಯಕರವಾದ ವಾಯುಗುಣ ಮತ್ತು ನೈಸರ್ಗಿಕ ಸನ್ನಿವೇಶವು ಬಲಶಾಲಿ ಜನಾಂಗದ ಸೃಷ್ಟಿಗೆ ಸಹಕಾರಿಯಾಗಿದ್ದುವು. ಅಂದಿನ ಬೆಟ್ಟ, ಗುಡ್ಡ, ಕಾಡುಗಳಲ್ಲಿ ವಾಸಿಸುತ್ತಿದ್ದ ಬೇಡರು, ಮಲೆಪರು ಮತ್ತು ಕಬಿಂಬರು ಬಯಲು ಸೀಮೆಯ ನಿವಾಸಿಗಳಿಗೆ ಸಿಂಹಸ್ವಪ್ನವೆನಿಸಿದ್ದರು. ಹೊಯ್ಸಳರೂ ಸಹ ಇಂತಹ ಗುಡ್ಡಗಾಡು ಜನಾಂಗದ ಅಧಿಪತಿಗಳಾಗಿ ತಮ್ಮ ಜೀವನಯಾತ್ರೆಯನ್ನು ಆರಂಭಿಸಿರಬೇಕೆಂದು ಇತಿಹಾಸ, ಸಂಶೋಧಕರು ತರ್ಕಿಸಿದ್ದಾರೆ. 'ಮಲೆಪರೊಳ್ಗಂಡ' ಎಂಬ ಬಿರುದನ್ನು ಧರಿಸಿದ್ದ ಹೊಯ್ಸಳರು ಮೊದಲಿಗೆ ಗುಡ್ಡಗಾಡು ಜನರ ಮುಖ್ಯಸ್ಥರಾಗಿದ್ದರೆಂಬುದು ನಿರ್ವಿವಾದವಾದುದು. ಒಟ್ಟಿನಲ್ಲಿ ಇವರು ದೇಶೀಯ ಮೂಲದವರು ಹಾಗೂ ಕನ್ನಡಿಗರು.

ಕ್ರಿ. ಶ. 1123 ರ ಶ್ರವಣ ಬೆಳಗೊಳದ ಶಾಸನವೊಂದು (No. 132 E. C. Vol II) ಹೊಯ್ಸಳರ ಉಗಮವನ್ನು ಕುರಿತು ಪೌರಾಣಿಕ ವಂಶಾವಳಿಯನ್ನು ನಿರೂಪಿಸಿದೆ. ವಿಷ್ಣುವಿನ ನಾಭಿ ಕಮಲದಿಂದ ಉದ್ಭವಿಸಿದ ಬ್ರಹ್ಮನಿಂದ ಅತ್ರಿಯು ಆವಿರ್ಭವಿಸಿದನು; ಅವನ ಮಗನೇ ಚಂದ್ರ; ಚಂದ್ರನ ಮಗ ಬುಧ; ಬುಧನ ಸುತನೇ ಪುರೂರವ; ಪುರೂರವನ ಪುತ್ರನೇ ಆಯು; ಆಯುನ ಮಗ ನಹುಷ; ನಹುಷನ ಮಗನಾದ ಯಯಾತಿಯ ಸುತನೇ ಯದು. ಈ ಯದುವಿನ ವಂಶದಲ್ಲಿ ಜನಿಸಿದ ಅರಸರಲ್ಲಿ ಪ್ರಖ್ಯಾತನಾದ ಸಳನೇ ಹೊಯ್ಸಳ ಸಂತತಿಯು ಮೂಲ ಪುರುಷನು.

ಮಂಡ್ಯ ಜಿಲ್ಲೆಯ ಬಸರಾಳು ಬಳಿ ದೊರೆತ ದಾಖಲೆಯೊಂದು (M. D. -121, E. C. III) 'ಹೊಯ್ಸಳ' ಎಂಬ ಹೆಸರು ಬಂದ ಬಗೆಯನ್ನು

ಬಣ್ಣಿಸಿದೆ. ಶಶಾಕಪುರದ (ಆಧುನಿಕ ಮೂಡಿಗೆರೆ ತಾಲೂಕಿನಲ್ಲಿರುವ ಅಂಗಡಿ ಎಂಬ ಗ್ರಾಮ) ವಾಸಂತಿಕಾದೇವಿಯದೇವಾಲಯದಲ್ಲಿ ಮುನಿಯೊಬ್ಬನ ಮೇಲೆ ಹುಲಿಯೊಂದು ನುಗ್ಗಿ ಬಂದಾಗ, ಆತನು ಸಳನನ್ನು ಕುರಿತು, "ಹೊಯ್, ಸಳ", ಎಂಬುದಾಗಿ ಆದೇಶ ನೀಡಿದನಂತೆ. ಅದರ ಪ್ರಕಾರ ಸಳನು ಹುಲಿಯನ್ನು ಸಂಹರಿಸಿದನು. ಆ ಮುನಿಯ ಹೆಸರು ಸುದತ್ತನೆಂದು ಸೊರಬದ ಬಳಿಯ ಶಾಸನವೊಂದು ಹೊರಗೆಡಹಿದೆ. ಅದೇ ತಾಲೂಕಿನ ಮತ್ತೊಂದು ಶಾಸನದ ಪ್ರಕಾರ ಸುದತ್ತನು ತನ್ನನ್ನು ರಕ್ಷಿಸಿದ ಸಳನಿಗಾಗಿ ಪದ್ಮಾವತಿ ದೇವತೆಯಿಂದ ರಾಜ್ಯವನ್ನು ಪಡೆದನಂತೆ. (Sd. 28, E. C. VIII) ಹುಲಿ ಬಂದ ಸಮಯದಲ್ಲಿ ಸುದತ್ತನು 'ಸಳಂಗೆ ವಿದ್ಯಾಭ್ಯಾಸಂಗೆಯ್ಯುತಂ ಇರ್ದನ್' ಎಂಬುದಾಗಿ ಶಾಸನದಲ್ಲಿ ತಿಳಿಸಲಾಗಿದೆ.

ನಾಗಮಂಗಲದ ಶಾಸನಗಳೂ (Ng. 39 and 38) ಬೇಲೂರು ಶಾಸನವೂ (Bl. 171) ಹಾಸನದ ಶಾಸನವೂ (Hn. 65) ಈ ಪ್ರಕರಣವನ್ನು ವಿವಿಧ ರೀತಿಗಳಲ್ಲಿ ಪ್ರಸ್ತಾಪಿಸಿವೆ. ಬೇಲೂರಿನ ಶಾಸನದ ಪ್ರಕಾರ ಸಳನು ಸಹ್ಯ ಪರ್ವತದ ಇಳಿಜಾರಿನಲ್ಲಿ ಬೇಟೆಯಾಡುತ್ತಿದ್ದಾಗ ಮೊಲವೊಂದು ಹುಲಿಯೊಂದನ್ನು ಅಟ್ಟಿಸಿಕೊಂಡು ಹೋಗುತ್ತಿದ್ದುದನ್ನು ಕಂಡು ಆಶ್ಚರ್ಯಚಕಿತನಾಗಿದ್ದಾಗ, ಋಷಿಯೋರ್ವನ ಭಯ ನಿವಾರಣೆಗಾಗಿ, ಸಳನು ಆ ಹುಲಿಯು ಮತ್ತೊಂದು ಗೇಣಿನಷ್ಟು ಹೆಜ್ಜೆ ಇಡುವ ಮುನ್ನವೇ ತನ್ನ ಕಠಾರಿಯಿಂದ ಅದರ ಕಥೆಯನ್ನು ಮುಗಿಸಿದನಂತೆ. (E. C. V) ಸಳನ ಧೈರ್ಯವನ್ನು ಪರೀಕ್ಷಿಸಲೋಸುಗ ಮುನಿಯು ಹಾಗೆ ಮಾಡಿದನೆಂದು ಹಾಸನದ ಶಾಸನವು ತಿಳಿಸಿದೆ.

ಈ ರೀತಿ ಸಳನ ಸಂತತಿಯ ಹೆಸರು 'ಹೊಯ್ಸಳ' ಅಥವಾ 'ಪೊಯ್ಸಳ' ಎಂದಾಯಿತು. ಸಳನಿಂದ ಹತವಾದ ಹುಲಿಯು ಸ್ವರ್ಗಕ್ಕೆ ಹೋದರೂ ಹೊಯ್ಸಳರ ವಿಜಯವನ್ನು ವೀಕ್ಷಿಸಲೋಸುಗವೋ ಎಂಬಂತೆ ಹುಲಿಯ ಆಕೃತಿಗೆ ಹೊಯ್ಸಳರ ಧ್ವಜದಲ್ಲಿ ಶಾಶ್ವತ ಸ್ಥಾನ ದೊರೆಯಿತೆಂದು ಬೆಂಗಳೂರಿನ ತಾಮ್ರ ಶಾಸನವೊಂದು ವರ್ಣಿಸಿದೆ. (Bn. 6. E. C. IX).

ಒಟ್ಟಿನಲ್ಲಿ ಶಕೆ 995 ರ ವೇಳೆಗೆ ಸಳನು ಶಶಾಕಪುರ ಅಥವಾ ಸೊಸೆ-ವೂರಿನಲ್ಲಿ ನೆಲೆಸಿದ್ದನೆಂದು ಭಾಸವಾಗುತ್ತದೆ.


ಹೊಯ್ಸಳರ ಕಾಲದ ಶಾಸನಗಳು ಉತ್ತರದಲ್ಲಿ ತಂಜಾವೂರಿನಿಂದ ಹಿಡಿದು ಸೊಲ್ಲಾಪೂರದ ವರೆಗೂ, ಕೊಡಗಿನಿಂದ ಹಿಡಿದು ಪೂರ್ವ ಕರಾವಳಿಯಲ್ಲಿನ ದಕ್ಷಿಣ ಆರ್ಕಾಟ್ ಜಿಲ್ಲೆಯವರೆಗೂ ಅಲ್ಲಲ್ಲಿ ದೊರೆಶಿವೆ.

ಆದಿಯ ಹೊಯ್ಸಳ ಅರಸರು ಕಲ್ಯಾಣಿಯ ಚಾಲುಕ್ಯರ ಮಾಂಡಲಿಕರಾಗಿದ್ದು ವಿಷ್ಣುವರ್ಧನನ ಆಳಿಕೆಯಲ್ಲಿ ಸ್ವತಂತ್ರ ರಾಜರೆನಿಸಿದರು. ಮೊದಲು ಸೊಸೆವೂರು ನಂತರ ದೋರಸಮುದ್ರವು ಹೊಯ್ಸಳರ ರಾಜಧಾನಿಯಾ-ಯಿತು. ವಿಷ್ಣುವರ್ಧನನ ಕಾಲದಲ್ಲಿ ಉಚ್ಛಂಗಿ, ದ್ವಾರಸಮುದ್ರ, ಬೇಲೂರು, ವಿಷ್ಣುಸಮುದ್ರ ಮತ್ತು ತೊಣ್ಣೂರು ಒಂದಲ್ಲ ಒಂದು ಸಂದರ್ಭದಲ್ಲಿ ರಾಜಧಾನಿಯಾಗಿದ್ದುವು. ಅವನು ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಬೆಗಲಿ, ಎರಂಬರ್ಗೆ, ಕುಕ್ಕನೂರು, ಕೊಪ್ಪ ಮತ್ತು ಹುಲಿಗೆರೆಗಳಲ್ಲಿ ವಾಸಿಸಬೇಕಾಯಿತು. ಸೋಮೇಶ್ವರನು ಶ್ರೀರಂಗಂ ಬಳಿಯ ಕಣ್ಣಾನೂರು ಅಥವಾ ವಿಕ್ರಮಪುರದ ನಿವಾಸಿಯಾಗಿದ್ದನು. ಮೂರನೆಯ ಬಲ್ಲಾಳನು ಕೊಣ್ಣೂರಿನಲ್ಲಿಯೂ ನಂತರ ಉಣ್ಣಾಮಲೆಯ ಪಟ್ಟಣ (ತಿರುವಣ್ಣಾಮಲೆ) ದಲ್ಲಿಯೂ ನೆಲೆಸಿದ್ದನು.

ಹೊಯ್ಸಳ ಸಿಂಹಾಸನಾಧೀಶ್ವರರು ಯಾದವ ಕುಲಾಂಬರ ದ್ಯುಮಣಿ, ಸಂಯುಕ್ತ ಚೂಡಾಮಣಿ, ಮಲೆಪರೊಳ್ ಗಂಡ, ಭುಜಬಲ ಪ್ರತಾಪ ಚಕ್ರವರ್ತಿ, ದಕ್ಷಿಣ ಚಕ್ರವರ್ತಿ ಮುಂತಾದ ಬಿರುದುಗಳನ್ನು ಹೊಂದಿದ್ದರು.

ಮೊದಲಿನ ಅರಸರು ಜೈನ ಮತಾವಲಂಬಿಯಾಗಿದ್ದರು. ಬಿಟ್ಟಿದೇವನ ಒಲವು ವೈಷ್ಣವ ಧರ್ಮದೆಡೆಗೆ ಹರಿದು ಅವನು ವಿಷ್ಣುವರ್ಧನನಾದನು. ಬಲ್ಲಾಳ ಮುಂತಾದ ಕೆಲವು ಅರಸರು ಶೈವಧರ್ಮವನ್ನು ಅನುಸರಿಸಿದ್ದರು. ಆದರೆ ಇತರ ಮತಧರ್ಮಗಳಿಗೂ ಪ್ರೋತ್ಸಾಹವಿದ್ದಿತು. ಹಳೆಗನ್ನಡವು ಅಧಿಕೃತ ಭಾಷೆಯಾಗಿದ್ದಿತು.

ಹೊಯ್ಸಳರ ವಂಶವೃಕ್ಷ:


ಸಳ
|
ಒಂದನೆಯ ವಿನಯಾದಿತ್ಯ
|
ನೃಪಕಾಮ
|
ಎರಡನೆಯ ವಿನಯಾದಿತ್ಯ
|
ಎರೆಯಂಗ
|
ಒಂದನೆಯ ಬಲ್ಲಾಳ
|
ಬಿಟ್ಟಿದೇವ (ವಿಷ್ಣುವರ್ಧನ)
|
ಒಂದನೆಯ ನರಸಿಂಹ
|
ಎರಡನೆಯ ಬಲ್ಲಾಳ
|
ಎರಡನೆಯ ನರಸಿಂಹ
|
ಸೋಮೇಶ್ವರ
|
ಮೂರನೆಯ ನರಸಿಂಹ ಮತ್ತು ರಾಮನಾಥ
| |
ಮೂರನೆಯ ಬಲ್ಲಾಳ ವಿಶ್ವನಾಥ
|
ನಾಲ್ಕನೆಯ ಬಲ್ಲಾಳ.

ವಿಶೇಷ ಸೂಚನೆ: ಹೊಯ್ಸಳ ಅರಸರ ಆಳಿಕೆಯ ಇಸವಿಗಳ ಬಗ್ಗೆ ಇತಿಹಾಸಕಾರರಲ್ಲೇ ವಿವಾದವಿದೆ. ಒಬ್ಬ ವಿದ್ವಾಂಸರ ಗ್ರಂಥದಲ್ಲಿ ಉಲ್ಲೇಖಿಸಿರುವ ಇಸವಿಗಳಿಗೂ ಮತ್ತೊಬ್ಬ ವಿದ್ವಾಂಸರ ಗ್ರಂಥದಲ್ಲಿ ಕೊಟ್ಟಿರುವ ಇಸವಿಗಳಿಗೂ ದಿಗ್ಭ್ರಮೆ ಹಿಡಿಸುವಷ್ಟು ವ್ಯತ್ಯಾಸವಿರುವುದುಂಟು. ಆದರೆ ಈ ಗ್ರಂಥದಲ್ಲಿ ಶಾಸನಾಧಾರದಿಂದ ಅರಸನ ಪಟ್ಟಾಭಿಷೇಕ ಜರುಗಿದ ಇಸವಿಯನ್ನೂ ಅವನ ಆಳಿಕೆಯ ಕೊನೆಯ ವರ್ಷವನ್ನೂ ಆಯಾ ಅರಸನ ಹೆಸರಿನ ಮುಂದಿನ ಆವರಣದೊಳಗೆ ಕೊಡಲಾಗಿದೆ.

೨. ಹೊಯ್ಸಳ ರಾಜರ ಚರಿತ್ರೆ

ಕ್ರಿ. ಶ. ಹತ್ತನೆಯ ಶತಮಾನದ ಉತ್ತರಾರ್ಧದ ವೇಳೆಗೆ ಹೊಯ್ಸಳರು ತಲೆ ಎತ್ತಲಾರಂಭಿಸಿದರು ಎನ್ನಲು ಕುರುಹುಗಳಿವೆ. ಬೇಲೂರಿನ ಉತ್ತರಕ್ಕಿರುವ ಪಾಪಲೆ ಎಂಬ ಗ್ರಾಮದಲ್ಲಿ ದೊರೆತ ಶಾಸನವೊಂದರಲ್ಲಿ ಪೊಯ್ಸಳ–ಮಾರುಗನೆಂಬುವನು ನೊಳಂಬರ ಅಣ್ಣಿಗನೆಂಬುವನೊಂದಿಗೆ ಸಿರಿವೂರು ಎಂಬಲ್ಲಿ ಕಾಳಗದಲ್ಲಿ ನಿರತನಾಗಿದ್ದನೆಂದು ಪ್ರಸ್ತಾಪಿಸಲಾಗಿದೆ.

ಹತ್ತನೆಯ ಶತಮಾನದ ಅಂತ್ಯದ ವೇಳೆಗೆ ಗಂಗರ ಅವನತಿಯಾದಂತೆಲ್ಲಾ ಹೊಯ್ಸಳರ ಪ್ರಗತಿ ಚುರುಕಾಯಿತು.

ಕ್ರಿ. ಶ. ಹನ್ನೊಂದನೆಯ ಶತಮಾನದ ಮೊದಲ ದಶಕದಲ್ಲಿ ಚೋಳರ ಸಾಮಂತನಾಗಿದ್ದ ಅಪ್ರಮೇಯನೊಂದಿಗೆ ಕಲವೂರಿನ (ಈಗಿನ ಕಲಿಯೂರು) ಹೊಯ್ಸಳರು ಹೋರಾಡಿದರೆಂದು ತಿಳಿಸಲಾಗಿದೆ. ಆದರಲ್ಲಿ ನಾಗಣ್ಣ ಮುಂತಾದ ಅನೇಕ ಹೊಯ್ಸಳ ದಳಪತಿಗಳು ಮಡಿದರು. ಅಪ್ರಮೇಯನೂ ಈ ಕದನದಲ್ಲಿ ಸತ್ತಿರಬಹುದು. ಒಟ್ಟಿನಲ್ಲಿ ಹೇಳುವುದಾದರೆ ಹನ್ನೊಂದನೆಯ ಶತಮಾನದ ವೇಳೆಗೆ ಸಳನಿಂದ ಸ್ಥಾಪಿಸಲ್ಪಟ್ಟ ಹೊಯ್ಸಳ ರಾಜಸಂತತಿಯು ಅಶ್ವಪಡೆ, ಗಜಸೈನ್ಯಗಳನ್ನೊಳಗೊಂಡ ಪ್ರಬಲ ಶಕ್ತಿಯಾಗಿ ಪರಿಣಮಿಸಿತು.

ಇತ್ತೀಚಿನ ಸಂಶೋಧನೆಗಳ ಪ್ರಕಾರ ಒಂದನೆಯ ವಿನಿಯಾದಿತ್ಯನು ಸಳನ ಉತ್ತರಾಧಿಕಾರಿಯೆಂದೂ ಅವನ ನಂತರ ಬಂದ ನೃಪಕಾಮನು ಕ್ರಿ. ಶ. 1022 ರಿಂದ 1047 ವರೆಗೆ ಆಳಿದನೆಂದೂ ನಂಬಲಾಗಿದೆ.

ಒಂದನೆಯ ವಿನಯಾದಿತ್ಯನು ಕ್ರಿ. ಶ. 1016 ರಿಂದ 1022 ರ ವರೆಗೆ ಆಳಿದನೆಂದು ಹೇಳಬಹುದು. ಅವನ ಆಳಿಕೆಯ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದು ಬಂದಿಲ್ಲ.

ನೃಪಕಾಮ : ಕ್ರಿ. ಶ. 1022 ರ ಮಂಜರಾಬಾದ್ ಶಾಸನದ ಪ್ರಕಾರ ನೃಪಕಾಮನು ನೆರೆಯ ಕೊಂಗಾಳ್ವ ಅರಸನೊಂದಿಗೆ ಕಾದಾಡಬೇಕಾಯಿತು. ಶತ್ರುವಿನ ದಳಪತಿಯು ನೃಪಕಾಮನ ಹತ್ಯೆಗೆ ಪ್ರಯತ್ನಿಸುತ್ತಿದ್ದಾಗ ಹೊಯ್ಸಳ ದಳಪತಿಯು ಅವನ ರಕ್ಷಣೆಗೆ ಧಾವಿಸಿ, ಕನ್ನಮನ ಕುದುರೆಯನ್ನು ಕೊಲ್ಲುತ್ತಿದಾಗ, ತಾನೇ ಹತನಾದನೆಂದು ಗೊತ್ತಾಗುವುದು (MJ. 43, E. C. V)

ಅರಕಲುಗೂಡಿನ ಶಾಸನವೊಂದು ಕ್ರಿ. ಶ. 1026 ರಲ್ಲಿ ಕೊಂಗಾಳ್ವ ಅರಸನು ನೃಪಕಾಮನ ಮೇಲೆ ಮತ್ತೆ ಯುದ್ಧ ಹೂಡಿ, "ಮಣ್ಣಿಯ ಕಾಳಗಂ ಗೆಲ್ದು" ದನ್ನು ಪ್ರಸ್ತಾಪಿಸಿದೆ. (Ag. 76, E. C. V) ಆದರೆ ಮತ್ತೆ ಮೂವತ್ತು ವರ್ಷಗಳ ಕಾಲ ಕೊಂಗಾಳ್ವನ ಹೆಸರು ಶಾಸನಗಳಲ್ಲಿ ಬರುವುದಿಲ್ಲವಾದ್ದರಿಂದ ಯುದ್ಧದ ಪರಿಣಾಮವು ಕೊಂಗಾಳ್ವನ ಪರವಾಗಿ ರಲಿಲ್ಲವೆಂದು ಡೆರೆಟ್ ಅವರು ಭಾವಿಸುತ್ತಾರೆ. ಚಾಲುಕ್ಯ ಸಾಮ್ರಾಟನ ಚಟುವಟಿಕೆಗಳ ಒತ್ತಡವೂ ಕೊಂಗಾಳ್ವನ ಪತನಕ್ಕೆ ಕಾರಣವಿರಬಹುದು. ಅದೂ ಅಲ್ಲದೆ ಹೊಯ್ಸಳರೂ ಚಾಲುಕ್ಯರ ಪರಮಾಧಿಕಾರಕ್ಕೆ ತಲೆಬಾಗ ಬೇಕಾಯಿತು.

ಮೂಡಗೆರೆ ಬಳಿಯ ಉಗ್ಗಿಹಳ್ಳಿಯಲ್ಲಿ ದೊರೆತ ಶಾಸನದಲ್ಲಿ ನೃಪ ಕಾಮನನ್ನು ರಾಚಮಲ್ಲ ಪರ್ಮಾಡಿ ಎನಿಪ ಕಾಮ ಹೊಯ್ಸಳ ಎಂದು ಬಣ್ಣಿಸಲಾಗಿದೆ. (Mg. 19 E. C. VI). ಗಂಗರಿಗೆ ಸಲ್ಲುವ ಈ ಬಿರುದು ಇವನಿಗೆ ದೊರೆತುದು ಅಚ್ಚರಿಯೇ ಸರಿ. 1027 ರ ಡಿಸೆಂಬರ್‌ನಲ್ಲಿ ನೃಪಕಾಮನು ಕದಂಬರ ರಾಜಧಾನಿಯಾಗಿದ್ದ ಬನವಾಸಿಯನ್ನೂ, ಅದರ ನೆರೆಯ ಸ್ಥಳವಾದ ರಾಜೇಂದ್ರಪುರವನ್ನೂ ಮುತ್ತಿದನು. ಕದಂಬರ ಮೇಲಿನ ಅಂತಿಮ ವಿಜಯವು ಹೊಯ್ಸಳರದೇ ಆಯಿತು. ಆದಿಯ ಹೊಯ್ಸಳರಲ್ಲಿ ಅಗ್ರಪಂಙ್ತಿಗೆ ಸೇರುವ ನೃಪಕಾಮನು ಜೈನ ಮತಾವಲಂಬಿಯಾಗಿದ್ದನು. ಅವನ ಮಗನಾದ ಎರಡನೆಯ ವಿನಯಾದಿತ್ಯನು ಮುಂದೆ ಅರಸನಾದನು.

ಎರಡನೆಯ ವಿನಯಾದಿತ್ಯ (ಕ್ರಿ. ಶ. 1047–1098): ಕಡೂರಿನ ಶಾಸನದಲ್ಲಿ ವಿನಯಾದಿತ್ಯನನ್ನು ತ್ರಿಭುವನಮಲ್ಲ ಪೊಯ್ಸಳದೇವ ಎಂದು ಕರೆಯಲಾಗಿದೆ- (Kd. 161. E. C. VI)

ಮೂಡಗೆರೆ ಶಾಸನದ ಪ್ರಕಾರ ಅವನಿಗೆ ' ರ–ಕ್ಕ–ಸ–ಹೊ.ಯ್ಸ–ಳ ' ಎಂಬ ಬಿರುದೂ ಇದ್ದಿರಬೇಕೆಂದು ಬಿ. ಎಲ್. ರೈಸ್ ಅವರು ಭಾವಿಸಿದ್ದಾರೆ. (Mg. 13, E. C. VI). ಅರ್ಧ ಶತಮಾನದ ಆಳಿಕೆ ನಡೆಸಿದ ವಿನಯಾದಿತ್ಯನ ಮಹತ್ವಕ್ಕೆ ಅವನ ಗುರು ಶಾಂತಿದೇವನ ಅನುಗ್ರಹವೇ ಕಾರಣವೆಂದು ಶ್ರವಣಬೆಳಗೊಳದ ಶಾಸನವೊಂದರಲ್ಲಿ ಹೇಳಲಾಗಿದೆ. (No. 67, E. C. II). ಅವನ ರಾಜ್ಯದ ಗಡಿಗಳು ಕೊಂಕಣ, ಆಳ್ವಖೇಡ, ಬಯಲುನಾಡು, ತಲಕಾಡು ಮತ್ತು ಸಾವಿಮಲೆಗಳೆಂದು ಶಾಸನವೊಂದರಿಂದ ಗೊತ್ತಾಗುವುದು.

ಎರಡನೆಯ ವಿನಯಾದಿತ್ಯನು ಹೊಯ್ಸಳ ರಾಜ್ಯದ ಸಂಘಟನೆಗಾಗಿ ಶ್ರಮಿಸಿದನು. ಕ್ರಿ. ಶ. 1055 ರಲ್ಲಿ ತನ್ನ ಪುತ್ರಿಯನ್ನೋ ಅಥವಾ ಸೋದರಿಯನ್ನೋ ಕಲ್ಯಾಣಿಯ ಚಾಲುಕ್ಯ ಚಕ್ರವರ್ತಿಗೆ ಕೊಟ್ಟು ವಿವಾಹ ಮಾಡಿದನು. ಅವನಿಗೆ ಚಾಲುಕ್ಯ ಅರಸನಿಂದ ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರ ಎಂಬ ಪ್ರಶಸ್ತಿಯೂ ದೊರೆಯಿತು.

ವಿನಯಾದಿತ್ಯನ ಕಾಲದಲ್ಲಿ ಹೊಯ್ಸಳರಿಗೂ ವರದಾಕಣಿವೆಯ ಮೇಲ್ಭಾಗದಲ್ಲಿ ಆಳುತ್ತಿದ್ದ ಸಾಂತರರಿಗೂ ಕದನವಾಯಿತೆಂದು ಚಾಲುಕ್ಯರ ಹಾಗೂ ಸಾಂತರರ ಶಾಸನಗಳಿಂದ ಗೊತ್ತಾಗುವುದು. ಈ ಯುದ್ಧದಲ್ಲಿ ಹೊಯ್ಸಳರದೇ ಮೇಲುಗೈಯಾಯಿತು. ಅಷ್ಟೇ ಅಲ್ಲದೆ ಅಮ್ಮನ–ದೇವ ಸಾಂತರ ಎಂಬ ಯುವರಾಜನು ಪ್ರಾಯಶಃ ವಿನಯಾದಿತ್ಯನ ಪುತ್ರಿಯರಲ್ಲಿ ಓರ್ವಳಾಗಿದ್ದ ಹೋಚಲದೇವಿಯನ್ನು ವಿವಾಹವಾದನು. ಸಾಂತರರ ನೆರೆಯವರಾಗಿದ್ದ ಕೊಂಕಣದ ನಿವಾಸಿಗಳನ್ನು ಭಯಗೊಳಿಸಿದನೆಂದು ಶಾಸನಗಳು ವಿನಯಾದಿತ್ಯನನ್ನು ಹೊಗಳಿವೆ. 1089 ರ ಶಾಸನವೊಂದು ಇವನನ್ನು ವಿಕ್ರಮ ಗಂಗನೆಂದು ಕರೆದಿರುವುದರಿಂದ ಗಂಗವಾಡಿಯ ಕೆಲವು ಭಾಗಗಳನ್ನು ಆಳುತ್ತಿದ್ದನೆಂದು ಹೇಳಬಹುದು. ಆ ವೇಳೆಗೆ ಅಸಂದಿ ಗಂಗರ ವೈಜರಸನು ಹೊಯ್ಸಳರ ಪರಮಾಧಿಕಾರವನ್ನು ಅಂಗೀಕರಿಸಿದ್ದನು. ಅವನ ಬಂಧುಗಳಲ್ಲೊಬ್ಬನಾದ ಹೆಮ್ಮಾಡಿ ಗಂಗನು ವಿನಯಾದಿತ್ಯನ ಮೊಮ್ಮಗಳನ್ನು, ಅಂದರೆ, ಎರೆಯಂಗನ ಮಗಳನ್ನು 1067 ಕ್ಕೆ ಮುಂಚೆಯೇ ಮದುವೆಯಾಗಿದ್ದನು.

1098 ರ ವೇಳೆಗೆ ಘಟ್ಟಗಳ ಮೇಲ್ಭಾಗದಲ್ಲಿದ್ದ ಕೊಂಗು ಪ್ರಾಂತದ ಸಣ್ಣ ಭಾಗವೊಂದು ಹೊಯ್ಸಳ ರಾಜ್ಯದೊಂದಿಗೆ ಸೇರ್ಪಡೆಯಾಗಿತ್ತೆಂದು ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ.

ವಿನಯಾದಿತ್ಯನು ಚಾಲುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದುದರಿಂದ 1069–1076 ರ ನಡುವೆ ಚಾಲುಕ್ಯರಿಗೂ ಮಾಳವರಿಗೂ ಯುದ್ಧವಾದಾಗ ವಿನಯಾದಿತ್ಯನು ಯುವರಾಜ ಎರೆಯಂಗನ ನಾಯಕತ್ವದಲ್ಲಿ ಹೊಯ್ಸಳ ಸೇನೆಯನ್ನು ಚಾಲುಕ್ಯ ಸಾಮ್ರಾಟ ಎರಡನೆಯ ಸೋಮೇಶ್ವರನ ನೆರವಿಗೆ ಕಳುಹಿಸಿಕೊಟ್ಟಿದ್ದನು. ಎರೆಯಂಗನು ಮಾಳವ ಅರಸನ ಕೋಟೆ ಧಾರಾವನ್ನು ಮುತ್ತಿ ವಶಪಡಿಸಿಕೊಂಡಿದುದಲ್ಲದೆ ಅದನ್ನು ಸುಟ್ಟನೆಂದು ಹೇಳಲಾಗಿದೆ. ಎರೆಯಂಗನು ಮಧ್ಯದೇಶದಲ್ಲಿದ್ದ ಚಕ್ರಗೊಟ್ಟವನ್ನು ವಶಪಡಿಸಿಕೊಂಡಿದುದಲ್ಲದೆ ಪೂರ್ವ ಕರಾವಳಿಯಲ್ಲಿದ್ದ ಬಳಿಯ ಪಟ್ಟಣವನ್ನು ಸುಟ್ಟನಂತೆ.

ಹೊಯ್ಸಳ ನಾಡಿನ ದಕ್ಷಿಣ ಮತ್ತು ಪೂರ್ವ ಪ್ರದೇಶಗಳಲ್ಲಿ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನು ಕೈಗೊಂಡಿದ್ದ ಸೈನಿಕಾಚರಣೆಗಳಲ್ಲೂ ವಿನ-ಯಾದಿತ್ಯನು ತನ್ನ ಹಿತದೃಷ್ಟಿಯಿಂದಲೇ ಚಾಲುಕ್ಯರಿಗೆ ಸಹಕಾರ ನೀಡಿರಬಹುದೆಂದರೆ ತಪ್ಪಾಗಲಾರದು.

ಎರಡನೆಯ ವಿನಯಾದಿತ್ಯನು ತನ್ನ ರಾಜ್ಯದ ವಿಸ್ತರಣೆ ಮತ್ತು ಸುಭದ್ರತೆಗೆ ಗಮನಕೊಟ್ಟುದುದಲ್ಲದೆ ಶ್ರವಣಬೆಳಗೊಳದ ಮತ್ತೊಂದು ಶಾಸನವು (No. 143, E. C. II) ತಿಳಿಸಿರುವಂತೆ ಅವನು ಅಸಂಖ್ಯಾತ ಕೆರೆಗಳನ್ನೂ ದೇವಾಲಯಗಳನ್ನೂ ಜೈನ ಬಸದಿಗಳನ್ನೂ ನಿರ್ಮಿಸಿದನು. ಅವನ ಮಂತ್ರಿಯಾಗಿದ್ದ ಮಹಾಸಂಧಿ ವಿಗ್ರಹಿ ಪೋಚಿಮಯ್ಯ ದಣ್ಣಾಯಕನು ನಾಡುಗಳಲ್ಲಿ ಭೂಸುಧಾರಣೆಯ ಯೋಜನೆಯೊಂದನ್ನು ಕೈಗೊಂಡನು.

ಸೊಸೆವೂರು ವಿನಯಾದಿತ್ಯನ ಮೊದಲ ರಾಜಧಾನಿಯಾಗಿದ್ದಿತು. ನಂತರ ದೋರಸಮುದ್ರವು ಹೊಯ್ಸಳರ ರಾಜಧಾನಿಯಾಯಿತು. ವಿನಯಾ-ದಿತ್ಯನ ಮರಣದ ಇಸವಿಯ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ.

ವಿನಯಾದಿತ್ಯನ ವೃದ್ಧಾಪ್ಯದಲ್ಲಿ ಪರಮಾರ ಅರಸ ಜಗದ್ದೇವನು ದೋರಸಮುದ್ರದ ಮೇಲೆ ಧಾಳಿ ಮಾಡಿದನೆಂದೂ ಬಲ್ಲಾಳ ಮತ್ತು ಬಿಟ್ಟಿದೇವನು ಶತ್ರುವನ್ನು ಹೊರದೂಡಿದರೆಂದೂ ಜೈನರ ದಾಖಲೆಗಳಲ್ಲಿ ಉಲ್ಲೇಖವಿದೆ. ಈ ದಾಳಿಯು ಹೊಯ್ಸಳರ ಮತ್ತು ಚಾಲುಕ್ಯರ ನಡುವಿನ ಬಾಂಧವ್ಯದ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು.

ಎರೆಯುಂಗ: ಶ್ರವಣಬೆಳ್ಗೊಳದ ಶಾಸನಗಳಲ್ಲಿ ಚಾಲುಕ್ಯ ಅರಸನ ಬಲತೋಳಿನಂತಿದ್ದನೆಂದು ಬಣ್ಣಿಸಲಾಗಿರುವ ಎರೆಯುಂಗನು ವಿನಯಾದಿತ್ಯನ ಪತ್ನಿ ಕೆಳೆಯಬ್ಬರಸಿಯ ಗರ್ಭದಲ್ಲಿ ಜನಿಸಿದವನು. ಎರೆಯುಂಗನು ಯುವರಾಜನಿಗಿಂತಲೂ ಪ್ರಾಯಶಃ ಹೆಚ್ಚಿನ ಅಂತಸ್ತನ್ನು ಹೊಂದಿರಲಿಲ್ಲವೆಂದು ಬಿ. ಎಲ್. ರೈಸ್ ಅವರ ಅಭಿಪ್ರಾಯವಾದರೆ, ವಿನಯಾದಿತ್ಯನು 1097–98 ರಲ್ಲಿ ಸತ್ತನಂತರ ಎರೆಯುಂಗನು 1102 ರ ವರೆಗೆ ಆಳಿದನೆಂದು ಡೆರೆಟ್ ಬರೆದಿದ್ದಾರೆ. ತಂದೆಯ ಕಣ್ಣೆದುರಿಗೇ ಎರೆಯುಂಗನು ಸತ್ತನೆಂದು ಡಾ. ಎಂ. ವಿ. ಕೃಷ್ಣರಾವ್ ಅಭಿಪ್ರಾಯಪಟ್ಟಿದ್ದಾರೆ.

ನಿಸ್ಸಂದೇಹವಾಗಿ ಹೇಳಬಹುದಾದ ಅಂಶಗಳೆಂದರೆ ಎರೆಯುಂಗನು ಯುವರಾಜನಾಗಿದ್ದಾಗ ತಂದೆಯ ಆಡಳಿತದಲ್ಲಿ ಸಹಾಯಕನಾಗಿದ್ದನು ಮತ್ತು ಚಾಲುಕ್ಯರು ಕೈಗೊಂಡ ದಿಗ್ವಿಜಯಗಳಲ್ಲಿ ದಳಪತಿಯಾಗಿ ಸೇವೆ ಸಲ್ಲಿಸಿದನು. ಎರೆಯುಂಗನ ಪ್ರಥಮ ಪತ್ನಿ ಏಚಲಾದೇವಿಯ ಉದರದಲ್ಲಿ ಒಂದನೆಯ ಬಲ್ಲಾಳ, ವಿಷ್ಣುವರ್ಧನ ಮತ್ತು ಉದಯಾದಿತ್ಯರೆಂಬ ಮೂವರು ಪುತ್ರರು ಜನಿಸಿದರು. ಅವನ ಮತ್ತೋರ್ವ ಪತ್ನಿಯ ಹೆಸರು ಮಹಾದೇವಿ ಎಂಬುದಾಗಿ. ಆಕೆಯನ್ನು ವಿವಾಹವಾಗಲಾಗಿ ಗಂಗವಾಡಿಯ ಪೂರ್ವಾರ್ಧಭಾಗದೊಂದಿಗೆ ಹೊಯ್ಸಳರ ಸಂಪರ್ಕ ಹೆಚ್ಚಿತು.

ಒಂದನೆಯ ಬಲ್ಲಾಳ (ಕ್ರಿ. ಶ. 1102–1108)

ಎರಡನೆಯ ವಿನಯಾದಿತ್ಯ ಅಥವಾ ಎರೆಯುಂಗನ ಉತ್ತರಾಧಿಕಾರಿಯಾದ ಒಂದನೆಯ ಬಲ್ಲಾಳನು ಕೇವಲ ಆರು ವರ್ಷಗಳ ಕಾಲ ಮಾತ್ರ ಆಳಿದನು. 1102 ರ ವರೆಗೂ ಎರೆಯುಂಗನೇ ಆಳಿರಬಹುದೆಂದು ಕೆಲವರ ಅಭಿಪ್ರಾಯವಾಗಿರುವುದರಿಂದಲೂ ಒಂದನೆಯ ಬಲ್ಲಾಳನ ಕೊನೆಯ

ಶಾಸನವು 1108 ರಲ್ಲಿ ರಚಿಸಲ್ಪಟ್ಟಿರುವುದರಿಂದಲೂ ಈ ನಿರ್ಧಾರಕ್ಕೆ ಬರ ಲಾಗಿದೆ. ಆದರೆ 1101 ರ ಅಂತ್ಯದ ವೇಳೆಗೇ ಇವನು ಸಿಂಹಾಸನಾರೂಢ ನಾಗಿದ್ದರೂ ಅಸಂಭವವೇನಲ್ಲ. 1101 ರ ಬೇಲೂರಿನ ಶಾಸನವು (Bl. 199, E. C. V) ಬಲ್ಲಾಳನ ಕಾಲದ ಮೊದಲ ಶಾಸನವಾಗಿರುವುದು ಈ ನಂಬಿಕೆಯನ್ನು ಬಲಪಡಿಸಿದೆ.

ಚಾಲುಕ್ಯರ ಪರಮಾಧಿಕಾರದಿಂದ ವಿಮುಕ್ತವಾಗಬೇಕೆಂಬ ಬಯಕೆ ಹೊಯ್ಸಳರಲ್ಲಿ ಈಗ ಉಂಟಾಯಿತು. ಆದರೆ ಬಲ್ಲಾಳನು ಮಾತ್ರ ಎಚ್ಚ ರಿಕೆಯ ನೀತಿಯನ್ನು ಅನುಸರಿಸಿದನು. ಇವನಿಗೆ ಸೋದರನಾದ ಬಿಟ್ಟಿದೇವನ ಸಹಕಾರವೂ ಪೂರ್ಣವಾಗಿ ಇದ್ದಿತು. ಅಣ್ಣ-ತಮ್ಮಂದಿರಿಬ್ಬರೂ ಸೇರಿ ಉಚ್ಚಂಗಿಯನ್ನು ವಶಪಡಿಸಿಕೊಂಡು ಪಾಂಡ್ಯ ಅರಸನನ್ನು ಶರಣಾಗತ ನಾಗುವಂತೆ ಮಾಡಿದರು. ಎರಂಬರಗೆ (ಈಗಿನ ಎಲ್ಬುರ್ಗ) ಯ ಸಿಂದವಂಶದ ದಳಪತಿಯಾಗಿದ್ದ ಎರಡನೆಯ ಅಚುಗಿ ಮತ್ತು ಅವನ ಮಗ ಪರ್ಮಾಡಿ ದೇವನಿಗೂ ಹೊಯ್ಸಳರಿಗೂ ಎರಡು ಸಲ ಘರ್ಷಣೆಯಾಗಿ ಬಿಟ್ಟಿದೇವನು ತಾತ್ಕಾಲಿಕವಾಗಿ ಅಪಮಾನದ ಕಹಿ ಗುಳಿಗೆಯನ್ನು ನುಂಗಬೇಕಾಯಿತು. ಅದೇ ಸಮಯದಲ್ಲಿ ಬಲ್ಲಾಳನು ಕೊಂಗಾಳ್ವನ ನೆರೆಯ ಅರಸನಾದ ಚೆಂಗಾ ಳ್ವನ ಬೆದರಿಕೆಯನ್ನೂ ಎದುರಿಸಬೇಕಾಯಿತು. ಇದಾದ ಮೇಲೆ ಹೊಸವೀಡು ಎಂಬಲ್ಲಿ ಪೆರ್ಮಾಡಿದೇವನ ಸೇನೆಯೊಂದಿಗೆ ಬಲ್ಲಾಳನು ಹೋರಾಡಿದಂತೆ ಕಾಣುವುದು. ಅದರ ಫಲಿತಾಂಶ ಸ್ಪಷ್ಟವಾಗಿ ತಿಳಿಯದು.

ಒಂದನೆಯ ಬಲ್ಲಾಳನು ಭಯಂಕರ ವ್ಯಾಧಿಯೊಂದರಿಂದ ನರಳುತ್ತಿ ದ್ದನೆಂದೂ ಆ ವ್ಯಾಧಿಯನ್ನು ಅವನ ಗುರುವಾದ ಚಾರುಕೀರ್ತಿಯು ಗುಣ ಪಡಿಸಿ 'ಬಲ್ಲಾಳ ಜೀವ ರಕ್ಷಕ' ಎಂಬ ಪ್ರಶಂಸೆಗೆ ಪಾತ್ರನಾದನೆಂದೂ ಶ್ರವಣಬೆಳ್ಗೊಳದ ಮೂರು ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಪ್ರಾಯಶಃ ಅದೇ ವ್ಯಾಧಿ ಮರುಕಳಿಸಿ ಬಲ್ಲಾಳನು ಅಕಾಲ ಮೃತ್ಯುವಿಗೆ ತುತ್ತಾದನು. ಒಂದನೆಯ ಬಲ್ಲಾಳನು ಬಾಲ್ಯದಲ್ಲಿ ಜೈನ ಗುರುಗಳ ಪ್ರಭಾವದಲ್ಲಿ ಬೆಳೆ ದರೂ ಕೊನೆಗೆ ಶೈವನಾಗಿ ಶಿವದೇವಾಲಯಕ್ಕೆ ಜಮೀನುಗಳನ್ನು ದಾನ ಮಾಡಿದನು. ಅವನಿಗೆ ಪುತ್ರ ಸಂತಾನವಿರಲಿಲ್ಲವಾಗಿ 1103 ರಲ್ಲಿ ಕುಟುಂಬದ

ಆಪ್ತ ಅನುಯಾಯಿಯ ಮೂವರು ಸುಲಕ್ಷಣ ಕನ್ಯೆಯರನ್ನು ಒಂದೇ ದಿನ ಮದುವೆಯಾದನೆಂದು ಹೇಳಲಾಗಿದೆ.

ವಿಷ್ಣುವರ್ಧನ (ಬಿಟ್ಟಿದೇವ) (ಕ್ರಿ. ಶ. 1109–1141)

ಒಂದನೆಯ ಬಲ್ಲಾಳನ ನಂತರ ಸಿಂಹಾಸನವನ್ನೇರಿದ ಬಿಟ್ಟಿದೇವ ಅಥವಾ ವಿಷ್ಣುವರ್ಧನನು ಹೊಯ್ಸಳರ ಅರಸರಲ್ಲೆಲ್ಲಾ ಅತ್ಯಂತ ವರ್ಣರಂಜಿತ ವ್ಯಕ್ತಿಯೆನ್ನಬಹುದು. ಶ್ರವಣಬೆಳ್ಗೊಳದ ಅನೇಕ ಶಾಸನಗಳು ಅವನನ್ನು ಹೊಗಳಿ ಅಟ್ಟಕ್ಕೇರಿಸಿವೆ. ತ್ರಿಭುವನಮಲ್ಲ, ಪಂಚಮಹಾಶಬ್ದ ಮಹಾಮಂಡಲೇಶ್ವರ, ದ್ವಾರಾವತಿ ಪುರಾವಧೀಶ್ವರ, ಯಾದವಕುಳತಿಲಕ, ಸರ್ವಜ್ಞ ಚೂಡಾಮಣಿ, ಭುಜಬಲ–ವೀರ–ಗಂಗ, ತಲಕಾಡುಕೊಂಡ, ನೊಳಂಬವಾಡಿಕೊಂಡ, ಉಚ್ಛಂಗಿಕೊಂಡ ಮುಂತಾದ ಬಿರುದುಗಳು ಅವನಿಗೆ ಇದ್ದುವು.

ಬಿಟ್ಟಿದೇವನ ಮೊದಲ ಶಾಸನವು 1109 ರಲ್ಲಿ ಪ್ರಕಟವಾಗಿರುವುದರಿಂದ ಅವನು ಅದೇ ವರ್ಷ ಅಥವಾ ಅದರ ಹಿಂದಿನ ವರ್ಷವೇ ಅರಸನಾದನೆಂದು ನಂಬಲಾಗಿದೆ.

ರಾಜ್ಯ ವಿಸ್ತರಣಾಕಾಂಕ್ಷಿಯಾಗಿದ್ದ ವಿಷ್ಣುವರ್ಧನನ ಆಳಿಕೆಯ ಮೊದಲ ಎರಡು ದಶಕಗಳಲ್ಲಿ ಅವನ ದಿಗ್ವಿಜಯ ದುಂದುಭಿಯು ದಿಗಂತದಲ್ಲೆಲ್ಲಾ ಮೊಳಗಿತು. ಅವನ ದಿಗ್ವಿಜಯ ಯಾತ್ರೆಯ ವ್ಯಾಪ್ತಿ ಎಷ್ಟಿತ್ತೆಂದರೆ ಚಿಕ್ಕ ಮಗಳೂರಿನ ಶಾಸನದಲ್ಲಿ ಸಮುದ್ರಗಳಿಗಾಗಿ ದೊಡ್ಡ ಕೆರೆಗಳನ್ನೂ ಪರ್ವತಗಳಿಗಾಗಿ ಭವ್ಯ ದೇವಾಲಯಗಳನ್ನೂ ಒಳಗೊಂಡಿರುವ ನೂತನ ಜಗತ್ತನ್ನು ಸೃಷ್ಟಿಸುತ್ತಿರುವ ಬ್ರಹ್ಮನು ತಾನೆಂದು ಹೇಳಿಕೊಂಡಿದ್ದಾನೆ. (CM. 160, E. C. VI).

ಬೇಲೂರಿನ ಶಾಸನವೂ ವಿಷ್ಣುವರ್ಧನನ ದಿಗ್ವಿಜಯದ ಬಗ್ಗೆ ವಿವರಗಳನ್ನು ಕೊಟ್ಟಿದೆ. (Bl. 58, E. C. V)

ವಿಷ್ಣುವರ್ಧನನು ತನ್ನ ರಾಜ್ಯದಲ್ಲಿದ್ದ ಸಾಧನ ಸಾಮಗ್ರಿಗಳನ್ನೆಲ್ಲಾ ಉಪಯೋಗಿಸಿಕೊಂಡು ಪೂರ್ವಸಿದ್ಧತೆಯೊಡನೆ ತನ್ನ ದಂಡಯಾತ್ರೆಗಳನ್ನು ಪ್ರಾರಂಭಿಸಿದನು.

ಮೊದಲು ತನ್ನ ರಾಜಧಾನಿಯಿಂದ ಪೂರ್ವಾಭಿಮುಖವಾಗಿ ಹೊರಟು ನಂಗಲಿಯನ್ನು ತಲುಪಿ, ಆಧುನಿಕ ಕೋಲಾರದ ಪಶ್ಚಿಮ ಪ್ರದೇಶದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದನು.

ನಂಗಲಿ ಮತ್ತು ಹೊಯ್ಸಳ ಪ್ರದೇಶಗಳ ನಡುವೆ ಇದ್ದ ಮುರುಸು ನಾಡನ್ನು ಸ್ವಲ್ಪ ಕಾಲ ತನ್ನ ಆಡಳಿತಕ್ಕೆ ಒಳಪಡಿಸಿದ್ದನು.

ನಂತರ ಚಾಲುಕ್ಯರತ್ತ ವಿಷ್ಣುವರ್ಧನನ ದೃಷ್ಟಿ ಹರಿಯಿತು. ಅವರ ಮಾಂಡಲಿಕ ಅಥವಾ ಸಾಮಂತನಾಗಿದ್ದ ಪಾಂಡ್ಯ ಅರಸನ ಉಚ್ಚಂಗಿಯನ್ನು ಗೆದ್ದು ಉಚ್ಚಂಗಿಕೊಂಡ ಎಂಬ ಬಿರುದನ್ನು ಧರಿಸಿದನು.

ಉಚ್ಚಂಗಿಯನ್ನು ನೆಲೆಯನ್ನಾಗಿ ಮಾಡಿಕೊಂಡು ತುಂಗಭದ್ರಾ ನದಿಯನ್ನು ಹಾದು ಹಾನುಂಗಲ್ಲನ್ನು ಪ್ರವೇಶಿಸಿದನು. ಅಲ್ಲಿಯೇ ಕೆಲವು ತಿಂಗಳು ಕಾಲ ತಂಗಿ, ರಟ್ಟರ ಅಧೀನದಲ್ಲಿದ್ದ ಹಲಸಿಗೆಯನ್ನು ಮುತ್ತಲು ಸೈನ್ಯವನ್ನು ಕಳುಹಿಸಿದನು. ಈ ಘಟನೆಗಳಾದ ನಂತರ ದೋರಸಮುದ್ರಕ್ಕೆ ಹಿಂತಿರುಗಿದನು.

ಬನವಾಸಿಯ ಬಳಿ ಹೊಯ್ಸಳ ಸೇನೆಯು ಬೀಡುಬಿಟ್ಟಿದ್ದ ಸುಸಂಧಿಯನ್ನು ಸಾಧಿಸಿ, ಆಳ್ವಖೇಡದ ಆಳುಪರು (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳುತ್ತಿದ್ದವರು) ಸಾಂತಳಿಗೆ ಸಾವಿರವನ್ನು ಮುತ್ತಿದರು. ಕೆಲವು ಸಣ್ಣಪುಟ್ಟ ಅರಸರು ಅಥವಾ ಪಾಳೆಯಗಾರರು ಜಾನುವಾರುಗಳ ಅಪಹರಣ ಮಾಡಿದರು. ಇಂತಹ ಕಿರುಕುಳಗಳನ್ನು ಎದುರಿಸಬೇಕಾಗಿ ಬಂದ ವಿಷ್ಣುವರ್ಧನನು ಆಳುಪರ ಮೇಲೆ ತನ್ನ ಕೋಪವನ್ನು ತೀರಿಸಿಕೊಂಡನೆಂದು ಆ ಮೇಲಿನ ಶಾಸನಗಳು ತಿಳಿಸುತ್ತವೆ. ರಾಜ್ಯದ ಪಶ್ಚಿಮದಲ್ಲಿದ್ದ ಪುಟ್ಟ ಪ್ರಮಾಣದ ಬಂಡಾಯವೊಂದನ್ನು ಅವನು ಮಟ್ಟಹಾಕಬೇಕಾಯಿತು.

ತನ್ನ ದಳಪತಿ ಪುಣಿಸ ದಣ್ಣಾಯಕನೊಂದಿಗೆ ಮಲೆಯಾಳದತ್ತ ದಂಡೆತ್ತಿ ಹೋದನು.

1117 ರ ಚಾಮರಾಜ ನಗರದ ಶಾಸನದಲ್ಲಿ (Ch. 83, E. C.) ತಾನು ತೋಡರನ್ನು ಬೆದರಿಸಿರುವುದಾಗಿಯೂ, ಕೊಂಗರನ್ನು ತಲೆಮರಿಸಿಕೊಳ್ಳುವಂತೆ ಮಾಡಿದುದಾಗಿಯೂ ಪೊಲುವರನ್ನು ವಧಿಸಿದುದಾಗಿಯೂ

ಮಲೆಯಾಳಿಗಳನ್ನು ಕೊಂದು, ಕಾಳನೆಂಬ ಅರಸನಿಗೆ ಭೀತಿಯನ್ನುಂಟು ಮಾಡಿ, ನೀಲಾದ್ರಿ (ನೀಲಗಿರಿ) ಯನ್ನು ವಿಜಯಲಕ್ಷ್ಮಿಗೆ ಅರ್ಪಿಸಿದುದಾಗಿಯೂ ಪುಣಿಸನು ಹೇಳಿಕೊಂಡಿದ್ದಾನೆ. ಅದಾದ ನಂತರ ಅವನು ಬಯಲು ನಾಡಿಗೆ ಹಿಂತಿರುಗಿದನು.

ಕ್ರಿ. ಶ. 1115 ಅಥವಾ 1116 ರಲ್ಲಿ ವಿಷ್ಣುವರ್ಧನನು ಕೊಂಗಾಳ್ವ ರಾಜಪುತ್ರಿ ಚಂದಲಾದೇವಿಯನ್ನು ವಿವಾಹವಾಗುವುದರ ಮೂಲಕ ಕೊಂಗಾಳ್ವರೊಂದಿಗೆ ರಾಜಿ ಮಾಡಿಕೊಂಡನು.

ಮಲೆಯಾಳದ ಮೇಲಿನ ದಂಡಯಾತ್ರೆಯಾದ ಮೇಲೆ ದುಮ್ಮೆ ಎಂಬ ಸ್ಥಳದಲ್ಲಿ ಪಾಂಡ್ಯರ ಸೇನೆಯನ್ನು ಹೊಯ್ಸಳರು ಎದುರಿಸಬೇಕಾಯಿತು. ದೀರ್ಘಕಾಲದ ಈ ಹೋರಾಟದ ವಿಜಯವು ನಿರ್ಣಾಯಕವಾಗಿರಲಿಲ್ಲ.

ಮುಳವಳ್ಳಿ ಶಾಸನವು ಹೊಯ್ಸಳರ ದಳಪತಿ ಗಂಗರಾಜನು ಚೋಳರಿಂದ ಮತ್ತೆ ತಲೆಕಾಡನ್ನು ವಶಪಡಿಸಿಕೊಂಡಿದುದನ್ನು ಬಣ್ಣಿಸಿದೆ. (Mi. 32, E.C. III) ಆಗ ಚೋಳರ ಮಾಂಡಲಿಕನಾಗಿದ್ದ ಇಡಿಯಮ ಅಥವಾ ಆಡಿಯಮನು ತಲೆಕಾಡಿನ ಸೇನೆಯ ದಳಪತಿಯಾಗಿದ್ದನಂತೆ. ಗಂಗರಾಜನು ಶರಣಾಗತನಾಗುವಂತೆ ಆಡಿಯಮನಿಗೆ ತಿಳಿಸಿದಾಗ, ಅವನು ತಿರಸ್ಕಾರದಿಂದ, "ನಿನಗೆ ಸಾಮರ್ಥ್ಯವಿದ್ದರೆ ಹೋರಾಡಿ, ತಲೆಕಾಡನ್ನು ವಶಪಡಿಸಿಕೋ" ಎಂದನಂತೆ. ಯುದ್ಧವಾಗಿ, ತಲೆಕಾಡನ್ನು ವಶಪಡಿಸಿಕೊಂಡಿದುದಲ್ಲದೆ ಗಂಗರಾಜನು ಪಲ್ಲವರ ನರಸಿಂಗವರ್ಮನನ್ನೂ ಚೋಳ–ಮಾಂಡಲಿಕರನ್ನೂ ಓಡಿಸಿ, ಅವರು ಗಂಗರಿಂದ ಕಿತ್ತುಕೊಂಡಿದ್ದ ಅನೇಕ ಜಿಲ್ಲೆಗಳನ್ನು ವಶಪಡಿಸಿಕೊಂಡನಂತೆ. ಈ ಪ್ರಕರಣದಿಂದಾಗಿ ವಿಷ್ಣುವರ್ಧನನಿಗೆ 'ತಲಕಾಡು–ಕೊಂಡ' ಎಂಬ ಬಿರುದು ಬಂದಿತು.

ತಲಕಾಡು ಕೋಟೆಯ ಆಕ್ರಮಣ ಕಾಲದಲ್ಲಿ ದಾಮೋದರ ಎಂಬಾತನು ಕಾಂಚಿಯ ಕಡೆ ಪಲಾಯನ ಮಾಡಿದನು. ವಿಷ್ಣುವರ್ಧನನ ಸೇನೆಯೂ ಕಾಂಚಿಯನ್ನು ಪ್ರವೇಶಿಸಿತು. ವಿಷ್ಣುವರ್ಧನನ್ನು ತಡೆಯಲು ಚೋಳರ ಕುಲೋತ್ತುಂಗನು ಅಸಮರ್ಥನಾಗಿದ್ದನು. ಅಲ್ಲಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿದ್ದ ಕೋಲಾಲಪುರ (ಕೋಲಾರ) ಮತ್ತು ನಂಗಲಿಗಳನ್ನು ವಿಷ್ಣುವರ್ಧನನು ಪುನರ್ವಶಪಡಿಸಿಕೊಂಡನು.

ಕೋಲಾರಕ್ಕೆ ಸ್ವಲ್ಪ ದೂರದಲ್ಲಿರುವ ಹೆಂಜೇರುವಿನ ಕಡೆಗೆ ಧಾವಿಸುತ್ತಿದ್ದಾಗ ಸಾದಲಿ ಪಟ್ಟಣವನ್ನು ಹೊಯ್ಸಳ ಅರಸನು ವಶಪಡಿಸಿಕೊಂಡನು. ಚೋಳರ ಮುಖ್ಯ ಪಟ್ಟಣಗಳಲ್ಲೊಂದಾಗಿದ್ದ ರೊಡ್ಡಂ ಎಂಬುದನ್ನೂ ವಶಪಡಿಸಿಕೊಂಡಿರಬೇಕೆಂದು ಡೆರೆಟ್‌ಅವರು ಬರೆದಿದ್ದಾರೆ. ಇರುಂಗೋಳನೆಂಬುವನು ಶರಣಾಗತನಾದನು.

ಈ ಮಧ್ಯೆ ಚೋಳರ ಕಡೆಯವರು ತಲಕಾಡು ಪ್ರದೇಶದಲ್ಲಿ ಅಶಾಂತಿಯನ್ನುಂಟುಮಾಡಲು ಪ್ರಯತ್ನಿಸುತ್ತಿದುದರಿಂದ ವಿಷ್ಣುವರ್ಧನನು ಅಲ್ಲಿಗೆ ಧಾವಿಸಿದನು.

ಕೋಲಾರದ ಸುತ್ತಲಿನ ಪ್ರದೇಶದ ಉಸ್ತುವಾರಿಯನ್ನು ವಿಷ್ಣುವರ್ಧನನ ತಮ್ಮನಾದ ಉದಯಾದಿತ್ಯನು ನೋಡಿಕೊಳ್ಳುತ್ತಿದ್ದನು. ಅವನು ಹಳೆಯ ಚೋಳ ಜಿಲ್ಲೆಗಳಿಂದ ಕಂದಾಯವನ್ನು ವಸೂಲು ಮಾಡುತ್ತಿದ್ದನು. ವಿಷ್ಣುವರ್ಧನನ ಮಗನಾದ ಬಲ್ಲಾಳನು ತನ್ನ ತಂದೆಯ ದಿಗ್ವಿಜಯದ ಕಾಲದಲ್ಲಿ ದೋರಸಮುದ್ರದ ವ್ಯವಹಾರಗಳನ್ನು ಗಮನಿಸುತ್ತಿದ್ದನು. ಮುಂದೆ ಅವನು ಅಕಾಲ ಮರಣವನ್ನಪ್ಪಿದನು.

1117 ರ ತಲಕಾಡಿನ ಮೇಲಿನ ವಿಜಯದಿಂದಲೇ ಹೊಯ್ಸಳರ ಘನತೆ ಹೆಚ್ಚಿತಷ್ಟೇ ಅದಕ್ಕೂ ಮಿಗಿಲಾದ ಕೀರ್ತಿ 1118 ರಲ್ಲಿ ವಿಷ್ಣುವರ್ಧನನಿಗೆ ಲಭಿಸಿತು. ಆ ವರ್ಷ ಚಾಲುಕ್ಯರ ಸೈನ್ಯವನ್ನು ಕಣ್ಣೇಗಾಲದ ಬಳಿ ಪರಾಭವಗೊಳಿಸಲಾಯಿತು. ಆಗ ನಡೆದ ಘಟನೆಯೊಂದನ್ನು ಶ್ರವಣಬೆಳ್ಗೊಳದ ಶಾಸನವೊಂದು ವರ್ಣಿಸಿದೆ. (No. 388, E. C. II). ಚಾಲುಕ್ಯ ಸೇನೆಯನ್ನು ಸೋಲಿಸಿದ ಗಂಗರಾಜನು ತನ್ನ ಸ್ವಾಮಿಯಾದ ವಿಷ್ಣುವರ್ಧನನಿಗೆ ಯುದ್ಧಭೂಮಿಯಲ್ಲಿ ಶತ್ರುಗಳಿಂದ ಕಸಿದುಕೊಂಡ ವಾಹನಗಳನ್ನೂ ವಸ್ತುಗಳನ್ನೂ ಕಾಣಿಕೆಯಾಗಿ ನೀಡಿದಾಗ ಸುಪ್ರೀತನಾದ ರಾಜನು ಬೇಕಾದ ವರವನ್ನು ಕೇಳುವಂತೆ, ತಿಳಿಸಿದನಂತೆ. ಆಗ ಗಂಗರಾಜನು ಪರಮ ಎಂಬ ಹಳ್ಳಿಯನ್ನು ಅರಸನಿಂದ ಪಡೆದು ಅದನ್ನು ತನ್ನ ತಾಯಿಯಾದ ಪೋಚಲದೇವಿ ಮತ್ತು ಪತ್ನಿಯಾದ ಲಕ್ಷ್ಮೀದೇವಿಯರು ಕಟ್ಟಿಸಿದ್ದ ಜಿನದೇವಾಲಯಗಳಿಗೆ ದಾನವಾಗಿಕೊಟ್ಟನಂತೆ.

ತಲಕಾಡಿನ ಚೋಳ ಸಾಮಂತರನ್ನು ಸೋಲಿಸಿದ ಮೇಲೆ ಗೋವಿಂದ ವಾಡಿ ಎಂಬ ಗ್ರಾಮವನ್ನು ವಿಷ್ಣುವರ್ಧನನಿಂದ ಪಡೆದು ಗೊಮ್ಮಟೇಶ್ವರನ ಅರ್ಚನೆಗಾಗಿ ಅದನ್ನು ದಾನ ಮಾಡಿದನಂತೆ.

ಚಾಲುಕ್ಯರನ್ನು ಪರಾಭವಗೊಳಿಸಿದ ಹೊಯ್ಸಳ ಸೇನೆ ಅತಿಶೀಘ್ರವೇ ತುಂಗಭದ್ರೆಯ ಆಚೆಗಿದ್ದ ಕದಂಬರ ಪ್ರದೇಶಗಳನ್ನು ಮುತ್ತಿತು. ಕೆಲವು ಪಟ್ಟಣಗಳು ಹೊಯ್ಸಳರ ಕರಗತವಾದುವು. ಆದಾದ ನಂತರ ವಿಷ್ಣುವರ್ಧನನು ಉಚ್ಚಂಗಿಯ ಮೇಲೆ ಯಶಸ್ವಿಯಾಗಿ ದಾಳಿಮಾಡಿ ಬಳ್ಳಾರಿಗೆ ಸಮೀಪದಲ್ಲಿದ್ದ ಗೊಂದವಾಡಿ ಸ್ಥಳ ಎಂಬುದನ್ನು ವಶಪಡಿಸಿಕೊಂಡನು.

ಈ ಮಧ್ಯೆ ಪರ್ಮಾಡಿದೇವನಿಂದ ಮುಂತಾದ ಶತ್ರುಗಳು ಹೊಯ್ಸಳರಿಗೆ ಕಿರುಕುಳ ಕೊಟ್ಟರು. ಈ ದಾಳಿಗಳನ್ನೆಲ್ಲಾ ತಡೆಗಟ್ಟಿದ ವಿಷ್ಣುವರ್ಧನನು ಸಾಂತರರ ಮೇಲೆ ತನ್ನ ಕಣ್ಣನ್ನು ಹಾಯಿಸಿದನು. ಅವರಿಗೆ ಸೇರಿದ್ದ ಹುಮ್ಚ, ಅಂಧಾಸುರ, ಹೊಸಗುಂದ, ತಲೆಯೂರು ಮುಂತಾದುವುಗಳನ್ನು ವಶಪಡಿಸಿಕೊಂಡನು.

ಉತ್ತರದಲ್ಲಿ ವಿಷ್ಣುವರ್ಧನನ ವಿಜಯಯಾತ್ರೆಯ ದುರ್ಲಾಭ ಪಡೆದುಕೊಂಡ ವಿಕ್ರಮ ಚೋಳನು ಕೋಲಾರದ ಬಳಿಯ ಕೆಲವು ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡನು.

1120 ರಲ್ಲಿ ಶ್ರೀರಂಗಪಟ್ಟಣವನ್ನು ಕಟ್ಟಿಸಿದ ಉದಯಾದಿತ್ಯನು ಮೂರು ವರ್ಷಗಳ ನಂತರ ಕೆಲ್ಲವತ್ತಿಯಲ್ಲಿ ಸತ್ತನು. ಅವನು ಜೀವಂತವಾಗಿದ್ದಾಗಲೇ ಅವನ ಮಗಳಾದ ಏಚಲಾದೇವಿಯು ವಿಜಯಾದಿತ್ಯಮಂಗಲ ಅಥವಾ ಇಂದಿನ ಬೇತಮಂಗಲದಲ್ಲಿ ಗತಿಸಿದಳು. ಆಕೆಯ ಆತ್ಮಕ್ಕೆ ಶಾಂತಿ ದೊರೆಯಲು ಒಂದು ಹಳ್ಳಿಯನ್ನು ದಾನಮಾಡಿದ ಶಾಸನ ಬೇತಮಂಗಲದ ಕೆರೆಯ ಬಳಿ ದೊರೆತಿದೆ. ಉದಯಾದಿತ್ಯನು ಮಡಿದಾಗ ಆತನಿಗೆ ಮುಕ್ತಿ ದೊರೆಯಲೆಂಬ ಸದುದ್ದೇಶದಿಂದ ಗ್ರಾಮಗಳನ್ನು ದಾನ ಕೊಟ್ಟದುದಾಗಿ ಹಾಸನದ ಶಾಸನವೊಂದರಿಂದ ಗೊತ್ತಾಗುವುದು. (Hn. 102). ಉದಯಾದಿತ್ಯನು ತೀರಿಕೊಂಡ ಸಮಯದಲ್ಲಿ ಅವನ ಆಪ್ತ ಸೇವಕನೊಬ್ಬನು ಪ್ರಾಣತ್ಯಾಗ ಮಾಡಿದುದರಿಂದ ಆತನ ಕುಟುಂಬದವರಿಗೂ ಜೀವನೋಪಾಯಕ್ಕಾಗಿ ಭೂಮಿಯನ್ನು ದಾನ ಕೊಡಲಾಯಿತು.

ಉದಯಾದಿತ್ಯನ ಸಾವು ವಿಕ್ರಮ ಚೋಳನ ದುರಾಕ್ರಮಣಕ್ಕೆ ಅನು ಕೂಲವಾಯಿತು.

1125 ರಲ್ಲಿ ವಿಷ್ಣುವರ್ಧನನು ತಲಕಾಡಿನಲ್ಲಿ ಬೀಡುಬಿಟ್ಟಿದ್ದನು. ಆ ಹೊತ್ತಿಗಾಗಲೇ ವೀರಗಂಗ ಪೊಯ್ಸಳದೇವನು ಗಂಗವಾಡಿ 96,000 ವನ್ನು ಆಳುತ್ತಿದ್ದನೆಂದು ಶಾಸನಗಳು ಸಾರಿ ಹೇಳುತ್ತಿವೆ.

1128 ರಲ್ಲಿ ಹಾನುಂಗಲ್ ಕೋಟೆಯಲ್ಲಿ ಜರುಗಿದ ಪೂರ್ಣ ಪ್ರಮಾಣದ ಕದನದಲ್ಲಿ ಹೊಯ್ಸಳರು ನಿರತರಾಗಿದ್ದರು. ಹಾನುಂಗಲ್ಲಿನ ಕದಂಬರು ಮತ್ತು ಚಾಲುಕ್ಯರು 1129 ರಲ್ಲಿ ಹೊಯ್ಸಳ ಸೇನೆಯ ವಿರುದ್ಧ ಕತ್ತಿ ಮಸೆದಂತೆ ಕಾಣುವುದು. ವಿಜಯವು ಯಾರಿಗೂ ನಿರ್ಣಾಯಕವಾಗಿರಲಿಲ್ಲ. ಆ ವರ್ಷದ ಕೊನೆಯ ವೇಳೆಗೆ ವಿಷ್ಣುವರ್ಧನನು ದೋರಸಮುದ್ರಕ್ಕೆ ಹಿಂತಿರುಗಿದ್ದನು.

ಆ ವರ್ಷದ ಚಳಿಗಾಲಾನಂತರ ಉಚ್ಚಂಗಿಯ ಪಾಂಡ್ಯರೊಂದಿಗೂ ಕದಂಬರ ದಳಪತಿ ಮಸಣಯ್ಯನೊಂದಿಗೂ ವಿಷ್ಣುವರ್ಧನನ ಸೇನೆಯು ಹೋರಾಡಿತು. ವಿಷ್ಣುವರ್ಧನನ ದಳಪತಿಯು ಪಾಂಡ್ಯರ ಆನೆಗಳನ್ನೂ ಕದಂಬರ ಕುದುರೆಗಳನ್ನೂ ವಶಪಡಿಸಿಕೊಂಡು ಅವುಗಳನ್ನು ವಿಷ್ಣುವರ್ಧನನಿಗೆ ಒಪ್ಪಿಸಿದನು. ಮಸಣಯ್ಯನೂ ಸೋಲನ್ನು ಅನುಭವಿಸಬೇಕಾಯಿತು.

ಕದಂಬ ಮತ್ತು ಸಾಂತರ ಪ್ರದೇಶಗಳ ನಡುವೆ ಎಕ್ಕಲರಸಗಂಗ ಎಂಬ ಮಹಾಮಂಡಲೇಶ್ವರನಿಗೆ ವಿಷ್ಣುವರ್ಧನನು ಸಣ್ಣ ಪಾಳೆಯ ಪಟ್ಟೊಂದನ್ನು ನಿರ್ಮಿಸಿ, ಹೊಯ್ಸಳರ ಹಿತರಕ್ಷಣೆಗಾಗಿ ಕ್ರಮಗಳನ್ನು ಕೈಕೊಂಡನು. ಈ ವೇಳೆಗಾಗಲೆ ಸಾಂತರರೂ ಹೊಯ್ಸಳರೊಂದಿಗೆ ಮೈತ್ರಿಯಿಂದಿದ್ದರು.

ಇಷ್ಟೆಲ್ಲ ಸಂತಸದ ನಡುವೆ ವಿಷ್ಣುವರ್ಧನನು ಬಲ್ಲಾಳನ ಮರಣದಿಂದಾಗಿ ಪುತ್ರ ಶೋಕವನ್ನು ಅನುಭವಿಸಬೇಕಾಯಿತು. ಬಲ್ಲಾಳನ ನಿಧನದ ಇಸವಿ ಖಚಿತವಾಗಿ ಗೊತ್ತಾಗಿಲ್ಲ. ಆ ಘಟನೆಯು 1129--1133 ರ ಮಧ್ಯೆ ಯಾವಾಗಲೋ ಜರುಗಿರಬೇಕು. 1131 ರಲ್ಲಿ ಸುಪ್ರಸಿದ್ಧ ರಾಣಿ ಶಾಂತಲೆಯೂ ಸತ್ತಳು. ಆದರೆ 1133 ರ ವಸಂತ ಕಾಲದಲ್ಲಿ ವಿಷ್ಣುವರ್ಧ

ನನ ಪಿರಿಯರಸಿ ಲಕ್ಷ್ಮಿ ಮಹಾದೇವಿಯು ನರಸಿಂಹನೆಂಬ ಶಿಶುವಿಗೆ ಜನ್ಮ ನೀಡಿದುದರಿಂದ ಅರಸನ ಮನಸ್ಸಿಗೆ ಆಪ್ಯಾಯಮಾನವಾಯಿತು.

1131 ರಲ್ಲೂ 1133 ರಲ್ಲೂ ಮಸಣಯ್ಯನಿಗೂ ಹೊಯ್ಸಳರಿಗೂ ಘರ್ಷಣೆಯಾಗಿ ವಿಷ್ಣುವರ್ಧನನು ಕದಂಬರಿಗೆ ಸೇರಿದ ಪ್ರದೇಶಗಳನ್ನು ವಶಪಡಿಸಿಕೊಂಡನು. 1137 ರ ಅರಸೀಕೆರೆ ಶಾಸನವು ಒಂದು ಕಡೆ ಬಂಕಾಪುರವೂ ಮತ್ತೊಂದು ಕಡೆ ತಲವನಪುರವೂ ಹೊಯ್ಸಳರ ರಾಜಧಾನಿಗಳಾಗಿದ್ದವೆಂದೂ ವಿಷ್ಣುವರ್ಧನನು 'ತುಲಾ-ಪುರುಷ' ಎಂಬ ಧಾರ್ಮಿಕ ಕ್ರಿಯೆಯನ್ನು ಎಸಗಿದನೆಂದೂ ಬಣ್ಣಿಸಿದೆ. (Ak. 144, E. C. V)

ಚನ್ನರಾಯ ಪಟ್ಟಣದ ಶಾಸನಗಳೂ (Cn. 199 and 200) ವಿಷ್ಣುವರ್ಧನನು 1137 ರಲ್ಲಿ ಬಂಕಾಪುರದಲ್ಲಿದ್ದನೆಂದೂ ಚೆಂಗಾಳ್ವ ಅರಸನ ಪುರಾಣಿಕನಿಂದ ನಿರ್ಮಿಸಲ್ಪಟ್ಟಿದ್ದ ದೇವಾಲಯಕ್ಕೆ ದತ್ತಿ (grant) ಯನ್ನು ಬಿಟ್ಟು ಕೊಟ್ಟನೆಂದೂ ತಿಳಿಸಿವೆ.

ಬಳ್ಳಾರಿ, ಅನಂತಪುರ ಮೊದಲಾದ ಪ್ರದೇಶಗಳನ್ನೊಳಗೊಂಡಿದ್ದ ನೊಳಂಬವಾಡಿಯನ್ನೂ ಆಳುತ್ತಿದ್ದುದಾಗಿ ವಿಷ್ಣುವರ್ಧನನು ಹೇಳಿಕೊಂಡಿದ್ದಾನೆ.

1135 ರಲ್ಲಿ ತೈಲಪ ಕದಂಬನ ಮಗನಾದ ಮಲ್ಲಿಕಾರ್ಜುನನು ಹಾನುಂಗಲ್ ಕೋಟೆಯನ್ನು ಮತ್ತೆ ವಶಪಡಿಸಿಕೊಂಡು ಬಂಕಾಪುರದ ಸುತ್ತಮುತ್ತಲಿನಲ್ಲಿದ್ದ ಹೊಯ್ಸಳ ಅಧಿಕಾರಿಗಳನ್ನು ಕೆಣಕಲಾರಂಭಿಸಿದುದರಿಂದ, ವಿಷ್ಣುವರ್ಧನನು ಅವನೊಂದಿಗೆ ಹೋರಾಡಿ, ಹಾನುಂಗಲ್ಲನ್ನು ಪ್ರವೇಶಿಸಿ, ಅದನ್ನು ಸೂರೆ ಮಾಡಿದನು. 1137 ರಿಂದ 1139 ರ ವರೆಗೆ ವಿಷ್ಣುವರ್ಧನನು ಉಚ್ಚಂಗಿ ಅಥವಾ ಬಂಕಾಪುರಗಳಲ್ಲಿ ಬೀಡುಬಿಟ್ಟಿರಬಹುದೆಂದು ಶಾಸನಗಳಿಂದ ವ್ಯಕ್ತವಾಗುವುದು.

1140 ರಲ್ಲಿ ಪ್ರಾಯಶಃ ಗೋವಾದ ಅರಸನಾಗಿದ್ದ ಜಯಕೇಶಿಯೊಂದಿಗೆ ಕದನವಾಯಿತು. ಆದಾದನಂತರ ಬೆಳ್ವೊಲದಲ್ಲಿ ಸಮರವನ್ನು ಕೈಕೊಳ್ಳಲು ಹೊಯ್ಸಳ ಅರಸನು ಸನ್ನಾಹ ಮಾಡುತ್ತಿದ್ದನು. 1141 ರಲ್ಲಿ ಸ್ವಲ್ಪ ಕಾಲ ವಿಷ್ಣುವರ್ಧನನು ಹಾನುಂಗಲ್‌ನಲ್ಲಿ ಪತ್ನಿಯಾದ ಬಮ್ಮಲೆ

ಯೊಂದಿಗೆ ತಂಗಿದ್ದು, ನಂತರ ಅವಸಾನಕಾಲದಲ್ಲಿ ಬಂಕಾಪುರದಲ್ಲಿ ವಾಸಿಸು ತ್ತಿದ್ದನೆಂಬುದು ಸ್ಪಷ್ಟವಾಗಿದೆ.

ಚಿಕ್ಕ ಮಗಳೂರಿನ ಶಾಸನವೊಂದರ ಪ್ರಕಾರ ಬಿಟ್ಟದೇವ-ವಿಷ್ಣು-ವರ್ಧನನು 1141 ರಲ್ಲಿ ತನ್ನ ಕೊನೆಯುಸಿರನ್ನು ಎಳೆದನು. ಬೊಪ್ಪದೇವ ದಣ್ಣಾಯಕನು ಅರಸನ ಪಾರ್ಥಿವ ಶರೀರವನ್ನು ಮೂಡುಗೆರೆಗೆ ತಂದಾಗ ಆನೆ ಮತ್ತು ಭಂಡಾರಗಳಿಗಾಗಿ ಕಾಳಗವಾಗಿ ಅದರಲ್ಲಿ ಸತ್ತ ಗೌಡನೊಬ್ಬನಿಗಾಗಿ ನರಸಿಂಗದೇವನಿಂದ ತಳಿಗೆ ನಾಡು ಸಾಯಿರ ಭೂಮಿಯ ಒಂಭತ್ತು ಮಂದಿಯ ಪ್ರಭು ಗಾವುಂಡಗಳು ದತ್ತಿಯನ್ನು ಪಡೆದರು. (Cm. 96, E. C. VI).

ವಿಷ್ಣುವರ್ಧನನ ಆಳಿಕೆಯ ಕೊನೆಯ ದಿವಸಗಳಲ್ಲಿ ಉಂಟಾಗಿದ್ದ ಅಶಾಂತ ಪರಿಸ್ಥಿತಿಯನ್ನು ಈ ಘಟನೆಯು ಚೆನ್ನಾಗಿ ಪ್ರತಿಬಿಂಬಿಸುವುದು.

ವಿಷ್ಣುವರ್ಧನನ ವ್ಯಕ್ತಿತ್ವ ಮತ್ತು ಸಾಧನೆ

ಕಲ್ಯಾಣದ ಚಾಲುಕ್ಯರ ಒಂದು ಜಿಲ್ಲೆಯಂತಿದ್ದ ಹೊಯ್ಸಳ ನಾಡಿಗೆ ಸ್ವತಂತ್ರ ರಾಜ್ಯದ ಅಂತಸ್ತನ್ನು ಕೊಡಿಸಿದ ಶ್ರೇಯಸ್ಸು ವಿಷ್ಣುವರ್ಧನನಿಗೆ ಸಲ್ಲಬೇಕು. ಆದರೆ ಅದನ್ನು ಅವನು ಬಹಿರಂಗವಾಗಿ ಘೋಷಿಸಲಿಲ್ಲ. ತನ್ನ ಬಾಹುಬಲದಿಂದ ಅವನು ವಿಸ್ತರಿಸಿದ ರಾಜ್ಯವು ಪೂರ್ವದಿಕ್ಕಿನಲ್ಲಿ ಕೋಲಾರ ಜಿಲ್ಲೆಯ ಪೂರ್ವದ ಗಡಿಯವರೆಗೂ ದಕ್ಷಿಣದಲ್ಲಿ ಸೇಲಂ ಮತ್ತು ಕೊಯ-ಮತ್ತೂರು ವರೆಗೂ ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವರೆಗೂ ಉತ್ತರ ದಲ್ಲಿ ಕೃಷ್ಣಾನದಿಯವರೆಗೂ ಹಬ್ಬಿದ್ದಿತು.

ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೊಳಗಾದ ಬಿಟ್ಟದೇವನು ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನೆಂಬ ಹೆಸರಿನಿಂದ ಇತಿಹಾಸ ದಲ್ಲಿ ಅಮರನಾದನು. ಮೊದಲು ಹೊಯ್ಸಳರ ರಾಜಧಾನಿಯಾಗಿದ್ದ ತೊಂಡನೂರಿನಲ್ಲಿ (ಈಗಿನ ತೊಣ್ಣೂರು) ಶ್ರೀರಾಮಾನುಜಾಚಾರ್ಯರು ಬಿಟ್ಟದೇವನಿಗೆ ವೈಷ್ಣವ ದೀಕ್ಷೆಕೊಟ್ಟು ವಿಷ್ಣುವರ್ಧನನೆಂಬ ಹೆಸರಿಟ್ಟರೆಂದು ಮೈಸೂರು ಗೆಜೆಟಿಯರ್ ಎಂಬ ಗ್ರಂಥದಿಂದ ಗೊತ್ತಾಗುವುದು. ಶ್ರೀರಾಮಾ

ನುಜರು ಬಿಟ್ಟಿದೇವನ ಪುತ್ರಿಯಾದ ಪದ್ಮಾ ಎಂಬುವಳ ಮಾನಸಿಕರೋಗವನ್ನು ನಿವಾರಿಸಿದರೆಂದೂ ದಂತ ಕಥೆಯಿದೆ.

ವೈಷ್ಣವ ಧರ್ಮವನ್ನು ಸ್ವೀಕರಿಸಿದ ಮೇಲೂ ವಿಷ್ಣುವರ್ಧನನು ಜೈನ ಧರ್ಮಕ್ಕೆ ಮೊದಲಿನ ಪ್ರೋತ್ಸಾಹವನ್ನೇ ನೀಡುತ್ತಿದ್ದುದು ಗಮನಾರ್ಹವಾಗಿದೆ.

ವಿಷ್ಣುವರ್ಧನನ ಆಳಿಕೆಯಲ್ಲಿ ದೇವಾಲಯಗಳ ನಿರ್ಮಾಣದ ಮೂಲಕ ವಾಸ್ತು ಶಿಲ್ಪ ಮತ್ತು ಮೂರ್ತಿಶಿಲ್ಪಕಲೆಗಳ ಬೆಳವಣಿಗೆಗೆ ನವಚೈತನ್ಯ ದೊರಿಯಿತು. ಬೇಲೂರಿನ ಚೆನ್ನಕೇಶವ ದೇವಾಲಯವನ್ನೂ, ಕಪ್ಪೆ ಚೆನ್ನಿಗರಾಯನ ದೇವಾಲಯವನ್ನೂ ಸ್ವತಃ ರಾಜಕುಟುಂಬವೇ ಕಟ್ಟಿಸಿತು. ದೊಡ್ಡ ಗದ್ದವಳ್ಳಿಯಲ್ಲಿನ ಮಹಾಲಕ್ಷ್ಮಿದೇವಾಲಯವನ್ನು 1113 ರಲ್ಲಿ ಶ್ರೀಮಂತ ವರ್ತಕರಾರೋ ಕಟ್ಟಿಸಿದರು. ಮಾರಲೆಯಲ್ಲಿರುವ ಕೇಶವ ಮತ್ತು ಸಿದ್ಧೇಶ್ವರ ದೇವಾಲಯಗಳನ್ನೂ ತಲಕಾಡಿನ ಕೀರ್ತಿ ನಾರಾಯಣ ದೇವಾಲಯವನ್ನೂ ವಿಷ್ಣುವರ್ಧನನ ಆಳಿಕೆಯಲ್ಲಿ ನಿರ್ಮಿಸಲಾಯಿತು.

ವಿಷ್ಣುವರ್ಧನನ ಆಸ್ಥಾನದಲ್ಲಿ ಸಾಹಿತ್ಯಕ್ಕೂ ಪ್ರೋತ್ಸಾಹ ದೊರಿಯಿತು. ನಾಗಚಂದ್ರ, ರಾಜಾದಿತ್ಯ, ವಿಷ್ಣುದಂಡಾಧಿಪ, ಕಂತಿ ಮುಂತಾದವರು ಈ ಕಾಲದವರು. ರಾಜಾದಿತ್ಯನು ಕ್ಷೇತ್ರ–ಗಣಿತ, ವ್ಯವಹಾರ ಗಣಿತ, ಲೀಲಾವತಿ ಮುಂತಾದ ಪದ್ಯ ರೂಪದ ಗಣಿತ ಗ್ರಂಥಗಳನ್ನು ರಚಿಸಿದನು.

ವಿಷ್ಣುವರ್ಧನನ ಪತ್ನಿಯರು

ವಿಷ್ಣುವರ್ಧನನ ಪತ್ನಿಯರಲ್ಲಿ ಶಾಂತಲದೇವಿ ಎಂಬ ಹೆಸರಿನ ಈರ್ವರು ಸ್ತ್ರೀಯರೂ ಬಮ್ಮಲದೇವಿ ಮತ್ತು ಲಕ್ಷ್ಮಿಮಹಾದೇವಿಯರೂ ಉಲ್ಲೇಖನಾರ್ಹರು. ಇವರುಗಳಲ್ಲದೆ ದೇವಕಿದೇವಿ, ರಾಜಲದೇವಿಯರೆಂಬ ರಾಣಿಯರ ಹೆಸರುಗಳೂ ಕಡೂರಿನ ಶಾಸನಗಳಲ್ಲಿ ಬಂದಿವೆ.

ಹಿರಿಯ ರಾಣಿಯಾಗಿದ್ದ ಶಾಂತಲದೇವಿಯೂ ನಾಟ್ಯರಾಣಿಯೂ ಆಗಿದ್ದಳು.

1135 ರ ಹಾಸನದ ಶಾಸನದ ಪ್ರಕಾರ ಕಿರಿಯ ಶಾಂತಲೆಯು ಕೇತ ನಾಯಕನೆಂಬುವನ ಪುತ್ರಿ. ಆಕೆ ಅತ್ಯಂತ ಚಲುವೆಯಾಗಿದ್ದಳು. ಆ ವಿವಾಹದಿಂದಾಗಿ ಚಿಕ್ಕ ಶಾಂತಲೆ ಎಂಬ ಕುವರಿ ಜನಿಸಿದಳು. ಆದರೆ ಕೊಂಚ ಕಾಲದಲ್ಲಿಯೇ ತಾಯಿ, ಮಗಳಿಬ್ಬರೂ ಮಡಿದು, ಕೇತನಾಯಕನ ಪತ್ನಿ ಜಕ್ಕಿಯಜ್ಜಿಯು ಅವರ ನೆನಪಿಗಾಗಿ ಶಿವದೇವಾಲಯಗಳನ್ನು ಕಟ್ಟಿಸಿದಳು. (Hn. 89, E. C. V).

ರಾಜಕೀಯ ದೂರದೃಷ್ಟಿಯಿಂದ ಪಲ್ಲವ ವಂಶದ ರಾಜಕುಮಾರಿ ಬಮ್ಮಲೆಯನ್ನು ವಿಷ್ಣುವರ್ಧನನು ವಿವಾಹವಾಗಿದ್ದನು. ಬಮ್ಮಲಾದೇವಿಯು ಶಾಂತಲೆಯ ಸ್ಥಾನದಲ್ಲಿ ಪಟ್ಟದ ರಾಣಿಯಾದಳೆಂದು ನಾಗಮಂಗಲದ ಶಾಸನ ವೊಂದು ಹೇಳಿದೆ.

ಲಕ್ಷ್ಮಿ ಮ್ರಯು ವಿಷ್ಣುವರ್ಧನನ ಉತ್ತರಾಧಿಕಾರಿಯಾದ ಒಂದನೆಯ ನರಸಿಂಹನ ತಾಯಿ ಎಂಬುದನ್ನು ಈಗಾಗಲೇ ತಿಳಿಸಲಾಗಿದೆ.

ವಿಷ್ಣುವರ್ಧನನ ರಾಣಿಯರಲ್ಲೆಲ್ಲಾ ವಿಖ್ಯಾತಳಾಗಿರುವ ಹಿರಿಯ ಶಾಂತಲೆಯ ಬಗ್ಗೆ ಹೆಚ್ಚಿನ ವಿವರಗಳು ಶಾಸನಗಳಲ್ಲಿ ದೊರೆತಿವೆ.

ಶ್ರವಣಬೆಳ್ಗೊಳದ ಶಾಸನದ ಪ್ರಕಾರ, "ಶ್ರೀ ಧರ್ಮೇಶ್ವರ ದೇವಲಬ್ಧ ವರ ಪ್ರಸಾದೆ" ಯಾದ ಶಾಂತಲೆಯು ಮಾರಸಿಂಗಯ್ಯ ಮತ್ತು ಮಾಚಿಕಬ್ಬೆ ಯರ ಮಗಳು

ಬೇಲೂರಿನ ಶಾಸನದ ಪ್ರಕಾರ (Bl. 58) ಆಕೆಯು ಬಲಿಪುರದಲ್ಲಿ ಜನಿಸಿದಳು (ಬಲಿಪುರ ವರಕ್ಷೀರವಾರಾಶಿ ಜನಿತ ಕಮಳೆಯುಂ).

ಶ್ರವಣಬೆಳ್ಗೊಳದ ಮತ್ತೆರಡು ಶಾಸನಗಳು ಶಾಂತಲೆಯ ವ್ಯಕ್ತಿತ್ವ ವನ್ನೂ ಕಲಾಪ್ರೌಢಿಮೆಯನ್ನೂ ಈ ಕೆಳಗೆ ಕಂಡಂತೆ ವರ್ಣಿಸಿವೆ.

" ಆನೆಗರ್ದ ವಿಷ್ಣು ನ್ರಿಪನ ಮನೋನಯನ ಪ್ರಿಯೆ
ಚಳಾಕ ನೀಳಾಳಕಿ ಚಂದ್ರಾನನೆ ಕಾಮುನರತಿಯಲು
ತಾನೆಣೆ ತೊಣೆ ಸಂಸವಾನೆ ಶಾಂತಲದೇವಿ ॥

ಶಾಂತಲದೇವಿಯ ಗುಣಮಂ ಶಾಂತಲದೇವಿಯು ಸಮಸ್ತ ದಾನೋ-
ನ್ನತಿಯಂ

ಶಾಂತಲದೇವಿಯ ಶೀಳಮಚಿಂತ್ಯಂ ಭುವನೈಕ ಚಿಂತಾಮಣಿಯಂ ||
ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸತಸಹಸ್ರ
ಫಳ ಭೋಗ ಭಾಗಿಣೀ ದ್ವಿತೀಯ ಲಕ್ಷ್ಮೀ ಸಮಾನೆಯುಂ ||

ಸಕಳ ಕಳಾಗಮಾನೂನೆಯು | ಮಭಿನವ ರುಗ್ಮಿಣೀ
ದೇವಿಯುಂ | ಪತಿಹಿತ ಸತ್ಯಭಾಮೆಯಂ | ವಿವೇಕಯ್ಕ
ಬೃಹಸ್ಪತಿಯುಂ | ಪ್ರತ್ಯುತ್ಪನ್ನ ವಾಚಸ್ಪತಿಯುಂ |
ಮುನಿಜನ ವಿನೇಯಜ ನವಿನೀತೆಯುಂ | ಪತಿವ್ರತಾ
ಪ್ರಭಾವ ಪ್ರಸಿದ್ಧ ಶೀತೆಯುಂ | ಸಕಳ ವಂದಿಜನ ಚಿಂತಾ
ಮಣಿಯುಂ | ಉದ್ವೃತ್ತ ಸವತಿ ಗಂಧವಾರಣೆಯುಂ |
ಚತುಸ್ಸಮಯ ಸಮುದ್ಧರಣ ಕಾರಣೆಮಯ ಸಮುದಿತ
ಪ್ರಾಕಾರೆಯುಂ ” (E. C. II)

ಶಾಂತಲೆಯ ವೈವಾಹಿಕ ಜೀವನವನ್ನು ಕುರಿತು ಹಾಸನದ ಶಾಸನವು—

ಪತಿಭಕ್ತಿ ಛವದೆಯ್ವಳ್ಕಂ ಹಿತವೆಂಬುದನಜಂದು
ವಿನಯದಿಂ ವಿಷ್ಣು ಮಹೀಪತಿಯಂ ಮೆಚ್ಚಿಸುತೆ
ಮಹಾಸತಿ ಶಾಂತಲದೇವಿ ಪಟ್ಟಮಂ ಧರಿಯಿಸಿದಳ್....

ಎಂಬುದಾಗಿ ಬಣ್ಣಿಸಿದೆ. (Hn, 116, E. C. V)

ಅವಳ ಕೀರ್ತಿಯು ಎಲ್ಲಾ ದಿಕ್ಕುಗಳಲ್ಲಿಯೂ ಹರಡಿ ದಿಕ್ಕುಗಳೆಲ್ಲಾ ಬೆಳ್ಳಗಾಗಿದ್ದವೆಂದು (ಯಶಃ ಪ್ರಸರ ಪಾಂಡುರಿತ ದಿಕ್ಪಾಳ ಚೂಡಾಮಣಿಯು) ಶಾಸನವು ವರ್ಣಿಸಿದೆ.

ಜಿನಭಕ್ತಳಾಗಿದ್ದ ಶಾಂತಲೆಯು ಶ್ರವಣಬೆಳ್ಗೊಳದಲ್ಲಿ ಜೈನ ಗುಡಿಯೊಂದನ್ನು ಕ್ರಿ. ಶ. 1123 ರಲ್ಲಿ ಕಟ್ಟಿಸಿ, ಆದರ ವೆಚ್ಚಕ್ಕಾಗಿ ದುದಿವಟ್ಟನ್ನು ಕೊಟ್ಟಿದ್ದಳು. ಇವಳು ಪ್ರಭಾಚಂದ್ರ ಸಿದ್ಧಾಂತದೇವ ಎಂಬ ಗುರುವಿನ ಶಿಷ್ಯೆಯಾಗಿದ್ದಳು.

1123 ರ ಹಾಸನದ ಶಾಸನದ ಪ್ರಕಾರ ಒಮ್ಮೆ ವಿಷ್ಣುವರ್ಧನನು ಶಾಂತಲೆಗೆ ಶಾಂತಿಗ್ರಾಮ (ಈಗ ಹಾಸನದ ಹತ್ತಿರವಿರುವ ಗ್ರಾಮ) ವನ್ನು ಕೊಟ್ಟನು; ಅವಳು ಅದರ ಜಮೀನುಗಳನ್ನೆಲ್ಲಾ ಇನ್ನೂರಿಪ್ಪತ್ತು ಬ್ರಾಹ್ಮಣ ಕುಟುಂಬಗಳಿಗೆ ದಾನ ಮಾಡಿದಳು (Hn. 116, E. C. V) ಬೇಲೂರಿನ ಕಪ್ಪೆಚೆನ್ನಿಗರಾಯನ ದೇವಾಲಯವನ್ನು ಕಟ್ಟಿಸಿದವಳೂ ಶಾಂತಲೆಯೇ.

ಈಕೆಯು 1131 ರಲ್ಲಿ ಮೂರನೆಯ ವಿರೋಧಿಕ್ರುತು ಸಂವತ್ಸರದ ಚೈತ್ರ ಶುದ್ಧ ಪಂಚಮಿ ಸೋಮವಾರದಂದು ಶಿವಗಂಗೆಯ ತೀರ್ಥದಲು ಮುಡುಪಿ ಸ್ವರ್ಗ್ಗತೆಯಾದಳ್— ಎಂಬುದಾಗಿ ಶ್ರವಣಬೆಳ್ಗೊಳದ ಶಾಸನವು (No. 143, E. C: II) ತಿಳಿಸುತ್ತದೆ.

ಅನುಪಮ ಸಾನ್ತಲದೇವಿಯುು । ಮನುನಯದಿಂ
ತಂದೆ ಮಾರಸಿಂಗಯ್ಯನು ಮಿಂ ॥
ಬೆನೆ ಜನನಿ ಮಾಚಿಕಬ್ಬೆಯುು । ಮನಿಬರುಮೊಡನೊಡ್ತನೆ ಮುಡುಪಿ
ಸ್ವರ್ಗತರಾದರ್ ॥

—ಅಂದರೆ, ಶಾಂತಲೆಯ ಅಗಲಿಕೆಯನ್ನು ತಡೆಯಲಾರದ ಮಾತಾಪಿತೃಗಳು ಒಬ್ಬರ ಹಿಂದೆಯೇ ಮತ್ತೊಬ್ಬರೂ ಸತ್ತರಂತೆ.

ಕ್ರಿ. ಶ. 1140 ರಲ್ಲಿ ದೇವಕಿದೇವಿಯುು ವಿಷ್ಣುವರ್ಧನನ ಪಟ್ಟದರಸಿಯಾದಳೆಂಬುದಕ್ಕಿಂತ ಹೆಚ್ಚಿನ ಸಂಗತಿಗಳು ತಿಳಿದಿಲ್ಲ. ಕ್ರಿ. ಶ. 1141 ರಲ್ಲಿ ರಾಜಲದೇವಿಯುು ವಿಷ್ಣುವರ್ಧನನ ಪಿರಿಯರಸಿಯಾದಳೆಂದು ತಿಳಿಸಲಾಗಿದೆ. ಆಕೆಯುು ಬೊಮ್ಮಲಾದೇವಿಯ ಸೋದರಿಯೋ ದಾಯಾದಿಯೋ ಆಗಿದ್ದಳೆಂದು ವಿಲಿಯಂ ಕೊಯೆಲ್‌ಹೋ ಅವರು ಬರೆದಿದ್ದಾರೆ. ರಾಜಲಾದೇವಿಯ ಚಿಕ್ಕಪ್ಪನಾದ ಮಂಚಿ ಅರಸನು ಮಾಂಡಲಿಕನಾಗಿದ್ದನು.

ಒಂದನೆಯ ನರಸಿಂಹ (1142–1173)

ವಿಷ್ಣುವರ್ಧನನ ನಂತರ ಪಟ್ಟಕ್ಕೆ ಬಂದ ನರಸಿಂಹನನ್ನು ಬೇಲೂರು ಶಾಸನವು "ವಿಷ್ಣುವರ್ಧನ ದೇವಗಂ ಕ್ಷೀರಸಾಗರದೊಳೆಗೆದ ಲಕ್ಷ್ಮಿಕಾಂತೆಗೆಣೆಯನಿಸಿದ ಲಕ್ಷ್ಮಿದೇವಿಗಂ ಪುಟ್ಟಿದ ನೃಸಿಂಹ ನೃಪ " ಎಂದು ಬಣ್ಣಿಸಿದೆ.

ತಿರುಮಕೂಡಲು ನರಸೀಪುರದ ಶಾಸನವೊಂದು (Tn. 129, E. C. III) ವಿಷ್ಣುವರ್ಧನನ ಆಳಿಕೆಯಲ್ಲಿಯೇ ನರಸಿಂಹನು ದತ್ತಿಯನ್ನು ಕೊಟ್ಟಿರುವುದಾಗಿ ತಿಳಿಸಿರುವುದರಿಂದ ಅವನು ತಂದೆಯು ಜೀವಂತನಾಗಿದ್ದಾಗಲೇ ಯುವರಾಜನೆಂದು ಅಂಗೀಕರಿಸಲ್ಪಟ್ಟಿದ್ದನೆಂದು ಭಾವಿಸಬಹುದು.

ಕಡೂರಿನ ಶಾಸನವೊಂದು ನರಸಿಂಹನ ಮುಂದೆ ಮಲೆಯಾಳಿಗಳು, ಕೊಂಗು ಮತ್ತು ವಂಗ ಅರಸರು, ತುಳವರು, ಪಾಂಡ್ಯರು, ಪೌಂಡ್ರರು ಮತ್ತು ಆಂಧ್ರ ಅರಸರಲ್ಲದೆ ಯವನರೂ ಶಕರೂ ಸಿಂಹಳದ ಅರಸನೂ ನಡುಗುತ್ತಿದ್ದರೆಂದು ಅವನನ್ನು ಪ್ರಶಂಸಿಸಿದೆ. (Kd. 51, E. C. VI) ಇದನ್ನು ಕೇವಲ ಸಾಂಪ್ರದಾಯಿಕ ಸ್ತೋತ್ರವೆನ್ನಬಹುದು.

ಕ್ರಿ. ಶ. 1143 ರ ಅರಸೀಕೆರೆ ಶಾಸನವು ಸ್ಥಿರಗಂಭೀರ–ನೊಳಂಬನ ಹಿರಿಯ ರಾಣಿಯಾದ ಶ್ರೀದೇವಿಯನ್ನು ಅಪಹರಿಸುತ್ತಿದ್ದವರಿಂದ ನರಸಿಂಹನು ರಕ್ಷಿಸಿ ವೀರ ತಲಪ್ರಹಾರಿ ಎಂಬ ಬಿರುದನ್ನೂ ಚಾಲುಕ್ಯರ ಅರಸ ಆಹವಮಲ್ಲನ ಶಿಬಿರದಲ್ಲಿ ತನ್ನ ಧೈರ್ಯವನ್ನು ಪ್ರದರ್ಶನಮಾಡಿ ದೊಡ್ಡಂಕಬಡಿವ ಎಂಬ ಬಿರುದನ್ನೂ ಸಂಪಾದಿಸಿದುದಾಗಿ ತಿಳಿಸುತ್ತದೆ. (Ak. 55, E. C. V)

ವಿಷ್ಣುವರ್ಧನನು ಗತಿಸಿದ ಒಂದು ವರ್ಷದ ಒಳಗೆ ಬಂಕಾಪುರ ಮತ್ತು ಹಾನುಂಗಲ್ 500 ಗಳನ್ನು ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನು ಮತ್ತೆ ವಶಪಡಿಸಿಕೊಂಡನು. ಅವನ ಮಾಂಡಲಿಕನಾದ ಸಿಂದ ಅರಸನು ಹರಿಹರದ ವರೆಗೂ ತುಂಗಭದ್ರೆಯ ಎರಡು ಕಡೆಗಳಲ್ಲೂ ಇದ್ದ ಭೂಮಿಯನ್ನು ವಶಪಡಿಸಿಕೊಂಡನು.

1143 ರಲ್ಲಿ ಹೊಯ್ಸಳರು ಕದಂಬರ ಮೇಲೆ ದಾಳಿ ಮಾಡಲು ದೊಡ್ಡ ಸೇನೆಯೊಂದನ್ನು ಸಜ್ಜುಗೊಳಿಸಿದರು. ಮಾಹಳಿಗೆ ಎಂಬ ಪಟ್ಟಣದ ಮೇಲೆ ಮುತ್ತಿಗೆ ಹಾಕಲಾಯಿತು. ಅದು ಫಲಕಾರಿಯಾಗಲಿಲ್ಲ. ಮಸಣಯ ಎಂಬ ಹೆಸರಿನ ಮಹೋರ್ವ ಕದಂಬ ಅಧಿಕಾರಿಯು ಕೊಲ್ಲಲ್ಪಟ್ಟನು.

ಚೆಂಗಾಳ್ವರು ಮತ್ತೆ ತಲೆ ಎತ್ತಿ ನರಸಿಂಹನಿಗೆ ಕಿರುಕುಳ ಕೊಡಲಾರಂಭಿಸಿದರು. ಬೋಕಿಮಯ್ಯನೆಂಬ ದಳಪತಿಯ ನೇತೃತ್ವದಲ್ಲಿ ಹೊಯ್ಸಳ ಸೇನೆಯು ಚಂಗಾಲ್ವನೊಂದಿಗೆ ಹೋರಾಟದಲ್ಲಿ ಮಗ್ನವಾಯಿತು. ಹುಲಿಯೇರು ಮನೆತನದ ಗೋವಿದೇವನು ಈ ಕಾಳಗದಲ್ಲಿ ತನ್ನ ವೈಯಕ್ತಿಕ ಪರಾಕ್ರಮವನ್ನು ಪ್ರದರ್ಶಿಸಿದನು. ಆ ಪ್ರದೇಶದಲ್ಲಿ ಮತ್ತೆ ಶಾಂತಿ ನೆಲೆಸಿತು.

ರಾಜಧಾನಿಯ ಸಮೀಪದಲ್ಲಿ ಗೋ ಅಪಹರಣದ ಸಂಬಂಧದಲ್ಲುಂಟಾಗಿದ್ದ ಗಲಭೆಗಳನ್ನು ಅಡಗಿಸಬೇಕಾಯಿತು.

ಚಾಲುಕ್ಯ ತ್ರೈಲೋಕ್ಯಮಲ್ಲನ ಹೆಸರಿನಲ್ಲಿ ಬನವಾಸಿ 12,000 ಮತ್ತು ಹುಲಿಗೆರೆ 300 ಗಳನ್ನು ಆಳುತ್ತಿದ್ದ ಮಹಾದೇವರಸನೆಂಬುವನು ಉದ್ಧರೆಯ ಎಲ್ಲರಸಗಂಗನ ರಾಜ್ಯದಲ್ಲಿ ಗಲಭೆ ಎಬ್ಬಿಸಲಾಗಿ, ಇನ್ನೂ ಇಪ್ಪತ್ತೊಂದು ವರ್ಷಗಳ ಹರೆಯದ ನರಸಿಂಹನು 1154 ರಲ್ಲಿ ಉತ್ತರಾಭಿಮುಖವಾಗಿ ಹೊರಟು ಮಹಾದೇವರಸನ ಅಡಿಯಾಳೊಬ್ಬನೊಂದಿಗೆ ಹೋರಾಡಿ, ಕೊಂಚಕಾಲ ಬನವಾಸಿಯಲ್ಲಿ ತಂಗಿದ್ದು, ನಂತರ ಹಿಂತಿರುಗಿದನು.

ಕೃಷ್ಣರಾಜಪೇಟೆಯ ಶಾಸನವೊಂದು ನರಸಿಂಹನು ಮೈಲಳದೇವಿ ಎಂಬ ತನ್ನ ಪತ್ನಿಯೊಂದಿಗೆ ಬನವಾಸಿಯಲ್ಲಿದ್ದುದನ್ನು ಪ್ರಸ್ತಾಪಿಸಿದೆ. (K.P.E.C. IV) ಅವನ ಮಂತ್ರಿಯ ಹೆಸರು ಬಿಟ್ಟಿಯಣ ಅಥವಾ ಬಿಟ್ಟಿಗ. ಅವನು ಮೊದಲು ವಿಷ್ಣುವರ್ಧನನಿಗೂ ದಳಪತಿಯಾಗಿದ್ದಂತೆ ತೋರುವುದು. ತಾನು ನೀಲಾಚಲವನ್ನು ವಶಪಡಿಸಿಕೊಂಡು ಕಾಳನೆಂಬುವನ ಶಿರಚ್ಛೇದ ಮಾಡಿ ಕೊಂಗ ಸೈನ್ಯವನ್ನು ಪುಡಿಪುಡಿ ಮಾಡಿದುದಾಗಿ ಹೇಳಿಕೊಂಡಿದ್ದಾನೆ.

ಚೋಳರ ಕಾಟವನ್ನು ಎದುರಿಸಬೇಕಾಗಿ ಬಂದ ನರಸಿಂಹನು ಆ ಕಾರ್ಯವನ್ನು ಬೋಕಿಮಯ್ಯನಿಗೆ ಒಪ್ಪಿಸಿದನು. ಇದೇ ಸಮಯದಲ್ಲಿ ಕಲಚುರಿಯ ಬಿಜ್ಜಳನು ಚಾಲುಕ್ಯರ ಸಿಂಹಾಸನವನ್ನು ಅಪಹರಿಸಿ ರಾಜ್ಯವಾಳಲಾರಂಭಿಸಿದನು.

ಕ್ರಿ. ಶ. 1161 ರ ಬೇಲೂರಿನ ಶಾಸನವು ನರಸಿಂಹನು ಬಂಕಾಪುರದಲ್ಲಿ ಕದಂಬ ಸೇನೆ ಇದೆ ಎಂಬ ಸುದ್ದಿಯನ್ನು ಕೇಳಿ, ಆ ಸೇನೆಯನ್ನು ಧ್ವಂಸ

ಮಾಡಿ ಅದರ ಬಳಿ ಇದ್ದ ಎಲ್ಲಾ ವಸ್ತುಗಳನ್ನೂ ಗೆದ್ದನೆಂದು ತಿಳಿಸಿದೆ. (Bl. 193, E. C. V)

1162 ರಲ್ಲಿ ನರಸಿಂಹನು ಬಹಳ ಕಷ್ಟದಿಂದ ದೋರಸಮುದ್ರದೆಡೆಗೆ ನುಗ್ಗುತ್ತಿದ್ದ ಬಿಜ್ಜಳನ ಸೈನ್ಯವನ್ನು ಹಿಮ್ಮೆಟ್ಟಿಸಬೇಕಾಯಿತು.

ತುಂಗಭದ್ರಾ ಜಿಲ್ಲೆಗಳಲ್ಲಿ ರಾಜಕೀಯ ಪರಿಸ್ಥಿತಿಯು ಹೊಯ್ಸಳ ಸಾಮ್ರಾಜ್ಯ ವಿಸ್ತರಣೆಗೆ ಹದವಾಗಿದ್ದರೂ ಕೂಡ ನರಸಿಂಹನು ಪ್ರಾಯಶಃ ತನ್ನ ಅನಾರೋಗ್ಯದ ನಿಮಿತ್ತ ತೆಪ್ಪಗಿದ್ದನು. 1164 ರ ವೇಳೆಗೆ ನರಸಿಂಹನು ರಾಜ್ಯಭಾರದ ಹೊಣೆಯನ್ನು ತನ್ನ ಹಿರಿಯ ಪುತ್ರನಾದ ಎರಡನೆಯ ಬಲ್ಲಾಳನಿಗೆ ಒಪ್ಪಿಸಿದಂತೆ ಕಾಣುವುದು. ಪೂರ್ಣ ಅಧಿಕಾರವನ್ನು ಕೊಟ್ಟಿರಲಿಲ್ಲ. ಆದರೆ 1173 ರಲ್ಲಿ ಬಲ್ಲಾಳನು ಬಂಡಾಯವೆದ್ದಾಗ ವಿಧಿಯಿಲ್ಲದೆ ನರಸಿಂಹನು ಸಿಂಹಾಸನ ತ್ಯಾಗಮಾಡಿದನು.

ಒಂದನೆಯ ನರಸಿಂಹನು ವೈಷ್ಣವನಾಗಿದ್ದರೂ ಅನ್ಯಮತ ಸಹಿಷ್ಣುವಾಗಿದ್ದನು. ಇವನ ಕಾಲದಲ್ಲಿ ದ್ವಾರಸಮುದ್ರದ ಹೊಯ್ಸಳೇಶ್ವರ ದೇವಾಲಯ, ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯ, ಹುಲ್ಲೇಕೆರೆಯ ಕೇಶವ ದೇವಾಲಯ ಮತ್ತು ತೆಂಗಿನ ಘಟ್ಟದ ಹೊಯ್ಸಳೇಶ್ವರ ದೇವಾಲಯಗಳು ನಿರ್ಮಿಸಲ್ಪಟ್ಟವು.

ಎರಡನೆಯ ಬಲ್ಲಾಳ (ಕ್ರಿ. ಶ. 1173-1220)

ಒಂದನೆಯ ನರಸಿಂಹನ ಜ್ಯೇಷ್ಠ ಪುತ್ರನಾದ ಎರಡನೆಯ ಬಲ್ಲಾಳನು ಸುಮಾರು ಕ್ರಿ. ಶ. 1150 ರಲ್ಲಿ ಜನಿಸಿದನು. ಈತನ ತಾಯಿಯ ಹೆಸರು ಮಹಾದೇವಿ. ಕೌಮಾರ್ಯದಲ್ಲಿದ್ದಾಗಲೇ ಅವನು ಕಲಚುರಿಗಳ ವಿರುದ್ಧ ಹೋರಾಡಿದ್ದನೆಂದು ಹೇಳಲಾಗಿದೆ. 1164 ರಲ್ಲಿ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸಿದ ಬಲ್ಲಾಳನು 1165 ರಲ್ಲಿ 'ಕುಮಾರ' ಎಂಬ ಹೆಸರಿನಿಂದ ಅಧಿಕಾರವನ್ನು ಚಲಾಯಿಸುತ್ತಿದ್ದನು. 1172 ರ ವೇಳೆಗೆ ಪ್ರಾಪ್ತವಯಸ್ಕನಾಗಿದ್ದ ಬಲ್ಲಾಳನಿಗೆ ತಂದೆಯ ವಿದ್ಯಮಾನಗಳು ಸ್ವಲ್ಪವೂ ಸರಿಬೀಳಲಿಲ್ಲ. ಆ ಸಮಯದಲ್ಲಿ ಬನವಾಸಿ ಜಿಲ್ಲೆಯಲ್ಲಿ ಒಂದು ರೀತಿಯ ಆಂತರಿಕ ಯುದ್ಧದ

ಪರಿಸ್ಥಿತಿಯಿದ್ದಿತು. ಆದರೆ ಒಂದನೆಯ ನರಸಿಂಹನು ಅಲ್ಲಿ ಹಸ್ತಕ್ಷೇಪ ಮಾಡುವುದರಿಂದ ಬೇಸರಗೊಂಡಿದ್ದ ಬಲ್ಲಾಳನು 1173 ರಲ್ಲಿ ಹೇಗಾದರೂ ಮಾಡಿ ತನ್ನ ತಂದೆಯನ್ನು ಪದಚ್ಯುತಗೊಳಿಸಬೇಕೆಂದು ನಿರ್ಧರಿಸಿದನು. ಬಲ್ಲಾಳನ ಪ್ರಯತ್ನಕ್ಕೆ ಕೊಂಗಾಲ್ವ, ಚೆಂಗಾಲ್ವರ ಬೆಂಬಲವೂ ದೊರೆಯಿತು. ತಂತ್ರಪಾಲ ಹೆಮ್ಮಡಿ ಎಂಬುವನ ಸಹಾಯವೂ ದೊರೆಯಿತು. ಈ ಸಹಾಯ, ಸಹಕಾರಗಳ ಫಲವಾಗಿ ಸೈನ್ಯವನ್ನು ಕಟ್ಟಿದ ಬಲ್ಲಾಳನು ಹೊಯ್ಸಳ ರಾಜಧಾನಿಯತ್ತ ನುಗ್ಗಿದನು. ಕೊಂಚ ಘರ್ಷಣೆಯಾದ ಮೇಲೆ ನಿರ್ವಾಹ ವಿಲ್ಲವೆ ಒಂದನೆಯ ನರಸಿಂಹನು ಸಿಂಹಾಸನವನ್ನು ಬಿಟ್ಟುಕೊಟ್ಟನು.

ಕಡೂರಿನ ಶಾಸನಗಳ ಪ್ರಕಾರ 1173 ರ ಜುಲೈ 22 ರಂದು ವೀರ ಬಲ್ಲಾಳನಿಗೆ ದೋರಸಮುದ್ರದಲ್ಲಿ ಪಟ್ಟಾಭಿಷೇಕವಾಯಿತು, (Kd. 4, 136, 139 E. C. VI).

ಎರಡನೆಯ ಬಲ್ಲಾಳನು ಅರಸನಾದಾಗ ದೀರ್ಘಕಾಲದ ದುರ್ಬಲ ಆಡಳಿತದ ಫಲವಾಗಿ ಅಶಾಂತಿ ತಲೆದೋರಿದ್ದಿತು. 1174 ಮತ್ತು 1175 ರಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಬಲಪ್ರಯೋಗಮಾಡಬೇಕಾ ಯಿತು. ಹುಲಿಯೇರುವಿನ ಪೂರ್ವಕ್ಕೆ ಮೂವತ್ತು ಮೈಲಿ ದೂರದಲ್ಲಿದ್ದ ಸಿಬಿಯ ವಿರುದ್ಧ ಸ್ವತಃ ಅರಸನೇ ಸೈನ್ಯವನ್ನು ತೆಗೆದುಕೊಂಡು ಹೋಗ ಬೇಕಾಯಿತು.

ಈ ಆಂತರಿಕ ಸಮಸ್ಯೆಗಳ ನಿವಾರಣೆಯಾಗುವುದರೊಳಗಾಗಿ 1177 ರಲ್ಲಿ ಎರಡನೆಯ ಬಲ್ಲಾಳನು ಉಚ್ಚಂಗಿಯ ಮೇಲೆ ದಾಳಿ ಮಾಡಿದನು. ಪಾಂಡ್ಯ ಅರಸ ಕಾಮದೇವನನ್ನೂ ಆತನ ತಂದೆಯನ್ನೂ ಕೈಸೆರೆ ಹಿಡಿದು ದಲ್ಲದೆ ಭಂಡಾರವನ್ನೂ ವಶಪಡಿಸಿಕೊಂಡನು. ಆದರೆ ಕಾಮದೇವನು ಶರಣಾಗತನಾದುದರಿಂದ ಅವನನ್ನೇ ಮತ್ತೆ ಸಿಂಹಾಸನದ ಮೇಲೆ ಕೂರಿ ಸಿದನು.

ಈ ಮಧ್ಯೆ ಹೆಂಜೇರು ಚೋಳನ ಪ್ರದೇಶಕ್ಕೂ ತುಂಗಭದ್ರೆಯ ಪ್ರದೇಶಕ್ಕೂ ದಂಡಯಾತ್ರೆಗಾಗಿ ಪಡೆಗಳನ್ನು ಕಳುಹಿಸಿಕೊಡಲಾಯಿತು. ಚೋಳನೂ ಶರಣಾಗತನಾದನು. ಅದೇ ವರ್ಷ ಬನವಾಸಿ 12,000 ವನ್ನು ಮುತ್ತಿ ಅಪಾರ ನಷ್ಟವನ್ನುಂಟುಮಾಡಿದನು.

ಮರುವರ್ಷವೂ ವೀರ ಬಲ್ಲಾಳನ ವಿಜಯಯಾತ್ರೆ ಮುಂದುವರಿಯಿತು. ಅವನು ಹಾನುಂಗಲ್ಲನ್ನು ವಶಪಡಿಸಿಕೊಂಡು ಹಲಸಿಗೆ, ಬೇಳ್ವೊಲ ಪ್ರದೇಶಗಳನ್ನೆಲ್ಲಾ ಪ್ರವೇಶಿಸಿದನು. ಬಳ್ಳಿಗಾವೆಯ ಕೆಲವು ವ್ಯಕ್ತಿಗಳು ಮಲಪರೋಳ್ಗಂಡ ಹೊಯ್ಸಳ ವೀರ ಬಲ್ಲಾಳನಿಗೆ ಸೌಜನ್ಯ ತೋರಿಸಿ ಕೀರ್ತಿ ಪಡೆದರೆಂದು ಶಾಸನಗಳು ತಿಳಿಸುತ್ತವೆ.

ಈ ವಿಜಯಗಳ ಸುರಿಮಳೆಯಲ್ಲಿ ಅರಸನು ಮೈಮರೆತಿದ್ದಾಗ 1179 ರಲ್ಲಿ ಸಂಕಮ ಕಲಚುರಿಯ ದಾಳಿಯನ್ನೆದುರಿಸಬೇಕಾಗಿ ಬಂದು ಪರಾಭವದ ಮೇಲೆ ಪರಾಭವವನ್ನು ಅನುಭವಿಸಬೇಕಾಯಿತು. ಬಲ್ಲಾಳನು ತನ್ನ ರಾಜಧಾನಿಗೆ ಹಿಂತಿರುಗುವುದು ಅನಿವಾರ್ಯವಾಯಿತು. ಮುಂದಿನ ವರ್ಷ ಹಾನುಂಗಲ್ಲು ಮತ್ತೆ ಹೊಯ್ಸಳರ ಕೈಬಿಟ್ಟು ಹೋಗಿ ಸೋಮದೇವ ಕದಂಬನ ಆಳಿಕೆಯಲ್ಲಿದ್ದಂತೆ ಕಾಣುವುದು.

ಎರಡನೆಯ ಬಲ್ಲಾಳನು ಕಲಚುರಿ ಚಕ್ರವರ್ತಿಯೊಂದಿಗೆ ಜರುಗಿದ ಸಮರದಲ್ಲಿ ಸೋತರೂ ಅವನೊಂದಿಗೆ ಒಪ್ಪಂದ ಮಾಡಿಕೊಂಡು ರಾಜತಾಂತ್ರಿಕ ವಿಜಯವನ್ನು ಸಂಪಾದಿಸಿದನು. ತುಂಗಭದ್ರೆಯ ಪೂರ್ವ ಮತ್ತು ಪಶ್ಚಿಮದಲ್ಲಿದ್ದ ಕೆಲವು ಪ್ರದೇಶಗಳಲ್ಲಿ ಹಸ್ತಕ್ಷೇಪ ಮಾಡಲು ಈ ಸಂಧಾನದಿಂದಾಗಿ ಬಲ್ಲಾಳನಿಗೆ ಅವಕಾಶ ಸಿಕ್ಕಿತು.

1181 ರಲ್ಲಿ ಬಲ್ಲಾಳನು ಬನವಾಸಿಯಲ್ಲಿ ಯುದ್ಧಾಚರಣೆಗಳಲ್ಲಿ ನಿರತನಾದನು. ಬಳ್ಳಿಗಾವೆ ಮುಂತಾದೆಡೆಗಳಲ್ಲಿ ಕಲಚುರಿ ಮತ್ತು ಚಾಲುಕ್ಯರ ನಡುವೆ ಘರ್ಷಣೆಯಾಗುತ್ತಿದ್ದಿತು. ಇಬ್ಬರನ್ನೂ ದುರ್ಬಲಗೊಳಿಸುವುದೇ ಬಲ್ಲಾಳನ ವಿದೇಶಾಂಗ ನೀತಿಯಾಗಿದ್ದಿತು.

1183 ರಲ್ಲಿ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನು ಕಲ್ಯಾಣವನ್ನು ವಶಪಡಿಸಿಕೊಂಡಿದುದೂ 1184 ರಲ್ಲಿ ಬಿಜ್ಜಳನ ಅತ್ಯಂತ ಕಿರಿಯ ಪುತ್ರನಾದ ಸಿಂಗಣನು ಕಣ್ಮರೆಯಾಗಿ ಕಲಚುರಿ ಸಂತತಿಯ ಅಂತ್ಯವಾದದೂ ಬಲ್ಲಾಳನಿಗೆ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಾಯಿತು. 1183 ರಿಂದ 1189 ರ ವರೆಗೆ ಬಲ್ಲಾಳನು ಹೆಚ್ಚಿನ ಗದ್ದಲವಿಲ್ಲದೆ ಎಚ್ಚರಿಕೆಯಿಂದ ಪರಿಸ್ಥಿತಿಯನ್ನು ಗಮನಿಸುತ್ತಿದ್ದನು. ಮುಂಜಾಗ್ರತೆಯ ದೃಷ್ಟಿಯಿಂದ

ಉತ್ತರದ ಸಣ್ಣಪುಟ್ಟ ಅರಸರ ಬೆಂಬಲವನ್ನು ಪಡೆಯಲು ಅವರ ಸ್ವಾತಂತ್ರ್ಯಾಕಾಂಕ್ಷೆಯನ್ನು ಹುರಿದುಂಬಿಸುತ್ತಿದ್ದನು.

1189 ರಲ್ಲಿ ದೇವಗಿರಿಯ ಅರಸ ಯಾದವ ಭಿಲ್ಲಮ ಅಥವಾ ಭಿಲ್ಲಮ ಸೇವುಣನು ತುಂಗಭದ್ರಾ ಪ್ರದೇಶಕ್ಕೆ ದಂಡೆತ್ತಿ ಬಂದು ಅಣ್ಣಿಗೆರೆ, ಗದಗ ಮುಂತಾದವುಗಳನ್ನು ವಶಪಡಿಸಿಕೊಂಡನು. ಸುತ್ತಮುತ್ತಲಿನ ಮಾಂಡಲಿಕರೆಲ್ಲಾ ಕಳವಳಗೊಂಡಿದ್ದರು. ಬಲ್ಲಾಳನು ಮೊದಲು ಮುರಾರಿ ಕೇಶವ ನರಸಿಂಗನೆಂಬ ಸೇವುಣ ಅಧಿಕಾರಿಯೊಬ್ಬನೊಂದಿಗೆ ಹೋರಾಡಿ, ಅಂತಿಮವಾಗಿ, ಅಂದರೆ 1192 ರಲ್ಲಿ ಗದಗಿನ ಸಮೀಪದಲ್ಲಿದ್ದ ಸೊರಟೂರು ಕದನದಲ್ಲಿ ಯಾದವ ಭಿಲ್ಲಮನನ್ನು ಸೋಲಿಸಿ, ಯಾದವ ನಾರಾಯಣ, ಗಿರಿದುರ್ಗಮಲ್ಲ, ಶನಿವಾರ ಸಿದ್ಧಿ ಮುಂತಾದ ಬಿರುದುಗಳನ್ನು ಸ್ವೀಕರಿಸಿದನು.

ಚಾಮರಾಜನಗರದ ಶಾಸನವು ಎರಡನೆಯ ಬಲ್ಲಾಳನ ಉತ್ತರದ ವಿಜಯ ಯಾತ್ರೆಯ ಬಗ್ಗೆ ಪ್ರಸ್ತಾಪಿಸಿದೆ. (Ch. 204, E. C. IV)

ಗುಂಡ್ಲಪೇಟೆಯ ಶಾಸನವು ಬಲ್ಲಾಳನು ಉತ್ತರದಲ್ಲಿ ಹೆದ್ದೊರೆಯ ವರೆಗೆ, ಅಂದರೆ, ಕೃಷ್ಣಾನದಿಯ ವರೆಗೆ ಹೋರಾಡಿ ಜಯಗಳಿಸಿದುದನ್ನು ತಿಳಿಸುತ್ತದೆ. (Gu. 27, E. C. IV)

ಹೊಯ್ಸಳ ರಾಜ್ಯದ ಮೇರೆಯು ಉತ್ತರದಲ್ಲಿ ಹೆದ್ದೊರೆ (ಕೃಷ್ಣಾನದಿ) ಯ ವರೆಗೂ ಹಬ್ಬಿದುದರಿಂದ ಲೊಕ್ಕಿಗುಂಡಿ (ಈಗಿನ ಲಕ್ಕುಂಡಿ) ಯು ಉತ್ತರ ಭಾಗದ ರಾಜಧಾನಿಯಾಯಿತು.

ಎರಡನೆಯ ಬಲ್ಲಾಳನ ಗೈರು ಹಾಜರಿಯಲ್ಲಿ ಅಂದರೆ, 1190 ರ ಏಪ್ರಿಲ್‌ನಲ್ಲಿ ಆತನ ರಾಣಿಯಾದ ಮಹಾದೇವಿಯು ದೋರಸಮುದ್ರದಲ್ಲಿ ಆಳುತ್ತಿದ್ದಳೆಂದೂ ಆಗ್ನೇಯ ದಿಕ್ಕಿನಲ್ಲೆದ್ದಿದ್ದ ದಂಗೆಯೊಂದನ್ನು ಅಡಗಿಸಲು ಕ್ರಮಗಳನ್ನು ಕೈಗೊಂಡಳೆಂದೂ ಶಾಸನಗಳಿಂದ ಗೊತ್ತಾಗುವುದು.

ಯಾದವ ಭಿಲ್ಲಮನನ್ನು ಸೋಲಿಸಿದ ಮೇಲೆ ಎರಡನೆಯ ಬಲ್ಲಾಳನು ನಿರಾಯಾಸವಾಗಿ ಬೆಳ್ವೊಲದ ಮೇಲಿನ ಹತೋಟಿಯನ್ನು ಗಳಿಸಿದನು. ಗದಗ್, ಎರಂಬರಗೆ, ಸಿಂದ ಮುಂತಾದವುಗಳು ಹೊಯ್ಸಳ ಅರಸನ ಹಸ್ತ

ಗತವಾದುವು. ಇವುಗಳಲ್ಲದೆ, ಬೆಳ್ಳಾರೆ (ಬಳ್ಳಾರಿ), ಧೋರವಾಡಿ (ಈಗಿನ ದಾರೋಜಿ) ಕುರುಗೋಡು, ಹಾಲ್ವಿ, ಮಾಸ್ವಿಗಳೂ ಹೊಯ್ಸಳರ ವಶವಾದುವು. ದೇವದುರ್ಗವೆಂಬುದು ಬಲ್ಲಾಳನ ವಶವಾಯಿತು.

1193 ರ ಆದಿಯಲ್ಲಿ ಎರಡನೆಯ ಬಲ್ಲಾಳನು ಲಕ್ಕುಂಡಿಯಲ್ಲಿ ತಂಗಿದ್ದಾಗಲೇ ಅವನ ದಣ್ಣಾಯಕರಲ್ಲೊಬ್ಬನು ಬನವಾಸಿ ಹನ್ನೆರಡು ಸಾವಿರ ಮತ್ತು ಶಾಂತಲಿಗೆ ಸಾವಿರಗಳನ್ನು ಒಂದೇ ಆಡಳಿತದಲ್ಲಿ ಒಂದು ಗೂಡಿಸಿದುದಾಗಿ ಹೇಳಿಕೊಂಡಿದ್ದಾನೆ. ರಟ್ಟಹಳ್ಳಿ, ಉದ್ಧರೆ, ಗುತ್ತಿ ಮುಂತಾದ ಊರುಗಳೂ ಹೊಯ್ಸಳ ಅರಸನಿಗೆ ದಕ್ಕಿದುವು. ಗುತ್ತವೊಳಲ್ ಮತ್ತು ಹಾನುಂಗಲ್ಲುಗಳು ಹೊಯ್ಸಳರ ವಶವಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಈ ಎಲ್ಲಾ ಗಳಿಕೆಗಳ ಫಲವಾಗಿ ಹೊಯ್ಸಳ ರಾಜ್ಯದ ಘನತೆ ಹೆಚ್ಚಿತು. ವೀರ ಬಲ್ಲಾಳನು ಕರ್ನಾಟಕ ಸಾಮ್ರಾಟನೆನಿಸಿದನು.

ಚನ್ನರಾಯಪಟ್ಟಣದ ಶಾಸನದಲ್ಲಿ ಎರಡನೆಯ ಬಲ್ಲಾಳನು ದಕ್ಷಿಣ ಮಹೀಮಂಡಳಮಂ ದುಷ್ಟನಿಗ್ರಹ ಶಿಷ್ಟಪರಿಪಾಳನಂ ಪೂರ್ವಕಂ ರಕ್ಷಿಸುತ್ತಿದ್ದನೆಂದು ಬಣ್ಣಿಸಿದೆ. (Cn. 146, E. C. V).

1193 ರಲ್ಲಿ ಬಲ್ಲಾಳನು ಲೊಕ್ಕುಂಡಿಯಲ್ಲಿದ್ದಾಗ ಹೊಯ್ಸಳ ನಾಡಿನ ದಕ್ಷಿಣದ ಗಡಿಯಲ್ಲಿ ಬುಡಕಟ್ಟಿನ ಜನಾಂಗವೊಂದರ ದುರಾಕ್ರಮಣವನ್ನೂ ಬನವಾಸಿ ಜಿಲ್ಲೆಯಲ್ಲಿದ್ದ ಗಲಭೆಗಳನ್ನೂ ತಡೆಗಟ್ಟಲು ದಕ್ಷಿಣಾಭಿಮುಖವಾಗಿ ಪ್ರಯಾಣಮಾಡಬೇಕಾಯಿತು. 1194 ರ ಬೇಸಿಗೆ ಕಾಲದ ವೇಳೆಗೆ ಬಲ್ಲಾಳನು ತನ್ನ ರಾಜಧಾನಿಗೆ ಹಿಂತಿರುಗಿದನು. ಅದೇ ವರ್ಷದ ಉತ್ತರಾರ್ಧದಲ್ಲಿ ಭೋಗದೇವ ಚೋಳನು ಹೊಯ್ಸಳರ ಪ್ರವೇಶವನ್ನು ತಡೆಗಟ್ಟಲು ತನ್ನ ರಾಜ್ಯದ ಪಶ್ಚಿಮ ಭಾಗದಲ್ಲಿ ಕಟ್ಟಿಸುತ್ತಿದ್ದ ಕೋಟೆಗಳನ್ನು ಬಲ್ಲಾಳನು ಕೆಡೆವಿಸಿದನು.

ಮೊಳಕಾಲ್ಮೂರು ಶಾಸನವು ಹಾನೆಯುದ ಕೋಟೆಯ ಸಾಧ್ಯಂ ಮಾಡಿ ವಿಜಯಗಿರಿಯೆಂಬ ಹೆಸರ ಪಟ್ಟಣ ಮಾಡಿಸಿದುದನ್ನು ವರ್ಣಿಸಿದೆ. (Mk. 12, E. C. XI)

1194 ರ ಮೂಡಗೆರೆ ಶಾಸನದಲ್ಲಿ ಎರಡನೆಯ ಬಲ್ಲಾಳನು ಉತ್ತರ ನೊಣಂಬವಾಡಿಯಲ್ಲಿ ವಾಸಿಸುತ್ತಿದ್ದುದಾಗಿ ತಿಳಿಸಲಾಗಿದೆ.

ಅದು ಉಚ್ಚಂಗಿ ದುರ್ಗದಲ್ಲಿರಬಹುದೆಂದು ಬಿ. ಎಲ್. ರೈಸ್ ಅಭಿಪ್ರಾಯಪಟ್ಟಿದ್ದಾರೆ. (E. C. VI)

1195 ರ ಉತ್ತರಾರ್ಧದಲ್ಲೂ 1196 ರ ಆದಿಯಲ್ಲೂ ಬಲ್ಲಾಳನು ಎರಂಬರಗೆಯಲ್ಲಿದ್ದನು. ಚಿಕ್ಕ ಮಗಳೂರಿನ ಶಾಸನಗಳ ಪ್ರಕಾರ ರಾಣಿಯಾದ ಕೇತಲದೇವಿಯು 1195 ರಲ್ಲಿ ರಾಜ್ಯಭಾರ ಮಾಡುತ್ತಿದ್ದಂತೆ ತೋರುವುದು. (Cm. 157 and 158, E. C. VI). ಕಡೂರಿನ ಶಾಸನದಲ್ಲಿ ಕೇತಲ ದೇವಿಯ ಹೆಸರು ಸೇತು (ರಾಮೇಶ್ವರ) ವಿಂದ ಹಿಮ (ಹಿಮಾಲಯ) ದ ವರೆಗೂ ಪ್ರಸಿದ್ಧವಾಗಿತ್ತೆಂದು ಹೇಳಲಾಗಿದೆ. (Kd. 127. E. C. VI).

ಬೆಳಗವತ್ತಿಯಲ್ಲಿದ್ದ ಸಿಂದ ಅರಸನೊಬ್ಬನು ಹೊಯ್ಸಳರಿಗೆ ಕಿರುಕುಳ ಕೊಡಲಾರಂಭಿಸಿದಾಗ ಬಲ್ಲಾಳನ ಮತ್ತೋರ್ವ ಸಮರ್ಥರಾಣಿಯಾಗಿದ್ದ ಉಮಾದೇವಿಯು ಅವನಿಗೆ ಬುದ್ಧಿ ಕಲಿಸಿದಳಂತೆ. ಅದೇ ಕಾಲಕ್ಕೆ ಎರಡನೆಯ ಬಲ್ಲಾಳನ ಮತ್ತೋರ್ವ ಪತ್ನಿಯಾದ ಪದ್ಮಲಾದೇವಿಯ ಉದರದಲ್ಲಿ ಜನಿಸಿದ್ದ ಕುಮಾರ ವೀರನರಸಿಂಹ ದೇವನು ತಂದೆಗೆ ಸಹಾಯ ಮಾಡಲಾರಂಭಿಸಿದನು.

1196 ರಲ್ಲಿ ಬಲ್ಲಾಳನು ಹಾನುಂಗಲ್ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. 1198 ರಲ್ಲಿ ಸ್ವಲ್ಪ ಕಾಲದ ಹೊರತು 1200 ರ ವರೆಗೂ ವೀರ ಬಲ್ಲಾಳನು ದೋರಸಮುದ್ರದ ಹೊರಗೇ ಹೆಚ್ಚಾಗಿ ಸಂಚರಿಸುತ್ತಿದ್ದನು. ಕ್ರಿ. ಶ. 1200 ರ ಹಾಸನದ ಶಾಸನವೊಂದರಲ್ಲಿ ಬಲ್ಲಾಳನು ವಿಜಯ ಸಮುದ್ರದಲ್ಲಿದ್ದನೆಂದು ತಿಳಿಸಲಾಗಿದೆ. ಅದು ವಿಜಯಪುರ ಅಥವಾ ಹಲ್ಲವೂರೆಂದು ಬಿ. ಎಲ್. ರೈಸ್ ಬರೆದಿದ್ದಾರೆ.

1196 ರಲ್ಲಿ ಹಾನುಂಗಲ್ ಕೋಟೆಯ ಮೇಲೆ ಬಲ್ಲಾಳನು ಮಾಡಿದ ಮುತ್ತಿಗೆಯ ಸೇಡನ್ನು ತೀರಿಸಿಕೊಳ್ಳಲು ಕಾಮದೇವ ಕದಂಬನು ಏಳು ವರ್ಷಗಳ ಮೌನದ ನಂತರ ಹಾನುಂಗಲ್ ಬಳಿಯ ಅನೇಕ ಹಳ್ಳಿಗಳ

ಮೇಲೆ ದಾಳಿ ಮಾಡಲು ಪ್ರಾರಂಭಿಸಿದನು. 1206 ರ ವಸಂತ ಕಾಲದ ವರೆಗೂ ಬಲ್ಲಾಳನು ಕದನದಲ್ಲಿ ನಿರತನಾಗಿರಬೇಕಾಯಿತು. ಆ ವರ್ಷ ಹೊಯ್ಸಳರದೇ ಮೇಲುಗೈ ಆಗಿ ಅರಸನು ದಕ್ಷಿಣದತ್ತ ಹಿಂತಿರುಗಿದನು. 1205 ರಲ್ಲಿ ಭೀಮರಥಿ ನದಿಯು ಹೊಯ್ಸಳ ರಾಜ್ಯದ ಮೇರೆಯಾಗಿದ್ದಿತೆಂದು ತಿಪಟೂರು ಶಾಸನವು ತಿಳಿಸುತ್ತದೆ. (Tp. 43, E. C. XII) ಆದರೆ ಬನವಾಸಿ ನಾಡಿನಲ್ಲಿ ಕಾಮದೇವನ ಕಿರುಕೊಳ ಮತ್ತೆ ಪ್ರಾರಂಭವಾಯಿತು. ಆದ್ದರಿಂದ ಬಲ್ಲಾಳನು ಹೆದ್ದೊರೆವರೆಗೆ ಮತ್ತೊಂದು ದಂಡಯಾತ್ರೆಯನ್ನು ಕೈಗೊಳ್ಳಬೇಕಾಯಿತು.

1211 ರಲ್ಲಿ ಸಿಂಹಣದೇವ ಸೇವುಣನು ಪ್ರಬಲನಾಗಿ ಬನವಾಸಿ ನಾಡಿನತ್ತ ನುಗ್ಗಿದನು. ಅವನೊಂದಿಗಾದ ಕದನಗಳು ಹೊಯ್ಸಳರಿಗೆ ಪ್ರತಿಕೂಲವಾಗಿದ್ದುವು. 1216 ರಲ್ಲಿ ಬಲ್ಲಾಳನಿಗೆ ಜಯವಾಗಲೆಂದು ಹೊಯ್ಸಳ ರಾಜ್ಯದ ದೇವಾಲಯಗಳಿಗೆ ಕಾಣಿಕೆಗಳು ಸಲ್ಲಿಸಲ್ಪಟ್ಟವು. ಆದರೇನು! ಸಿಂಹಣನು ಬಂದಳಿಕೆ, ಬಳ್ಳಿಗಾವೆ ಮತ್ತು ಚಿತ್ತೂರುಗಳನ್ನು ವಶಪಡಿಸಿಕೊಂಡನು. ಗಂಗ ಸಂತತಿಯ ಎಕ್ಕಲರಸನೂ ಬೆಳಗವತ್ತಿಯ ಸಿಂದ ಅರಸನೂ ಸೇವುಣನ ಪರಮಾಧಿಕಾರವನ್ನು ಅಂಗೀಕರಿಸಿದರು. ಈ ನಿಷ್ಠೆಯ ಪರ್ಗವಣೆ ಹೊಯ್ಸಳರಿಗೆ ನುಂಗಲಾರದ ತುತ್ತಾಯಿತು. ಉಮಾದೇವಿಯ ಕಾಠಿಣ್ಯತೆಯು ಈ ದುರಂತಕ್ಕೆ ಕಾರಣವಿರಬಹುದೆಂದು ಡೆರೆಟ್ ಬರೆದಿದ್ದಾರೆ. ಅವರೇ ಬರೆದಿರುವರಂತೆ ಅದೃಷ್ಟವಶಾತ್ ಸಾಂತರರೂ ಹಾಗೂ ಚಾಲುಕ್ಯ ವಂಶದ ತೈಲಮನೂ ಬಲ್ಲಾಳನಿಗೆ ಬೆಂಬಲವಾಗಿ ನಿಂತರು. ಆದರಿಂದಾಗಿ ಕೆಲವು ಊರುಗಳನ್ನು ಹೊಯ್ಸಳ ಆಡಳಿತದಲ್ಲೇ ಉಳಿಸಿಕೊಳ್ಳುವುದು ಸಾಧ್ಯವಾಯಿತು- 1217 ರಲ್ಲಿ ಸಾಂತರರು ಕೊಂಚ ಜಯಪ್ರದವಾಗಿಯೇ ಹೋರಾಟವನ್ನು ಮುಂದುವರಿಸುತ್ತಿದ್ದರು. ಸಿಂದ ಅರಸನೂ ಕೊನೆಗೆ ಸೇವುಣನನ್ನು ಪರಿತ್ಯಜಿಸಿದುದರಿಂದ ಹೊಯ್ಸಳರು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟರು.

ಬಲ್ಲಾಳನ ಆಳ್ವಿಕೆಯ ಮತ್ತೊಂದು ಘಟನೆಯೆಂದರೆ ತಮಿಳು ಸೀಮೆಯಲ್ಲಿ ಆಳುತ್ತಿದ್ದ ಚೋಳರೊಂದಿಗೆ ರಕ್ತ ಸಂಬಂಧ ಬೆಳೆಸಿದುದು. ಬಲ್ಲಾ

ಳನೂ ಪ್ರಾಯಶಃ ಓರ್ವ ಚೋಳರಾಜ ಪುತ್ರಿಯನ್ನು ವಿವಾಹವಾಗಿದ್ದು ದಲ್ಲದೆ ವೀರ ನರಸಿಂಹನ ಬಡಹುಟ್ಟಿದ ಸೋದರಿಯಾದ ಗುಣವಂತೆಯೂ ಸುಂದರಿಯೂ ಆಗಿದ್ದ ಸೋವಲದೇವಿಯನ್ನು ವೃದ್ಧನಾಗಿದ್ದ ಮೂರನೆಯ ಕುಲೋತ್ತುಂಗನಿಗೆ ಕೊಟ್ಟು ಮದುವೆ ಮಾಡಿದನು. ಕುಲೋತ್ತುಂಗನ ಮಗನಾದ ಮೂರನೆಯ ರಾಜರಾಜನೂ ನರಸಿಂಹನ ಔರ್ವಪುತ್ರಿಯನ್ನು ವಿವಾಹವಾದನು. ಪಾಂಡ್ಯರಿಂದ ಚೋಳರಿಗೆ ಕಿರುಕುಳವಾದಾಗ 1218 ರಲ್ಲಿ ಎರಡನೆಯ ಬಲ್ಲಾಳನು ಚೋಳರ ನೆರವಿಗಾಗಿ ತನ್ನ ಮಗನಾದ ನರ ಸಿಂಹನನ್ನು ಕಳುಹಿಸಿಕೊಟ್ಟನು. ನರಸಿಂಹನು ತನ್ನ ಕಾರ್ಯದಲ್ಲಿ ಯಶಸ್ವಿ ಯಾದನು. ಇದರಿಂದಾಗಿ ಎರಡನೆಯ ನರಸಿಂಹನಿಗೆ 'ಚೋಳ ಕುಲೈಕ ರಕ್ಷಕ' ಎಂಬ ಬಿರುದು ಬಂದಿತು. ಬಲ್ಲಾಳನನ್ನಂತೂ ಶಾಸನಗಳು 'ಚೋಳ ರಾಜ್ಯ ಪ್ರತಿಷ್ಠಾಚಾರ್ಯ', 'ಪಾಂಡ್ಯಗಜಕೇಸರಿ', 'ಚೋಳ ಕಟಕ ಸೂರೆಕಾರ' ಎಂದು ಬಣ್ಣಿಸಿವೆ.

1220 ರ ವೇಳೆಗೆ ವೃದ್ಧಾಪ್ಯದಲ್ಲಿದ್ದ ಬಲ್ಲಾಳನು ತನ್ನ ಜ್ಯೇಷ್ಠ ಪುತ್ರ ನಾದ ವೀರ ನರಸಿಂಹನಿಗೆ ಅದೇ ವರ್ಷದ ಏಪ್ರಿಲ್ 18 ರಂದು ಪಟ್ಟಾಭಿ ಷೇಕವನ್ನು ನೆರವೇರಿಸಿ, ತಾನೂ ಸ್ವರ್ಗಾರೋಹಣ ಮಾಡಿದನೆಂದು ಚನ್ನ ರಾಯ ಪಟ್ಟಣದ ಶಾಸನವು ತಿಳಿಸಿದೆ (Cn. 211 B. E C. V). ಬಲ್ಲಾಳನ ಮಂತ್ರಿಯೂ ದಳಪತಿಯೂ ಆಗಿದ್ದ ಕುವರ ಲಕ್ಷ್ಮನೂ ಅರಸ ನೊಂದಿಗೆ ದೇಹತ್ಯಾಗ ಮಾಡಿದನಂತೆ.

ಸುಮಾರು ಅರ್ಧ ಶತಮಾನದಷ್ಟು ದೀರ್ಘಕಾಲ ಆಳಿದ ಎರಡನೆಯ ಬಲ್ಲಾಳನು ತನ್ನ ತಾತನ ಆಳಿಕೆಯಲ್ಲಿದ್ದ ವೈಭವವನ್ನು ಮತ್ತೆ ತೋರಿಸಿ ಕೊಟ್ಟನು. ಹೊಯ್ಸಳ ವಂಶದ ಘನತೆಯನ್ನು ಹೆಚ್ಚಿಸಲು ಅವನು ತುಂಬಾ ಶ್ರಮಿಸಿದನು. ಹೊಯ್ಸಳ ರಾಜ್ಯವು ಸಾಮ್ರಾಜ್ಯವಾಗಿ ಮಾರ್ಪಟ್ಟು ಬಲ್ಲಾಳನು ಸಾರ್ವಭೌಮನಾದನು. ರಾಜ್ಯದಲ್ಲಿ ಶಾಂತಿ ನೆಲೆಸಿ, ದೇವಾ ಲಯಗಳ ಹಾಗೂ ಬಸದಿಗಳ ನಿರ್ಮಾಣವು ಅಧಿಕವಾಯಿತು. ಅಮೃತ ಪುರದ ಅಮೃತೇಶ್ವರ ದೇವಾಲಯ, ಹಿರೇಮಗಳೂರಿನ ಕೋದಂಡರಾಮ ದೇವಾಲಯ, ಅಂಗಡಿಯ ಕೇಶವ ದೇವಾಲಯ, ದೋರಸಮುದ್ರದ ಕೇದಾ ರೇಶ್ವರ ಮತ್ತು ವೀರಭದ್ರದೇವಾಲಯಗಳು ಆ ಕಾಲದಲ್ಲಿ ಕಟ್ಟಿಸಲ್ಪಟ್ಟವು.

ಶ್ರವಣಬೆಳ್ಗೊಳ, ನಂದಳಿಕೆ, ಅರಸೀಕೆರೆ ಮುಂತಾದ ಸ್ಥಳಗಳಲ್ಲಿ ಜೈನ ಬಸ್ತಿಗಳ ನಿರ್ಮಾಣವಾಯಿತು.

ವೀರನರಸಿಂಹ (ಕ್ರಿ. ಶ. 1220–1233)

ಎರಡನೆಯ ಬಲ್ಲಾಳನ ಉತ್ತರಾಧಿಕಾರಿಯಾದ ವೀರನರಸಿಂಹ (ಎರಡನೆಯ ನರಸಿಂಹ) ನನ್ನು ನಾಗಮಂಗಲ ಮತ್ತು ಮಂಡ್ಯ ತಾಲೂಕುಗಳ ಶಾಸನಗಳು ಚೋಳರಾಯ ಪ್ರತಿಷ್ಠಾಚಾರ್ಯಂ ಮಗರಾಧಿರಾಯ ಲಯ ಕಾಳಂ ಎಂಬುದಾಗಿ ಬಣ್ಣಿಸಿವೆ. (Ng. 98, and Md. 121, E. C. IV). ಚೋಳ ರಾಜ್ಯದ ಮೇಲೆ ಇವನು ಬೀರಿದ ಪ್ರಭಾವವೂ ಮಗರ ಮತ್ತಿತರ ರಾಜರನ್ನು ನಾಶಪಡಿಸಿದ ಸಂಗತಿಯೂ ಈ ಶಾಸನಗಳಿಂದ ಗೊತ್ತಾಗುವುವು. ಪಾಂಡ್ಯ ರಾಜ್ಯದ ವಿಸ್ತರಣೆಯನ್ನು ವೀರನರಸಿಂಹನು ತಡೆಗಟ್ಟಿದನೆಂದೂ ಶಾಸನದಲ್ಲಿ ವರ್ಣಿಸಲಾಗಿದೆ.

ವೀರನರಸಿಂಹನು ಅರಸನಾದ ಒಡನೆಯೇ ದಿಗ್ವಿಜಯಕ್ಕಾಗಿ ಹಾತೊರೆದನು. ಮೊದಲು ಮಗರ (ಬಾಣ) ರನ್ನು ಸೋಲಿಸಿ, ಚೋಳರ ರಾಜಧಾನಿಯಾದ ಕಾಂಚಿಗೆ ಹೋಗಿ, ಅಲ್ಲಿಯೇ ಸ್ವಲ್ಪ ಸೇನೆಯನ್ನು ಬಿಟ್ಟು, ದೋರಸಮುದ್ರಕ್ಕೆ ಹಿಂತಿರುಗಿದನು.

1222 ರ ವೇಳೆಗೆ ಚೋಳ ಅರಸ ಮೂರನೆಯ ರಾಜರಾಜನಿಗೆ ಕಾಡವ ಕೋಪ್ಪೆರುಂಜಿಂಗ ಮುಂತಾದ ಶತ್ರುಗಳ ಕಾಟ ಹೆಚ್ಚಾಗಲು ಎರಡನೆಯ ನರಸಿಂಹನು ಅವನಿಗೆ ಸಹಾಯ ಮಾಡುವ ನೆಪದಲ್ಲಿ ತಮಿಳು ಸೀಮೆಯ ರಾಜಕೀಯದಲ್ಲಿ ಭಾಗವಹಿಸಿ, ಆದಷ್ಟು ಲಾಭ ಗಳಿಸಲು ಪ್ರಯತ್ನಿಸಿದನು. ಅವನು ಶ್ರೀರಂಗಂ ಕಡೆಗೆ ಧಾವಿಸಿ ಬಾಣರು ಮುಂತಾದವರ ಅಡ್ಡಿ ಆತಂಕಗಳನ್ನು ನಿವಾರಿಸಿದನು. ಪಾಂಡ್ಯರ ಸೇನೆಯೊಂದನ್ನು ಸೋಲಿಸಿದುದಲ್ಲದೆ, ಮೂರನೆಯ ರಾಜರಾಜನನ್ನು ಕಾಡವ ಕೋಪ್ಪೆರುಂಜಿಂಗನ ಸೆರೆಯಿಂದ ಬಿಡಿಸಿದನು. ಚೋಳ ರಾಜ್ಯದಲ್ಲಿ ಇನ್ನಷ್ಟು ಸೇನೆಯನ್ನು ನಿಲ್ಲಿಸಿ, 1223 ರ ಮಾರ್ಚಿ ವೇಳೆಗೆ ತನ್ನ ರಾಜಧಾನಿಯಾದ ದೋರಸಮುದ್ರಕ್ಕೆ ಮರಳಿದನು. ಆದರೆ ಆರು ತಿಂಗಳುಗಳ ನಂತರ ಮತ್ತೆ ಕಾಂಚಿಗೆ ಹೋಗುವುದು ಅನಿ

ವಾರ್ಯವಾಯಿತು. ನರಸಿಂಹನು ಅಲ್ಲಿಗೆ ಹೋಗುತ್ತಿದ್ದಂತೆ ಹೊಯ್ಸಳ ಸೇನೆಯನ್ನು ಕೆಣಕಿ ಸೋಲಿಸಿದ್ದ ಕಾಕತೀಯ ಅರಸ ಗಣಪತಿ ದೇವನು ತಮಿಳು ಸೀಮೆಯಿಂದ ಹಿಮ್ಮೆಟ್ಟಿದನು. ನರಸಿಂಹನು ರಾಜರಾಜನಿಂದ ಕಾವೇರಿ ನದಿಯ ಪಶ್ಚಿಮ ದಡದಲ್ಲಿದ್ದ ಪ್ರದೇಶದ ಸ್ವಲ್ಪ ಭಾಗವನ್ನು ಗಿಟ್ಟಿಸಿಕೊಂಡು ಅದರ ಆಡಳಿತಕ್ಕಾಗಿ ತನ್ನ ಮಗನಾದ ಸೋಮೇಶ್ವರನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಿದನು. ವಿಕ್ರಮಪುರಿಯು ದಕ್ಷಿಣದ ರಾಜಧಾನಿಯಾಯಿತು.

ತಮಿಳು ಸೀಮೆಯಲ್ಲಿ ಹೊಯ್ಸಳರ ಚಟುವಟಿಕೆಗಳನ್ನು ಗಮನಿಸುತ್ತಿದ್ದ ಸೇವುಣರ ಅರಸನೂ ಸಿಂಹಣ ಸೇವುಣನ ಮೊಮ್ಮಗನೂ ಆಗಿದ್ದ ಕೃಷ್ಣ ಅಥವಾ ಕನ್ಹರನು ಹೊಯ್ಸಳ ರಾಜ್ಯದ ಮೇಲೆ ದಂಡೆತ್ತಿ ಹೋದನು. ಹೊಯ್ಸಳ ದಣ್ಣಾಯಕರ ನಿರೋಧದಿಂದಾಗಿ ದೋರಸಮುದ್ರವನ್ನು ಕೊಳ್ಳೆ ಹೊಡೆಯಬೇಕೆಂಬ ಅವನ ಕನಸು ನನಸಾಗಲಿಲ್ಲ. ಕೋಲಾರದ ಬಳಿ ಗಲಭೆಗಳು ಶುರುವಾಗಿ ಜಯಗೊಂಡ ಚೋಳ ಇಳವಂಜಿಯರ್ ಎಂಬ ಒಬ್ಬ ಬಲಶಾಲಿಯು ಆವಣಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಒಂದು ಪುಟ್ಟ ಪ್ರಾಂತವನ್ನೇ ನಿರ್ಮಿಸಿಕೊಂಡನು. ಆದರೆ 1229 ರಿಂದ 1254 ವರೆಗೂ ಅವನು ತಾತ್ಕಾಲಿಕವಾಗಿ ಹಿನ್ನೆಲೆಗೆ ಹೋದಂತೆ ಕಾಣುವುದೆಂದು ಡೆರೆಟ್ ಬರೆದಿದ್ದಾರೆ.

1228 ರಲ್ಲಿ ಸೋಮೇಶ್ವರನು ಚೋಳ ರಾಜ್ಯದ ಕಣ್ಣಾನೂರಿನಲ್ಲಿ ಆಳುತ್ತಿದ್ದಾಗ ಕಾಡವ ಅರಸ ಮನ್ನವಾಳ ಪೆರುಮಾಳ್ ಎಂಬಾತನು ಕಾವೇರಿಯನ್ನು ದಾಟಿ ದುರಾಕ್ರಮಣಕ್ಕೆ ಪ್ರಯತ್ನಿಸಿದಾಗ ಹೊಯ್ಸಳ ಸೇನೆಯು ಕೋಟೆಗಳನ್ನು ನಿರ್ಮಿಸಬೇಕಾಯಿತು. ಕಾಕತೀಯರ ಉಪದ್ರವವು ಮತ್ತೆ ಪ್ರಾರಂಭವಾದುದರಿಂದ ನರಸಿಂಹನು ಮತ್ತೊಮ್ಮೆ ಕಾಂಚಿಗೆ ಹೋಗುವ ಪ್ರಸಂಗ ಬಂದಿತು.

1229 ರ ತಿಪಟೂರು ಶಾಸನವು ಎರಡನೆಯ ನರಸಿಂಹನು ಸುತ್ತುವರೆಯಲ್ಪಟ್ಟ ಸಾಗರವನ್ನೇ ತನ್ನ ಗಡಿಯನ್ನಾಗಿ ಮಾಡಿಕೊಂಡು ಕಾಂಚಿಪುರದಿಂದ ರಾಜ್ಯವಾಳುತ್ತಿದ್ದನೆಂದು ವರ್ಣಿಸಿದೆ. (Tp. 42, E. C. XII).

1231 ರಲ್ಲಿ ರಾಜರಾಜನು ಕಾಡವರಿಂದ ಸೆರೆ ಹಿಡಿಯಲ್ಪಟ್ಟಾಗ ನರಸಿಂಹನು ದೋರಸಮುದ್ರದಿಂದ ಮತ್ತೆ ತಮಿಳುನಾಡಿಗೆ ಹೋಗಬೇಕಾಯಿತು. 1233 ರ ಗುಬ್ಬಿಯ ಶಾಸನವು ನರಸಿಂಹನ ಅಪ್ಪಣೆಯನ್ನು ಪಡೆದ ಅಪ್ಪಯ್ಯ ಮತ್ತು ಗೋಪಣ್ಣ ಎಂಬಿಬ್ಬರು ದಳಪತಿಗಳು ಕಾಡವ ಅರಸನನ್ನು ನಾಶಮಾಡಿ, ರಾಜರಾಜನನ್ನು ಬಂಧನದಿಂದ ಬಿಡಿಸಿಕೊಂಡು, ಹೊಯ್ಸಳ ಅರಸನ ಸಮ್ಮುಖಕ್ಕೆ ಕೊಂಡೊಯ್ದರೆಂದೂ ಆ ಸಾಹಸಕ್ಕಾಗಿ ಒಂದು ಹಳ್ಳಿಯನ್ನು ಅವರಿಗೆ ಬಹುಮಾನವಾಗಿ ಕೊಡಲಾಯಿತೆಂದೂ ತಿಳಿಸಿದೆ— ಆ ಶಾಸನದಲ್ಲಿ ಕಾಡವ ರಾಯನ ಕಿಡಿಸಿ! ಚೋಳನ ಬಿಡಿಸಿ ತಂದಲ್ಲಿಗೆ ಮೆಚ್ಚಿ! ದಂಡಿನಸಿ ಅವರ ಅರಕೆಱಿರಿಯ ವಿತ್ತಿಯಂ ಕೊಡುಗೆಯಾಗಿ ಕಾರುಣ್ಯಂಗೆಯ್ದರು— ಎಂದು ವರ್ಣಿಸಲಾಗಿದೆ. (Gb. 45. E· C. XII).

ನರಸಿಂಹನು ಬಾಣ, ಪಾಂಡ್ಯ ಮತ್ತು ಕಾಡವರ ಪಡೆಗಳನ್ನು ಸೋಲಿಸಿದನು. ಅವನು ಮತ್ತಷ್ಟು ಕಾಲ ತಮಿಳು ಸೀಮೆಯಲ್ಲಿಯೇ ಉಳಿಯಬೇಕಾಗಿ ಬಂದಿದುದರಿಂದ ಸಾಮ್ರಾಜ್ಯದ ವಾಯವ್ಯ ಭಾಗದಲ್ಲಿ ಹೊಯ್ಸಳರ ಕಾರ್ಯ ಚಟುವಟಿಕೆಗಳಿಗೆ ಪೂರ್ಣ ವಿರಾಮ ಹಾಕಿದಂತಾಗಿದ್ದಿತು. ವೀರನರಸಿಂಹನು 1235 ರ ಅಂತ್ಯದಲ್ಲೋ ಅಥವಾ 1236 ರ ಆದಿಯಲ್ಲೋ ಸತ್ತನು. ಅವನು ತನ್ನ ತಂದೆಯ ಯೋಜನೆಗಳನ್ನು ಅನುಸರಿಸಲು ಪ್ರಯತ್ನಿಸಿದರೂ ಅವುಗಳನ್ನು ಪೂರ್ಣವಾಗಿ ಕಾರ್ಯಗೊಳಿಸುವವರೆಗೆ ಬದುಕಲಿಲ್ಲ.

ಸೋಮೇಶ್ವರ (ಕ್ರಿ. ಶ. 1233–1254)

ಮಂಡ್ಯದ ಶಾಸನದ ಪ್ರಕಾರ ಸೋಮೇಶ್ವರನು ವೀರನರಸಿಂಹನ ಪತ್ನಿಯಾದ ಕಾಳಲದೇವಿಯ ಹೊಟ್ಟೆಯಲ್ಲಿ ಹುಟ್ಟಿದವನು (Md. 122 E.C. IV). ಸೋವಿದೇವ ಎಂಬುದು ಇವನ ಮತ್ತೊಂದು ಹೆಸರು. ಚನ್ನರಾಯಪಟ್ಟಣದ ಶಾಸನದಲ್ಲಿ ನರಸಿಂಹನ ಸೋದರಿ ಸೋವಲ ದೇವಿಯು ಸೋಮೇಶ್ವರನಿಗೆ ತಾಯಿಯಂತಿದ್ದಳೆಂದು ಬಣ್ಣಿಸಲಾಗಿದೆ. (Cn. 203, E· C. V).

ಸೋವಲೆಯು ಚೋಳ ಅರಸ ಕುಲೋತ್ತುಂಗನನ್ನು ವಿವಾಹವಾದ ಮೇಲೆ ತಬ್ಬಲಿಯಾಗಿದ್ದ ಸೋಮೇಶ್ವರನನ್ನು ಆಕೆಯ ಸಂಗಡ ಚೋಳ

ರಾಜ್ಯಕ್ಕೆ ಕಳುಹಿಸಲಾಯಿತು. ಆ ವಾತಾವರಣದಲ್ಲಿ ಬೆಳೆದ ಸೋಮೇಶ್ವರನಿಗೆ ತಮಿಳು ಸೀಮೆಯೇ ಒಗ್ಗಿಹೋಯಿತು.

1233 ರಲ್ಲಿ ಸ್ವತಃ ವೀರನರಸಿಂಹನೇ ಹೊಯ್ಸಳರ ಹತೋಟಿಗೆ ಒಳಗಾಗಿದ್ದ ಚೋಳ ಸಾಮ್ರಾಜ್ಯದ ಒಂದು ಭಾಗದ ರಾಜಪದವಿಯನ್ನು ಸೋಮೇಶ್ವರನಿಗೆ ಕಣ್ಣನೂರಿನಲ್ಲಿ ಅನುಗ್ರಹಿಸಿದನು.

ಮಂಡ್ಯದ ಶಾಸನವು ಸೋಮೇಶ್ವರನ ಸಾಧನೆಗಳನ್ನು ಕುರಿತು,

ಕೃಷ್ಣ ಕಂಧರನುಮಂ ಮಾರ್ಕ್ಕೊಂಡು ಚೋಳೋರ್ವ್ವಿಯುಂ
ನಿಂನಂತಾ
ರೊಳು ಪೊಕ್ಕು ಸಾದಿಸಿದರಾಪ್ಪಾಂಡ್ಯೇಶನಂ ಶೌರ್ಯದಿಂ
ಬೆನ್ನಿಂ ಪತ್ತಿಸೆ ಸೋವಿದೇವ ಘಟೆಯುಂ ಕೈಕೊಂಡರಾ
ಚೋೞನಂತಂ ನಾಮ್ನಾಯದ ರಾಜ್ಯದೊಳ್
ನಿಱಿಸಿದಸ್ಸೋೞಮಾನ್ವಯೋರ್ವ್ವೀಶ್ವರರ್ ॥

ಎಂಬುದಾಗಿ ಬಣ್ಣಿಸಿದೆ.

ಆ ಶಾಸನದ ಪ್ರಕಾರ ಸೋಮೇಶ್ವರನು ದೇವಗಿರಿಯ ಅರಸನಾಗಿದ್ದ ಕೃಷ್ಣ ಕಂಧರನೊಂದಿಗೆ ಹೋರಾಡಿದುದಲ್ಲದೆ ಚೋಳರಾಜ್ಯದೊಳಗೆ ನುಗ್ಗಿ ಚೋಳರನ್ನು ಅವರ ಅನುವಂಶಿಕ ರಾಜ್ಯದಲ್ಲಿ ಪ್ರತಿಷ್ಠಾಪಿಸಿದನೆಂದೂ ಪಾಂಡ್ಯರನ್ನು ಅಟ್ಟಿಸಿಕೊಂಡು ಹೋಗಿ ಸೋಲಿಸಿದನೆಂದೂ ವ್ಯಾಖ್ಯಾನ ಮಾಡಬಹುದಾಗಿದೆ.

1236 ರಲ್ಲಿ ಪಾಂಡ್ಯರು ಚೋಳರಾಜ್ಯವನ್ನು ಮುತ್ತಿದಾಗ ಹೊಯ್ಸಳರು ಪಾಂಡ್ಯರನ್ನು ಸೋಲಿಸಿದರು. ಪಾಂಡ್ಯರು ತಮ್ಮ ಹಳೆಯ ಮಿತ್ರರಾದ ಕಾಡವರ ಸಹಾಯವನ್ನು ಅಪೇಕ್ಷಿಸಿದಾಗ ಸೋಮೇಶ್ವರನು ತಾನೇ ಸ್ವತಃ ಕಾಡವ ರಾಯನ ವಿರುದ್ಧ ಜಯಪ್ರದವಾಗಿ ಹೋರಾಡಿ ಭಂಡಾರವನ್ನು ವಶಪಡಿಸಿಕೊಂಡನು. ತನ್ನ ಹೆಸರಿನಲ್ಲಿ ದೇವರುಗಳಿಗೆ ಸುವರ್ಣ ಕಾಣಿಕೆಗಳನ್ನು ಅರ್ಪಿಸಲು ಹಂಪೆ, ಪಂಡರಾಪುರಗಳಿಗೆ ರಾಯಭಾರಿಗಳನ್ನು ಕಳುಹಿಸಿದನೆಂದು ಹೇಳಲಾಗಿದೆ. ಈ ವಿಜಯಗಳಿಂದಾಗಿ 1237 ರಲ್ಲಿ ಶ್ರೀರಂಗಂ ಸಮೀಪದ ಕಣ್ಣನೂರಿನಲ್ಲಿದ್ದ ಸೋಮೇಶ್ವರನ ಸ್ಥಾನ ಭದ್ರವಾದಂತೆ ಭಾಸವಾಯಿತು.

ಆದರೆ 1239 ರಲ್ಲಿ ಸೋಮೇಶ್ವರನು ತೆಲುಗು ಅರಸ ಗಂಡ ಗೋಪಾಲನ ದಾಳಿಯನ್ನು ಎದುರಿಸಬೇಕಾಯಿತು. ಮುಂದಿನ ವರ್ಷವೂ ಜರುಗಿದ ಈ ಹೋರಾಟವು ಹೊಯ್ಸಳರಿಗೆ ಅಷ್ಟೇನೂ ಸಮಾಧಾನ ತರಲಿಲ್ಲವೆಂದು ಹೇಳಬಹುದು.

ಇದೇ ಸಮಯದಲ್ಲಿ ಉಚ್ಚಂಗಿಯನ್ನು ಅವಲಂಬಿಸಿದ್ದ ಪಾಂಡ್ಯ ನಾಡಿನಲ್ಲಿ ಸೇವುಣರು ಸಾಕಷ್ಟು ಜಯಗಳಿಸಿದರು. ದಂಡಯಾತ್ರೆಯು ವಿರುದ್ಧ ಸಾಮ್ರಾಜ್ಯವನ್ನು ಬಲಪಡಿಸುವುದರಲ್ಲಿ ಸೋಮೇಶ್ವರನು ವಿಫಲನಾಗಿದ್ದನು. 1241 ರಲ್ಲಿ ಹೊಯ್ಸಳ ಅರಸನ ಆಶ್ರಿತನಾಗಿದ್ದ ಸಿಂಗಣ್ಣ ದಣ್ಣಾಯಕ ಎಂಬಾತನು ಚೋಳರ ದಕ್ಷಿಣ ಪ್ರದೇಶಗಳ ತುಟ್ಟ ತುದಿಯಲ್ಲಿದ್ದ ವೇದಾರಣ್ಯಂ ಎಂಬುದರ ಮೇಲೆ ದಾಳಿ ಮಾಡಿದನು ಹಾಗೂ ಹೊಯ್ಸಳ ರಾಜ್ಯದ ದಕ್ಷಿಣದ ಒಂದು ನಾಡನ್ನೂ ಸೂರೆ ಮಾಡಿದನು. 1243 ರಲ್ಲಿ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. 1244 ರಲ್ಲಿ ಹೊಯ್ಸಳ ಅಧಿಕಾರಿಗಳಲ್ಲೇ ಕಚ್ಚಾಟ ಶುರುವಾಯಿತು. 1245 ರಲ್ಲೂ ಪರಿಸ್ಥಿತಿ ಹತೋಟಿಗೆ ಬರಲಿಲ್ಲ. ಆದರ ಮುಂದಿನ ವರ್ಷವೂ ಸೋಮೇಶ್ವರನು ಚೋಳರ ವ್ಯವಹಾರಗಳಲ್ಲೇ ಮಗ್ನನಾಗಿದ್ದನು.

1247 ರ ವೇಳೆಗೆ ರಾಜೇಂದ್ರ ಚೋಳನು ಹೊಯ್ಸಳರನ್ನು ಧಿಕ್ಕರಿಸಿ, ಸೋಮೇಶ್ವರನ ಪೂರ್ವಭಾವಿ ಅನುಮತಿ ಇಲ್ಲದೆ ಪಾಂಡ್ಯರ ಮೇಲೆ ಯುದ್ಧ ಹೂಡಲು ಹವಣಿಸಿದನು. ಆದರೆ ಚೋಳರ ಸೇನೆಯನ್ನು ತಡೆಗಟ್ಟುವುದರಲ್ಲಿ ಸೋಮೇಶ್ವರನು ಯಶಸ್ವಿಯಾದುದಲ್ಲದೆ ಪಾಂಡ್ಯರೊಂದಿಗೆ ರಕ್ತ ಸಂಬಂಧವನ್ನು ಬೆಳೆಸಿದನು. ಇವೆಲ್ಲಾ ಸಹಜವಾಗಿ ರಾಜೇಂದ್ರ ಚೋಳನಲ್ಲಿ ಹೊಯ್ಸಳರ ಬಗ್ಗೆ ಮಾತ್ಸರ್ಯವನ್ನುಂಟುಮಾಡಿದುವು.

1252 ರ ವೇಳೆಗೆ ಸೋಮೇಶ್ವರನು ದೋರಸಮುದ್ರಕ್ಕೆ ಹೋಗಿದ್ದನೆಂಬುದಕ್ಕೆ ಆಧಾರಗಳಿವೆ. ಕ್ರಿ. ಶ. 1252 ರ ಗುಬ್ಬಿಯ ಶಾಸನದಲ್ಲಿ ಕಣ್ಣನೂರಿನಿಂದ ದೋರಸಮುದ್ರಕ್ಕೆ ಬಂದಿದ್ದ ಸೋಮೇಶ್ವರನು ಶಾಂತಿಯಿಂದಲೂ ವಿವೇಕದಿಂದಲೂ ಭೂಮಿಯನ್ನು ಪಾಲಿಸುತ್ತಿದ್ದನೆಂದು ಹೇಳಲಾಗಿದೆ. (Gb. 76; E. C. XVI). ಈ ಮಧ್ಯೆ ಚೋಳರು ಕಣ್ಣ

ನೂರಿನ ಸಮೀಪದಲ್ಲಿ ಹೊಯ್ಸಳರಿಗೆ ಸೇರಿದ್ದ ಕೆಲವು ಸ್ಥಳಗಳನ್ನು ವಶಪಡಿಸಿ ಕೊಂಡಿದ್ದಂತೆ ಅವರ ಶಾಸನಗಳಿಂದ ವ್ಯಕ್ತವಾಗುವುದು.

ಸೋಮೇಶ್ವರನು ಪರಿಸ್ಥಿತಿಯ ಒತ್ತಡದಿಂದಾಗಿ ಹೆಚ್ಚು ಕಾಲ ದೋರ ಸಮುದ್ರದಲ್ಲಿರಲಾಗಲಿಲ್ಲ. ಕಣ್ಣನೂರಿಗೆ ಹಿಂತಿರುಗಿದ ಅರಸನಿಗೆ ಇದ್ದಕ್ಕಿ-ದ್ದಂತೆ ಜೈನಧರ್ಮದತ್ತ ಒಲವು ಉಂಟಾಯಿತು. ಪ್ರಾಯಶಃ ಅನಾರೋ ಗ್ಯವೂ ಅವನನ್ನು ಕಾಡುತ್ತಿದ್ದಿತು. ಆದ್ದರಿಂದಲೇ ಏನೋ 1254 ರಲ್ಲಿ ಸೋಮೇಶ್ವರನು ಹೊಯ್ಸಳ ಸಾಮ್ರಾಜ್ಯವನ್ನು ತನ್ನಿಬ್ಬರು ಪುತ್ರರ ನಡುವೆ ವಿಭಜಿಸಿ, ಕಣ್ಣನೂರಿಗೆ ರಾಮನಾಥನನ್ನೂ ದೋರಸಮುದ್ರಕ್ಕೆ ಮೂರನೆಯ ನರಸಿಂಹನನ್ನೂ ಅರಸರನ್ನಾಗಿ ಮಾಡಿದನು.

1255 ರ ಬೇಸಿಗೆಯಲ್ಲಿ ಪಾಂಡ್ಯರು ದಂಡೆತ್ತಿ ಬಂದಾಗ ಸೋಮೇಶ್ವ ರನು ಅವರನ್ನು ತಡೆದುದಲ್ಲದೆ ಅವರ ನೆರವಿಗೆ ಬಂದ ಬಾಣರೂ 1256 ರಲ್ಲಿ ಹೊಯ್ಸಳರಿಗೆ ಮಣಿಯುವಂತೆ ಮಾಡಿದನು.

ಆದರೆ ಮುಂದೆ 1257 ರಲ್ಲಿ ಜಾತವರ್ಮನ್ ಸುಂದರ ಪಾಂಡ್ಯನು ಚೋಳ ರಾಜ್ಯದ ಮೇಲೆ ಆಕ್ರಮಣ ಮಾಡಿದಾಗ ಅವನನ್ನು ಎದುರಿಸ ಲಾಗದೆ ಸೋಮೇಶ್ವರನೂ ರಾಮನಾಥನೂ ಪಲಾಯನ ಮಾಡಿ ತಿರುವಣ್ಣಾ ಮಲೆಯಲ್ಲಿ ಆಶ್ರಯ ಪಡೆದರು. ಅಲ್ಲಿಗೆ ಸೋಮೇಶ್ವರನ ಆಳಿಕೆ ಪೂರ್ಣ ವಾಗಿ ಮುಕ್ತಾಯಗೊಂಡಂತಾಯ್ತು. ಸೋಮೇಶ್ವರನ ಸಾವಿನ ಬಗ್ಗೆ ವಿದ್ವಾಂಸರಲ್ಲೇ ಒಮ್ಮತವಿಲ್ಲ. ಪಾಂಡ್ಯರ ಕೈಗೆ ಸಿಕ್ಕದೆ ಓಡಿಹೋದ ಸೋಮೇಶ್ವರನು ಜಂಬುಕೇಶ್ವರದಲ್ಲಿ ಸ್ವಲ್ಪ ಕಾಲ ಆಳುತ್ತಿದ್ದನೆಂಬ ದಾಖಲೆ ಯೊಂದನ್ನು ಡೆರಿಟ್ ಅವರು ಉಲ್ಲೇಖಿಸಿ, ಅವನ ಮರಣದ ಬಗ್ಗೆ ಖಚಿತ ವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲವೆಂದು ಬರೆದಿರುವರು. ಆದರೆ ಡಾ. ಎಂ. ವಿ. ಕೃಷ್ಣರಾವ್ ಅವರು ಜಾತವರ್ಮನ್ ಸುಂದರ ಪಾಂಡ್ಯನೊಂದಿಗೆ ಜರುಗಿದ ಕದನವೊಂದರಲ್ಲಿ ಸೋಮೇಶ್ವರನು ಹತನಾದನೆಂದು ಬರೆದಿದ್ದಾರೆ. ಒಟ್ಟಿನಲ್ಲಿ ಸೋಮೇಶ್ವರನ ಆಳಿಕೆ ತುಂಬಾ ದುರಂತಮಯವಾಗಿತ್ತೆಂದು ಹೇಳಬಹುದು.

ಮೂರನೆಯ ನರಸಿಂಹ (ಕ್ರಿ. ಶ. 1254–1292)

ಬೇಲೂರಿನ ಶಾಸನದ ಪ್ರಕಾರ ಮೂರನೆಯ ನರಸಿಂಹನು ಸೋಮೇಶ್ವರನ ಪತ್ನಿಯರಲ್ಲೊಬ್ಬಳಾದ ಬಿಜ್ಜಳ ರಾಣಿಯ ಉದರದಲ್ಲಿ ಜನಿಸಿದವನು. (Bl. 92, E. C. V). ಅವನು 1240 ರಲ್ಲಿ ಹುಟ್ಟಿದವನು. ಆದ್ದರಿಂದ 1254 ರಲ್ಲಿ ನರಸಿಂಹನು ದೋರಸಮುದ್ರದ ಸಿಂಹಾಸನದ ಮೇಲೆ ಮಂಡಿಸಿದಾಗ ಕೇವಲ ಹದಿನೈದು ವರ್ಷಗಳ ಬಾಲಕನಾಗಿದ್ದನು. 1254 ರ ಬೇಲೂರಿನ ಶಾಸನವೊಂದರಲ್ಲಿ ಮೂರನೆಯ ನರಸಿಂಹನು ದಾನವೊಂದನ್ನು ನೀಡಿದ ಅಂಶವಿದೆ. ಅದಕ್ಕೆ ಸೋಮೇಶ್ವರನ ಸಹಿ ಇದೆ. ಆದರೆ ಅದೇ ವರ್ಷದ ಮತ್ತೊಂದು ಶಾಸನದಲ್ಲಿ ನರಸಿಂಹನು ಅರಸನಾಗಿದ್ದನೆಂದು ಗೋಚರವಾಗುವುದು (Bl. 73, and Bl. 125, E. C. V) ತನ್ನ ಪೂರ್ವಿಕರಿಗೆ ಸೇರಿದ್ದ ರಾಜ್ಯವೂ ದೋರಸಮುದ್ರವೂ ನರಸಿಂಹನ ಪಾಲಿಗೆ ಬಂದಿತೆಂದು ಇತರ ದಾಖಲೆಗಳು ಹೊರಗೆಡವಿವೆ.

ಮೂರನೆಯ ನರಸಿಂಹನು ಅರಸನಾದಾಗ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಅಷ್ಟೇನೂ ಹಿತಕರವಾಗಿರಲಿಲ್ಲ. ಎರಡು ದಶಕಗಳ ನಂತರ ತಮ್ಮ ನಡುವೆ ರಾಜನು ಮತ್ತೊಮ್ಮೆ ವಾಸಿಸುವಂತಾಯಿತೆಂಬುದೇ ಪ್ರಜೆಗಳ ತೃಪ್ತಿಗೆ ಏಕೈಕ ಕಾರಣವಾಯಿತು. 1259 ರಿಂದ ಅನೇಕ ವರ್ಷಗಳ ವರೆಗೆ ಮೂರನೆಯ ನರಸಿಂಹನು ಬಂಡಾಯಗಳನ್ನು ಅಡಗಿಸುವುದರಲ್ಲೂ ಆಕ್ರಮಣಕಾರರನ್ನೂ ದಂಡಿಸುವುದರಲ್ಲೂ ನಿರತನಾಗಿದ್ದನು. ಸಾಂತರರ ಪ್ರದೇಶದ ಮೇಲೆ ಏರಾಟ ಮಾಡಲಾಯಿತು. 1269 ರಲ್ಲಿ ಹೆಂಜೇರುವಿನ ಅರಸನು ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳ ಮೇಲೆ ಮಾಡಿದ ದಾಳಿಯನ್ನು ಹೊಯ್ಸಳರು ಎದುರಿಸಬೇಕಾಯಿತು.

1271 ರಲ್ಲಿ ಸೇವುಣ ಚಕ್ರವರ್ತಿಯಾದ ಮಹಾದೇವನು ನರಸಿಂಹನ ಮೇಲೆ ಯುದ್ಧಕ್ಕೆ ಬಂದು, ತನ್ನ ಅಶ್ವದಳವನ್ನು ಅಲ್ಲಿಯೇ ಬಿಟ್ಟು 'ಪಲಾಯನಂ ಕುಶಲಂ' ಎಂದು ಹೇಳಿಕೊಳ್ಳುತ್ತಾ ಒಂದೇ ರಾತ್ರಿಯಲ್ಲಿ ಭೀತಿಯಿಂದ ಓಡಿಹೋದನೆಂದು ಚನ್ನರಾಯ ಪಟ್ಟಣದ ಶಾಸನವೊಂದು ವರ್ಣಿಸಿದೆ. (Cn. 269, E, C. V). ಆದರೆ ರಾಮಚಂದ್ರ ಸೇವುಣನು

ಪಟ್ಟಕ್ಕೆ ಬಂದ ಮೇಲೆ ಹೊಯ್ಸಳ ರಾಜ್ಯದ ಮೇಲೆ ಸೇವುಣರು ಒಂದೇ ಸಮನೆ ದಾಳಿ ಮಾಡಿದರು. 1273 ರಲ್ಲೂ ಸಾಂತರರೊಂದಿಗೆ ಹೋರಾಟ ವಾಗುತ್ತಲೇ ಇದ್ದಿತು.

ನರಸಿಂಹನು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾಗಲೇ 1274 ರಲ್ಲಿ ಸೋದರನಾಗಿದ್ದ ರಾಮನಾಥನ ಹದ್ದಿನ ಕಣ್ಣು ನರಸಿಂಹನ ಕನ್ನಡ ರಾಜ್ಯದ ಮೇಲೆ ಬಿದ್ದಿತು. ಚನ್ನರಾಯಪಟ್ಟಣ, ಬೇಲೂರು ಹಾಗೂ ಹಾಸನದ ಶಾಸನಗಳಲ್ಲಿ ನರಸಿಂಹ ಮತ್ತು ರಾಮನಾಥರ ನಡುವೆ ಜರುಗಿದ ಹೋರಾಟದ ಪ್ರಸ್ತಾಪ ಬಂದಿದೆ.

ಬೇಲೂರು ಶಾಸನವು ಓರಿಸ್ಸಾದ ಗಜಪತಿ ಮತ್ತು ರಾಮನಾಥರು ಒಂದಾಗಿ ಸೋಲೆಯೂರು (ಪ್ರಾಯಶಃ ತುಮಕೂರು ಜಿಲ್ಲೆಯಲ್ಲಿ) ಎಂಬಲ್ಲಿ ನಡೆದ ಕದನದಲ್ಲಿ ನರಸಿಂಹನ ಮೇಲೆ ಎರಗಿದುದನ್ನು ತಿಳಿಸುತ್ತದೆ. (Bl. 187) ಆ ಕದನದಲ್ಲಿ ರಾಮನಾಥನೇ ಗೆದ್ದನೆಂದು ವಿಲಿಯಂ ಕೊಯೆಲ್‌ಹೋ ಅವರ ಅಭಿಪ್ರಾಯವಾಗಿದೆ. ಕೊನೆಯದಾಗಿ 1290 ರಲ್ಲಿ ರಾಮನಾಥನು ಮತ್ತೆ ಸೈನ್ಯವನ್ನು ತೆಗೆದುಕೊಂಡು ನರಸಿಂಹನ ವಿರುದ್ಧ ಕಾಳಗವಾಡಲು ಬಂದಿದುದನ್ನು ಚನ್ನರಾಯಪಟ್ಟಣದ ಶಾಸನದಲ್ಲಿ ವರ್ಣಿಸಲಾಗಿದೆ. (Cn. 232). ಒಟ್ಟಿನಲ್ಲಿ ಈ ಈರ್ವರು ಸೋದರರ ನಡುವೆ ವಿರಸವಿದ್ದಿತೆಂದೂ ಆಗಾಗ್ಗೆ ಘರ್ಷಣೆಗಳು ತಲೆದೋರುತ್ತಿದ್ದವೆಂದೂ ಊಹಿಸಬಹುದು. ಕೆಲವು ಸ್ಥಳಗಳ ಮೇಲೆ ನರಸಿಂಹನ ಹತೋಟಿ ತಪ್ಪಿ ಹೋಗಿರಬಹುದು.

1276 ರ ವೇಳೆಗೆ ರಾಮಚಂದ್ರ ಸೇವುಣನು ಹೊಯ್ಸಳ ರಾಜ್ಯದ ಮೇಲೆ ದಂಡೆತ್ತಿ ಹೋಗಲಾರಂಭಿಸಿದ್ದನು. ನರಸಿಂಹನು ಸಾಂತರರ ವಿರುದ್ಧ ತನ್ನ ಹೋರಾಟವನ್ನು ಪ್ರಬಲಗೊಳಿಸಿದನು. ಅವನ ದಳಪತಿಯೋರ್ವನು ಹೊಸಗುಂದ ಕೋಟೆಯಲ್ಲಿ ಹೋರಾಡಿದ ನಿದರ್ಶನವಿದೆ. ಮುಂದೆ ಬೆಳವಾಡಿಯಲ್ಲಿ ಹೊಯ್ಸಳರಿಗೂ ಸೇವುಣರಿಗೂ ಘೋರ ಸಂಗ್ರಾಮವಾಗಿ ಸೇವುಣರ ದಳಪತಿಯನ್ನು ಬೆನ್ನಟ್ಟಿ ದುಮ್ಮಿ ಎಂಬ ಊರಿನವರೆಗೆ ಓಡಿಸಿಕೊಂಡು ಹೋಗಲಾಯಿತು. ಸೇವುಣರೊಂದಿಗೆ ಜರುಗಿದ ಸಮರದಲ್ಲಿ ನರಸಿಂಹನಿಗೆ ರಾಮನಾಥನಿಂದ ಯಾವ ನೆರವೂ ದೊರೆಯಲಿಲ್ಲ. ಅವನು ತನ್ನ ದುರಾಕ್ರಮಣವನ್ನು ಹೊಸ ಹುರುಪಿನಿಂದ ಮುಂದುವರಿಸುತ್ತಿದ್ದನು.

1278 ರಲ್ಲಿ ನರಸಿಂಹನ ದಳಪತಿಯಾಗಿದ್ದ ಚಿಕ್ಕ ಕೇಕಯ ದಣ್ಣಾಯಕನು ಕೋಲಾರಕ್ಕೆ ಮೂವತ್ತು ಮೈಲಿ ದೂರದಲ್ಲಿದ್ದ ಬನ್ನೇರ ಘಟ್ಟದವರೆಗೂ ದಂಡೆತ್ತಿ ಹೋದನು. ಆದರೆ ರಾಮನಾಥನದೇ ಮೇಲುಗೈ ಆಗಿ ಅನೇಕ ಊರುಗಳು ಅವನ ವಶವಾದವು. ಅದರಿಂದಾಗಿಯೋ ಏನೋ ಬೇಲೂರಿನ ಶಾಸನವೊಂದು ಅರಸನ ಕೋಪಕ್ಕೆ ಪಾತ್ರನಾಗಿದ್ದ ಚಿಕ್ಕಕೇತಯನ ಬಂಧನವಾಯಿತೆಂದೂ ಮತ್ತೊಬ್ಬ ಅಧಿಕಾರಿಯು (ಆಕಾರ ಮಾಂಡಲಿಕ) ತನ್ನ ಭಂಡಾರದಿಂದ ವಜಾ ಮಾಡಲ್ಪಟ್ಟನೆಂದೂ ತಿಳಿಸುತ್ತದೆ. 1278 ರ ಅಂತ್ಯದ ವೇಳೆಗೆ ಈಗಿನ ಅರಸೀಕೆರೆಯ ವರೆಗೂ ರಾಮನಾಥನ ಅಧಿಕಾರ ವ್ಯಾಪ್ತಿಯ ವಿಸ್ತರಣೆಯಾಗಿದ್ದಿತು. ಸೇವುಣರ ವಿರುದ್ಧ ಸಿಂಗಯ ನಾಯಕನೆಂಬಾತನ ನೇತೃತ್ವದಲ್ಲಿ ಹೊಯ್ಸಳರು ಕೈಗೊಂಡಿದ್ದ ಕಿರುಕುಳ ಯುದ್ಧ ಮಾತ್ರ ನರಸಿಂಹನಿಗೆ ತೃಪ್ತಿಯನ್ನು ತಂದು ಕೊಟ್ಟಿತು.

ಇಷ್ಟೆಲ್ಲಾ ಆದರೂ ನರಸಿಂಹನು ರಾಮನಾಥನೊಂದಿಗೆ ರಾಜಿ ಮಾಡಿಕೊಳ್ಳಲು ಪ್ರಯತ್ನಿಸಿದಂತೆ ಕಾಣುವುದಿಲ್ಲ. ಕ್ರಿ. ಶ. 1277 ರ ಕಾನಕಾನಹಳ್ಳಿಯ (ಕನಕಪುರದ) ಶಾಸನವು ನರಸಿಂಹನ ಮಂತ್ರಿಯಾಗಿದ್ದ ಕುಮಾರ ದೋರಭಕ್ಕರೆ ದಣ್ಣಾಯಕನು ರಾಜ್ಯದ ಪೂರ್ವ ವಿಭಾಗವನ್ನು ಆಳುತ್ತಿದ್ದುದಾಗಿ ತಿಳಿಸುತ್ತದೆ. (Kn. 72, E. C. IX).

1285 ರಲ್ಲಿ ರಾಮನಾಥನ ಪ್ರಾಬಲ್ಯ ಕಡಿಮೆಯಾದಂತೆ ತೋರುತ್ತಿದ್ದಿತು. ನರಸಿಂಹನ ಅದೃಷ್ಟಕೊಂಚ ಕುಲಾಯಿಸಿ ಆ ವರ್ಷ ಅವನ ಸೇನೆಯು ನಿಡುಗಲ್ ಕೋಟೆಯನ್ನು ವಶಪಡಿಸಿಕೊಂಡಿತು. ನರಸಿಂಹನು ಯಾದವರ ಮಿತ್ರನಾಗಿದ್ದ ಇರುಂಗೋಳನನ್ನೂ ಆ ವರ್ಷ ಪೂರ್ಣವಾಗಿ ಪರಾಭವಗೊಳಿಸಿದನಂತೆ. 1287 ರ ವೇಳೆಗೆ ಮತ್ತೆ ಕಷ್ಟಗಳು ತಲೆದೋರಿದುವು. ಹೊಸಗುಂದದ ಸಾಂತರರ ದಾಳಿಯನ್ನು ಎದುರಿಸಬೇಕಾಯಿತಲ್ಲದೆ ಬೇಡರಿಂದಲೂ ರಾಜ್ಯವನ್ನು ರಕ್ಷಿಸಬೇಕಾಯಿತು. 1290 ರಲ್ಲಿ ನರಸಿಂಹನು ರಾಮನಾಥನೊಂದಿಗೆ ಮತ್ತೆ ಸೆಣಸಬೇಕಾಯಿತು. ಮೂರನೆಯ ನರಸಿಂಹನ ಕೊನೆಯ ದಿವಸಗಳಲ್ಲಿ ಅವನ ಮಗನಾದ ವೀರಬಲ್ಲಾಳನಿಂದ ಸಾಕಷ್ಟು ಸಹಾಯ ದೊರೆಯಿತು. ಈ ನಿರಂತರ ಹೋರಾಟಗಳ ಫಲವಾಗಿ

ಅಸ್ವಸ್ಥಗೊಂಡ ನರಸಿಂಹನು 1293 ರಲ್ಲಿ ಮರಣಹೊಂದಿದನು. ಆದರೆ 1291 ರಲ್ಲಿಯೇ ಮರನೆಯ ಬಲ್ಲಾಳನು ಸಾಮ್ರಾಟನ ಬಿರುದುಗಳನ್ನು ಧರಿಸಿ, ರಾಜ್ಯವಾಳಲು ಪ್ರಾರಂಭಿಸಿದ್ದನೆಂದು ಶಾಸನಗಳು ಹೇಳುತ್ತವೆ.

ಮೂರನೆಯ ನರಸಿಂಹನು ತನ್ನ ಆಳಿಕೆಯ ಉದ್ದಕ್ಕೂ ಅಪಾರ ಕಷ್ಟ ನಷ್ಟಗಳನ್ನು ಎದುರಿಸಬೇಕಾಗಿ ಬಂದರೂ ಅವನು ತೋರಿಸಿದ ಧೈರ್ಯ ಮತ್ತು ಕಷ್ಟ ಸಹಿಷ್ಣುತೆ ಪ್ರಶಂಸನೀಯವಾಗಿವೆ.

ರಾಮನಾಥ ಕ್ರಿ. ಶ.(1254–1295)

1254 ರಲ್ಲಿ ಕಣ್ಣನೂರಿನಲ್ಲಿ ಅರಸನಾದ ರಾಮನಾಥನು ಸೋಮೇಶ್ವರನ ಪತ್ನಿಯಲ್ಲಿ ಒಬ್ಬಳಾದ ದೇವಲ ಮಹಾದೇವಿಯ ಮಗನು. ಇವನಿಗೆ ದೊರೆತ ಅರ್ಧ ರಾಜ್ಯದಲ್ಲಿ ಕೋಲಾರವೂ ಶ್ರೀರಂಗಂ ವರೆಗಿನ ತಮಿಳು ಸೀಮೆಯೂ ಸೇರಿದ್ದವು. ಇವನು 1257 ರಲ್ಲಿ ಸ್ವಲ್ಪ ಕಾಲ ಜಾತವರ್ಮನ್ ಸುಂದರ ಪಾಂಡ್ಯನ ದಂಡಯಾತ್ರೆಯಿಂದಾಗಿ ತಿರುವಣ್ಣಾಮಲೆಯಲ್ಲಿ ತಂಗಿದ್ದನು. 1260 ರ ವೇಳೆಗಾವರೂ ಕಣ್ಣನೂರಿಗೆ ಹಿಂತಿರುಗಿದ್ದನೆಂದು ಶಾಸನಗಳಿಂದ ಗೊತ್ತಾಗುವುದು. ಇವನ ಆಳಿಕೆಯು ಮೊದಮೊದಲು ಪಾಂಡ್ಯರ ಮೇಲುಸ್ತುವಾಗಿ ಒಳಗಾಗಿದ್ದಿತೆಂದು ಚರಿತ್ರಕಾರರ ಅಭಿಪ್ರಾಯವಾಗಿದೆ. ಇವನ ಪಾಲಿಗೆ ದೊರೆತಿದ್ದ ಪ್ರದೇಶವು ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿದ್ದರೂ ರಾಜಕೀಯ ದೃಷ್ಟಿಯಿಂದ ಅದಕ್ಕೆ ಸುರಕ್ಷತೆ ಇರಲಿಲ್ಲವೆಂದು ಡೆರೆಟ್ ಅವರು ಬರೆದಿರುವುದು ಅರ್ಥ ಗರ್ಭಿತವಾಗಿದೆ. ಆದ್ದರಿಂದಲೇ ಅವನು ಮೂರನೆಯ ನರಸಿಂಹನ ರಾಜ್ಯದ ಒಂದು ಭಾಗವನ್ನು ದೊರೆಕಿಸಿಕೊಳ್ಳಲು ಪ್ರಯತ್ನಿಸಿರಬೇಕು. ಸೇವುಣರು ಹೊಯ್ಸಳ ರಾಜ್ಯದ ಮೇಲೆ ದಂಡೆತ್ತಿ ಹೋದಾಗ ರಾಮನಾಥನು ನರಸಿಂಹನ ನೆರವಿಗೆ ಹೋಗುವುದರ ಬದಲು, ಅವನು ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗಲೇ, ತನ್ನ ದಂಡಯಾತ್ರೆಯನ್ನೂ ಪ್ರಾರಂಭಿಸಿದನು. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅವನ ಶಾಸನಗಳು ಹೆಚ್ಚಾಗಿ ದೊರೆಯುವುದರಿಂದ ಆ ಪ್ರದೇಶಗಳ ಅನೇಕ ಭಾಗಗಳು ಅವನ ಆಳಿಕೆಗೆ ಒಳಗಾಗಿದ್ದಿರಬಹುದು.

ರಾಮನಾಥನಿಗೂ ಪಾಂಡ್ಯರ ಮಾರವರ್ಮನಿಗೂ ಘರ್ಷಣೆಯಾಗಿ ಕಣ್ಣನೂರಿನಿಂದ ರಾಮನಾಥನ ಉಚ್ಚಾಟನೆಯಾಯಿತು. 1283-84 ರಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಕುಂದಾಣೆಯು ಅವನ ರಾಜಧಾನಿ ಯಾಯಿತು. ಅದು ದೇವನಹಳ್ಳಿ ತಾಲೂಕಿನಲ್ಲಿರುವ ಕುಂದಣವಿರಬಹು ದೆಂದು ಬಿ. ಎಲ್. ರೈಸ್ ಅವರು ಅಭಿಪ್ರಾಯಪಟ್ಟಿದ್ದಾರೆ. ಅದು ಹೊಸೂ ರಿನ ಬಳಿ ಇರುವ ಹೆಸರ್-ಕುಂದಾಣೆಯೇ ಇರಬಹುದೆಂದು ಶ್ರೀ ಕೃಷ್ಣ ಶಾಸ್ತ್ರಿ ಮತ್ತು ಮಿ॥ ವಿಲಿಯಂ ಕೋಯೆಲ್ ಎಂಬ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ರಾಮನಾಥನು ರಾಜ್ಯದ ಆದಾಯವನ್ನು ಹೆಚ್ಚಿಸಿಕೊಳ್ಳ ಲೋಸುಗ ಪುರಾತನ ಹಾಗೂ ಒಡೆದು ಹೋಗಿದ್ದ ಕೆರೆಗಳನ್ನು ದುರಸ್ತು ಮಾಡಿಸಿದುದಲ್ಲದೆ ಹೊಸ ಕೆರೆಗಳನ್ನೂ ನಿರ್ಮಿಸಿದನು. ಅಣ್ಣಾಮಲೈ ದೇವರ್, ಇಳವಂಜಿರಾಯರ್, ಮಹಾಪ್ರಧಾನ ವೀರಯ್ಯ ದಣ್ಣಾನಾಥ ಮಂಜಿಯ ಮಾವುತ್ತರ್, ನಿಜಯದ ದಣ್ಣಾಯಕ, ಕಂಬಯ ದಣ್ಣಾಯಕ ಮುಂತಾದವರು ರಾಮನಾಥನ ಮಂತ್ರಿಮಂಡಲದಲ್ಲಿದ್ದರೆಂದು ಶಾಸನ ಗಳಿಂದ ಗೊತ್ತಾಗುವುದು. ರಾಮನಾಥನ ರಾಣಿಯರಲ್ಲಿ ಕಮಲಾದೇವಿಯ ಹೆಸರು ಮಾತ್ರ ಬೆಳಕಿಗೆ ಬಂದಿದೆ.

ರಾಮನಾಥನ ಕಲಹವು ಮೂರನೆಯ ನರಸಿಂಹನೊಂದಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅದು ನರಸಿಂಹನ ಉತ್ತರಾಧಿಕಾರಿಯಾದ ಮೂರ ನೆಯ ಬಲ್ಲಾಳನನ್ನೂ ಒಳಗೊಂಡಿತು. 1292 ರಲ್ಲಿ ರಾಮನಾಥನು ಬಲ್ಲಾ ಳನ ಅಧೀನದಲ್ಲಿದ್ದ ಬೆಂಗಳೂರು ಜಿಲ್ಲೆಯ ದಕ್ಷಿಣ ಭಾಗವನ್ನು ಮುತ್ತಿದನು. ಹಿರಿಯ ಗಂಗವಾಡಿಯ ದಕ್ಷಿಣದ ಫಲವತ್ತಾದ ಪ್ರದೇಶಗಳು ಅವನಿಗೆ ದಕ್ಕ ದಂತೆ ಮಾಡುವುದರಲ್ಲಿ ಬಲ್ಲಾಳನು ಯಶಸ್ವಿಯಾದನು. 1295 ರಲ್ಲಿ ರಾಮ ನಾಥನು ಕುಣಿಗಲ್ ಮೇಲೆ ದಾಳಿ ಮಾಡಿದನು. ಆದರೆ ಕೆಲವು ತಿಂಗಳು ಗಳ ನಂತರ ಬಲ್ಲಾಳನ ದಾಳಿಗೆ ರಾಮನಾಥನೇ ಸಿಕ್ಕಬೇಕಾಯಿತು. ಆ ವೇಳೆಗೆ ಅವನಿಗೆ ಅವಸಾನ ಕಾಲ ಸಮೀಪಿಸುತ್ತಿದ್ದಿತು. ಅವನ ಮಗನಾದ ವಿಶ್ವನಾಥನು ರಾಜ್ಯಸೂತ್ರಗಳನ್ನು ವಹಿಸಿಕೊಂಡಿದ್ದನು. ಅದೇ ವರ್ಷ ರಾಮನಾಥನು ತೀರಿಹೋದನು. ಮೂರು ವರ್ಷಗಳ ನಂತರ ವಿಶ್ವನಾಥನೂ ಹೇಗೋ ಕಣ್ಮರೆಯಾದನು. ಆದರೆ, ವಿಶ್ವನಾಥನು ಕ್ರಿ. ಶ. 1293 ರಿಂದ

1301 ರವರೆಗೂ ಸುಮಾರು ಎಂಟು ವರ್ಷಗಳ ಕಾಲ ಆಳಿರಬಹುದೆಂದು ವಿಲಿಯಂ ಕೊಯೆಲ್ ಹೋ ಬರೆದಿದ್ದಾರೆ.

ಮೂರನೆಯ ಬಲ್ಲಾಳ (ಕ್ರಿ. ಶ. 1292–1342)

ಚಿಕ್ಕಮಗಳೂರಿನ ಶಾಸನದ ಪ್ರಕಾರ 1292 ನೇ ಫೆಬ್ರವರಿ ಒಂದನೆಯ ದಿನಾಂಕ ಪಟ್ಟಾಭಿಷಿಕ್ತನಾದ ಮೂರನೆಯ ಬಲ್ಲಾಳನು ಮೂರನೆಯ ನರಸಿಂಹನ ಪತ್ನಿ (ಚಾಲುಕ್ಯ ರಾಜಕುಮಾರಿ) ಯಾದ ಪಟ್ಟ ಮಹಾದೇವಿಯ ಗರ್ಭದಲ್ಲಿ ಜನಿಸಿದವನು. (Cm. 36, E. C. VI)

ಗುಂಡ್ಲುಪೇಟೆಯ ಶಾಸನಗಳು ಬಲ್ಲಾಳನನ್ನು ಪಲ್ಲವ ಸೂರ್ಯ, ಪಲ್ಲವ ತ್ರಿನೇತ್ರ ಎಂಬುದಾಗಿ ಸಂಬೋಧಿಸಿವೆ. (Gu, 58 and 69, E. C. IV .

ಬಲ್ಲಾಳನು ರಾಜನಾದ ಮೇಲೆ ಕೆಲವು ವಾರಗಳಲ್ಲಿಯೇ ಅಲ್ಲಲ್ಲಿ ಅಂತರ್ಯುದ್ಧದ ಪರಿಸ್ಥಿತಿಯನ್ನೂ ರಾಮನಾಥನ ದಂಡಯಾತ್ರೆಯನ್ನೂ ವೀಕ್ಷಿಸಬೇಕಾಯಿತು. ಹಿರಿಯ ಗಂಗವಾಡಿಯ ದಕ್ಷಿಣದ ಹೊರಭಾಗದಲ್ಲಿಯೇ ಅವನ ಸೇನೆಯನ್ನು ತಡೆಯುವುದರಲ್ಲಿ ಬಲ್ಲಾಳನು ಜಯಪ್ರದನಾದನು. ಮೂರು ವರ್ಷಗಳ ನಂತರ ತಾನೇ ಸಿರೆನಾಡಿನಲ್ಲಿ ರಾಮನಾಥನ ಮೇಲೆ ದಾಳಿ ಮಾಡಿದನು.

ಈ ಮಧ್ಯೆ ಬಲ್ಲಾಳನಿಂದ ಕಳುಹಿಸಲ್ಪಟ್ಟ ಬೆಟ್ಟರಸ ದಣ್ಣಾಯಕನು ಚೆಂಗಾಳ್ವರ ಹಿಡಿತದಲ್ಲಿದ್ದ ಪಾಲ್ಪರೆ ಎಂಬ ಪಟ್ಟಣವನ್ನು ವಶಪಡಿಸಿಕೊಂಡರೂ ಅದನ್ನು ಉಳಿಸಿಕೊಳ್ಳಲಾರದೆ ಹೋದನು. 1299 ರಲ್ಲಿ ಸಾಂತರ ರಾಜ್ಯದ ಹೊಸಗುಂದದಲ್ಲಿದ್ದ ಹೊಯ್ಸಳರ ಪ್ರತಿನಿಧಿಯೊಬ್ಬನು ಪ್ರಾಯಶಃ ತಾನೇ ಹೊಸಗುಂದವನ್ನು ಆಕ್ರಮಿಸುವ ಪ್ರಯತ್ನ ಮಾಡಿದುದರಿಂದಲೋ ಏನೋ ಸಾಂತರರೊಂದಿಗೆ ಹೋರಾಡಬೇಕಾಯಿತಲ್ಲದೆ ಮುಂದಿನ ವರ್ಷ ಬನವಾಸಿ ಪ್ರಾಂತಕ್ಕೆ ಹೋಗಿ ತಂಗಿದ್ದಾಗ, ಕದಂಬ ಕಾಮದೇವರಸನ ಮಂತ್ರಿಯ ದಾಳಿಗೂ ಗುರಿಯಾಗಬೇಕಾಯಿತು. 1300 ರಲ್ಲಿ ಬಲ್ಲಾಳನು

ಹಳೇಬೀಡಿಗೆ ಬದಲು ಹೊಸವೀಡು (ಪುದು ಪಾಡೈವೀಡು) ಎಂಬ ನೂತನ ರಾಜಧಾನಿ ಅಥವಾ ಶಿಬಿರವನ್ನು ಸ್ಥಾಪಿಸಿದನು.

1301 ರ ಅಂತ್ಯದಲ್ಲಿ ನಡೆದ ಮಹತ್ತರ ಘಟನೆಯೆಂದರೆ ವಿಭಜನೆಯಾಗಿದ್ದ ಹೊಯ್ಸಳ ರಾಜ್ಯವು ಮೂರನೆಯ ಬಲ್ಲಾಳನ ನೇತೃತ್ವದಲ್ಲಿ ಮತ್ತೆ ಒಂದಾಯಿತು. ಗೋರಿಬಿದನೂರಿನ ಶಾಸನದಿಂದ ಬಲ್ಲಾಳನ ಸ್ಥಾನ ಭದ್ರವಾಗಿತ್ತೆಂದು ತಿಳಿಯಬಹುದು. ಸಾಮ್ರಾಜ್ಯದ ಏಳಿಗೆಗಾಗಿ ನಾಡಿನ ಎಲ್ಲಾ ದೇವಾಲಯಗಳಲ್ಲಿ ಪ್ರಾರ್ಥನೆ, ಪೂಜೆಗಳನ್ನು ಸಲ್ಲಿಸಬೇಕೆಂದು ರಾಜಾಜ್ಞೆ ಹೊರಟು, ದೇವಾಲಯಗಳಿಗೆ ಜಮೀನುಗಳನ್ನು ದಾನಮಾಡಲಾಯಿತೆಂದು ಚಿಕ್ಕಬಳ್ಳಾಪುರ ಮತ್ತು ಮಾಲೂರಿನ ಶಾಸನಗಳು ಹೊರಗೆಡವಿವೆ. (Cb. 20, Mv. 71 and 100 E. C. X).

1303 ರಲ್ಲಿ ಸೇವುಣರೊಂದಿಗೆ ಮತ್ತೊಮ್ಮೆ ಘರ್ಷಣೆಯಾಗಿ ಹೊಯ್ಸಳ ಅರಸನ ಬಂಧುವಾಗಿದ್ದ ಸೋಮೆಯ ದಣ್ಣಾಯಕನು ಸಾಯುವವರೆಗೂ ಹೋರಾಡಿದನು. 1305 ರ ವರೆಗೂ ಸೇವುಣರೊಂದಿಗೆ ಸಮರವಾಗಿ ಬಲ್ಲಾಳನ ಪರಾಕ್ರಮದ ಅರಿವು ಶತ್ರುಗಳಿಗಾಗಿತ್ತೆಂದು ಶಾಸನಗಳಿಂದ ಗೊತ್ತಾಗುವುದು. 1309 ರ ವರೆಗೂ ಕುಂದಾಣಿರಾಜ್ಯದ ಪೂರ್ವಗಡಿಗಳಾಚೆ ಹೊಯ್ಸಳರು ಪಾಂಡ್ಯ, ಕಾಡವ ಮುಂತಾದವರೊಂದಿಗೆ ಹೋರಾಟದಲ್ಲಿ ತೊಡಗಿದ್ದರು. ಹಿರಿಯ ಬಲ್ಲಪ್ಪ ದಣ್ಣಾಯಕನೆಂಬುವನು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದನು.

ಈ ಯುದ್ಧಗಳಿಂದಾಗಿ ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಹದಗೆಟ್ಟಿತು. ಅರಸನ ಪ್ರಾಬಲ್ಯವೂ ಕುಂದಿತು. ದಣ್ಣಾಯಕರು ಮತ್ತು ಮಂತ್ರಿಗಳು ಆಡಳಿತದ ಮೇಲೆ ಹೆಚ್ಚಿನ ಪ್ರಭಾವ ಬೀರಲಾರಂಭಿಸಿದರು. ಮೂರನೆಯ ನರಸಿಂಹನ ಮಹಾಮಂತ್ರಿಯಾಗಿದ್ದ ಪೆರುಮಾಳೆ ದೇವನು ಇವನ ಕಾಲದಲ್ಲಿಯೂ ಮುಂದುವರಿದು ರಾಜಾಧಿಕಾರವನ್ನು ಚಲಾಯಿಸುತ್ತಿದ್ದನೆಂದು ಗುಬ್ಬಿಯ ಶಾಸನದಿಂದ ಗೊತ್ತಾಗುವುದು. (Gu. 66).

1307 ರಲ್ಲಿ ಮಾಡಿಗಿ ದೇವದಣ್ಣಾಯಕನೊಂದಿಗೆ ಮೂರನೆಯ

ಬಲ್ಲಾಳನು ಆಳುತ್ತಿದ್ದನೆಂದು ಹೊಳಲ್ಕೆರೆ ಶಾಸನವು ಸೂಚಿಸುತ್ತದೆ. (Hk, 136, E. C. XI).

ರಾಜ್ಯದ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲದಿದ್ದ ಕಾಲದಲ್ಲಿಯೇ ಉತ್ತರ ಭಾರತದಿಂದ ದೊಡ್ಡ ವಿಪತ್ತನ್ನು ಬಲ್ಲಾಳನು ಎದುರಿಸಬೇಕಾಯಿತು. 1311 ರಲ್ಲಿ ದೆಹಲಿಯಲ್ಲಿ ಆಳುತ್ತಿದ್ದ ಅಲ್ಲಾವುದ್ದೀನ್ ಖಿಲ್ಜಿಯು ಪ್ರತಿನಿಧಿಯಾದ ಮಲ್ಲಿಕ್ಕಾಫರ್ ಅಥವಾ ಮಲಿಕ್ ನೈಬನು ದಕ್ಷಿಣ ಭಾರತದ ಐಶ್ವರ್ಯವನ್ನು ಕೊಳ್ಳೆ ಹೊಡೆಯಲೋಸುಗ ದಂಡಯಾತ್ರೆಯನ್ನು ಪ್ರಾರಂಭಿಸಿ, ಸೇವುಣರ ಸಹಕಾರದಿಂದ ದೋರಸಮುದ್ರದತ್ತ ನುಗ್ಗಿದನು. ಸುಂದರ ಎಂಬ ಪಾಂಡ್ಯ ಸಹೋದರನ ಸಹಾಯಕ್ಕಾಗಿ ಕಣ್ಣನೂರಿನ ಮಾರ್ಗವಾಗಿ ಹೋಗುತ್ತಿದ್ದ ಮೂರನೆಯ ಬಲ್ಲಾಳನು ಕೂಡಲೆ ರಾಜಧಾನಿಗೆ ಹಿಂತಿರುಗಿದನು. ಒಂದೆರಡು ವಾರಗಳ ಪ್ರತಿಭಟನೆಯಾದ ಮೇಲೆ ಹೊಯ್ಸಳ ಅರಸನು ಬೇಷರತ್ತಾಗಿ ಶರಣಾಗತನಾದನೆಂದು ಅಮಿರ್ ಖುಸ್ರುವಿನಂತಹ ಮುಸ್ಲಿಂ ಚರಿತ್ರಕಾರರು ಹೇಳಿಕೊಂಡಿದ್ದಾರೆ. ಮಲಿಕ್‌ಕಾಫರನು ಬಲ್ಲಾಳನಿಂದ ಭಾರಿ ಮೊತ್ತದ ಹಣವನ್ನೂ ಆನೆಗಳನ್ನೂ ವಸೂಲು ಮಾಡಿಕೊಂಡನು. ಅವನ ಸಲಹೆಯಂತೆ ಬಲ್ಲಾಳನು ಚೋಳ ಪಾಂಡ್ಯ ರಾಜ್ಯಗಳ ಮೇಲೆ ದಂಡೆತ್ತಿ ಹೋಗಲು ಮುಸ್ಲಿಂ ಸೇನೆಗೆ ಸಹಾಯಮಾಡಿ, ಆ ಮೂಲಕ ಕಾವೇರಿ ಕಣಿವೆಯ ಮೇಲೆ ತನ್ನ ಹಿಡಿತವನ್ನು ಬಲಗೊಳಿಸಿಕೊಂಡಿದ್ದು ದಲ್ಲದೆ ಒಂದು ವರ್ಷದ ಕಂದಾಯವನ್ನೂ ವಸೂಲು ಮಾಡಿಕೊಂಡನೆಂದು ಡೆರೆಟ್ ಅವರು ಬರೆದಿದ್ದಾರೆ. ಮಲಿಕ್‌ಕಾಫರನು ದೆಹಲಿಗೆ ವಾಪಸು ಹೊರಟಾಗ ಅವನ ಸಂಗಡ ರಾಜಕುಮಾರ ವೀರಬಲ್ಲಾಳನನ್ನು ಕಳುಹಿಸಿಕೊಡಲಾಯಿತು. 1313 ರಲ್ಲಿ ಅವನು ದೋರಸಮುದ್ರಕ್ಕೆ ಹಿಂತಿರುಗಿದನು. ಸರ್ ರಿಚರ್ಡ ಟೆಂಪಲ್ ಎಂಬ ಆಂಗ್ಲ ಬರಹಗಾರರು ಮಾತ್ರ ಮೂರನೆಯ ಬಲ್ಲಾಳನನ್ನು ದೆಹಲಿಗೆ ಕರೆದುಕೊಂಡು ಹೋಗಲಾಗಿತ್ತೆಂದೂ ಅವನು ತನ್ನ ರಾಜಧಾನಿಗೆ ಹಿಂತಿರುಗಲು ಅಲ್ಲಾವುದ್ದೀನ್ ಖಿಲ್ಜಿ ಅನುಮತಿ ಇತ್ತನೆಂದೂ ಬರೆದಿದ್ದಾರೆ.

ಶಿವಮೊಗ್ಗಿಯ ಶಾಸನವು ತುರುಕರೊಂದಿಗೆ ಯುದ್ಧ ಮುಗಿದು, ತನ್ನ ಮಗನಾದ ವೀರ ಬಲ್ಲಾಳನು ದಿಲ್ಲಿಯಿಂದ ವಾಪಸಾಗಿ ನಗರವನ್ನು ಪ್ರವೇಶಿ

ಸುವ ಸಂದರ್ಭದಲ್ಲಿ ಮೂರನೆಯ ಬಲ್ಲಾಳನು ಕೂಡ್ಲಿಯ ರಾಮನಾಥ ದೇವರಿಗಾಗಿ ಕೆಲವು ತೆರಿಗೆಗಳನ್ನು ಬಿಟ್ಟದುದಾಗಿ ಸೂಚಿಸುವುದು (Sh. 68, E. C. VII).

ಆಗಿನ್ನೂ ಅರಾಜಕ ಪರಿಸ್ಥಿತಿ ತಾಂಡವವಾಡುತ್ತಿದ್ದಿತು. ಅರಸನ ಪ್ರತಿಷ್ಠೆ ಇಳಿಮುಖವಾಗಿದ್ದಿತು. 1315 ರಲ್ಲಿ ಮಾಧವ ದಣ್ಣಾಯಕನು ತೆರಕಣಾಂಬಿಯಿಂದ ಕೆಲವು ಭಾಗಗಳನ್ನು ಆಳುತ್ತಿದ್ದನು. 1316 ರಲ್ಲೋ ಅಥವಾ ಅದರ ಮುಂದಿನ ವರ್ಷವೋ ಮೂರನೆಯ ಬಲ್ಲಾಳನು ಸುಂದರ ಪಾಂಡ್ಯನ ಪರವಾಗಿ ಹೋರಾಡಲು ರಾಜ್ಯಕ್ಕೆ ಹೋಗಿ ಅರುಣ ಸಮುದ್ರ ವೆಂಬ ಪಟ್ಟಣವನ್ನು ಒಳಗೊಂಡಿದ್ದ ಪ್ರದೇಶವನ್ನು ಕಾಣಿಕೆಯಾಗಿ ಪಡೆದನು.

1320 ರಲ್ಲಿ ರಾಜ್ಯದಾಹದಿಂದ ದಂಡೆತ್ತಿ ಬಂದ ಸೇವುಣರ ದಳಪತಿ ಯಾದ ಕಂಪಿಲದೇವನನ್ನು ಬಲ್ಲಾಳನು ಸಾಂತರರ ನೆರವಿನಿಂದ ಸೋಲಿಸಿ, ಒಪ್ಪಂದದ ಮೂಲಕ ಪೆನುಗೊಂಡ ಪ್ರದೇಶವನ್ನು ಆಕ್ರಮಿಸಿದನು. ಅದರ ಆಳಿಕೆಗಾಗಿ ಮಾಚೆಯ ದಣ್ಣಾಯಕನೆಂಬ ಸಮೀಪ ಬಂಧುವನ್ನು ನೇಮಿಸ ಲಾಯಿತು.

ಮರುವರ್ಷವೋ ಅಥವಾ ಅದರ ಮುಂದಿನ ವರ್ಷವೋ ಬಲ್ಲಾಳನು ಹರಿಹರಪುರದಲ್ಲಿದ್ದ ಅಣೆಕಟ್ಟು ಮತ್ತು ನಾಲೆಗಳನ್ನು ನೋಡುವುದಕ್ಕಾಗಿ ಹೋಗಿದ್ದು, ತೆರಿಗೆ ವಸೂಲಿ ಮುಂತಾದುವುಗಳಿಗೆ ಸಂಬಂಧಿಸಿದ ತಾಮ್ರ ಶಾಸನವನ್ನು ಹರಿಹರಭಟ್ಟೋಪಾಧ್ಯಾಯ ಮತ್ತಿತರ ನೂರಿಪ್ಪತ್ತಾರು ಬ್ರಾಹ್ಮಣರುಗಳಿಗೆ ಅನುಕೂಲವಾಗುವಂತೆ ಅನುಗ್ರಹಿಸಿದನು. Kp. 44, E. C. IV).

1322 ರ ಡಿಸೆಂಬರ್ ತಿಂಗಳಿನಲ್ಲಿ ಉಣ್ಣಾಮಲೆಯ ಪಟ್ಟಣದಲ್ಲಿ, ಅಂದರೆ, ತಿರುವಣ್ಣಾಮಲೆಯಲ್ಲಿ ವಾಸಿಸಲು ಬಲ್ಲಾಳನು ಅಲ್ಲಿಗೆ ಹೋದನು. ಅಂದಿನಿಂದ ತಿರುವಣ್ಣಾಮಲೆ ಹೊಯ್ಸಳರ ಉಪರಾಜಧಾನಿಯಾಯಿತು. ಆ ಊರು ಬಲ್ಲಾಳನ ಹತೋಟಿಗೆ ಹೇಗೆ ಒಳಗಾಯಿತೆಂಬುದಕ್ಕೆ ಸ್ಪಷ್ಟ ವಾದ ದಾಖಲೆಗಳಿಲ್ಲ. ಅಲ್ಲಿಗೆ ಹೋದ ಮೇಲೂ ಹೊಯ್ಸಳರಿಗೆ ಕಂಪಿಲ

ದೇವನಕಾಟ ತಪ್ಪಲಿಲ್ಲ. ಆದರೆ 1324 ರಲ್ಲಿ ಪೆನುಗೊಂಡೆಯಲ್ಲಿದ್ದ ಮಾಚೆಯ ದಣ್ಣಾಯಕನು ಆ ಕುತ್ತಿನಿಂದ ಪಾರಾದನು. ಪ್ರಾಯಶಃ ಬಲ್ಲಾಳನಿಗೂ ಕಂಪಿಲನಿಗೂ ರಾಜಿಯಾಯಿತು.

1326 ರಲ್ಲಿ ಮುಹಮ್ಮದ್ ಬಿನ್ ತೊಘಲಕನು ದೆಹಲಿಯ ಅರಸನಾಗಿದ್ದಾಗ ಅವನ ಬಂಧುಗಳಲೊಬ್ಬನಾದ ಗುರ್ಷಸ್ಪ್ ಎಂಬ ಸರದಾರನು ಬಂಡಾಯವೆದ್ದು ಆಶ್ರಯಕ್ಕಾಗಿ ಕಂಪಿಲದೇವನಲ್ಲಿಗೆ ಪಲಾಯನ ಮಾಡಿದನು. ಸುಲ್ತಾನನ ಸೇನೆಯು ಅಲ್ಲಿಗೆ ಧಾವಿಸಲಾಗಿ, ರಹಸ್ಯ ಮಾರ್ಗವಾಗಿ ಆ ಬಂಡಾಯಗಾರನು ದೋರಸಮುದ್ರಕ್ಕೆ ಕಂಪಿಲದೇವನಿಂದ ಕಳುಹಿಸಲ್ಪಟ್ಟನು. ಕಂಪಿಲನು ಕಾಳಗದಲ್ಲಿ ಪ್ರಾಣತೆತ್ತನು. ಗುರ್ಷಾಸ್ಪನಿಗೆ ಆಶ್ರಯಕೊಡಲು ಅಂಜಿದ ಬಲ್ಲಾಳನು ಅವನನ್ನು ಮುಸ್ಲಿಂ ದಳಪತಿಗೆ ಒಪ್ಪಿಸಿದನು. ಗುರ್ಷಸ್ಪನ ಬದುಕು ದುರಂತದಲ್ಲಿ ಪರ್ಯವಸಾನವಾಯಿತು. 1326 ರ ಮುಸ್ಲಿಂ ದಂಡಯಾತ್ರೆಯಿಂದ ದೋರಸಮುದ್ರವು ಪೂರ್ಣವಾಗಿ ನಾಶವಾಯಿತು. ಆ ಪ್ರಕರಣದ ತರುವಾಯ ಬಲ್ಲಾಳನ ಸ್ಥಾನ ಇನ್ನೂ ಶಿಥಿಲವಾಯಿತು. 1327 ರ ಹೆಗ್ಗಡದೇವನ ಕೋಟೆಯ ಶಾಸನದಲ್ಲಿ ಅರಸನಿಗೆ ಅನ್ವಯಿಸುವ ಮಾಮೂಲು ವಿಶೇಷಣಗಳನ್ನೆಲ್ಲಾ ವರ್ಜಿಸಿ ಕೇವಲ 'ಪೃಥ್ವಿ ರಾಜ್ಯಂ ಮಾಡುತ್ತಿರಲು' ಎಂದಷ್ಟೇ ತಿಳಿಸಲಾಗಿದೆ. (Hg. 98, E. C. IV).

1328 ರಲ್ಲಿ ಬಲ್ಲಾಳನು ತಿರುವಣ್ಣಾಮಲೆಯಲ್ಲಿಯೇ ಇದ್ದನು. 1330 ರಲ್ಲಿ ಅವನು ವಿರೂಪಾಕ್ಷ ಪಟ್ಟಣದಲ್ಲಿ ಬೀಡುಬಿಟ್ಟಿದ್ದನು. ಅದನ್ನು ಅರಸೀಕೆರೆಯ ಶಾಸನವು ಸಮರ್ಥಿಸುತ್ತದೆ (Ak. 66, E. C. V). ವಿರೂಪಾಕ್ಷ ಪಟ್ಟಣವು ಯಾವುದೆಂಬುದು ಊಹಾಪೋಹಕ್ಕೆ ಆಸ್ಪದವನ್ನಿತ್ತಿದೆ. ತುರುಕರಿಂದ ದೋರಸಮುದ್ರವು ನಾಶವಾದ ಮೇಲೆ 1331 ರಲ್ಲಿ ಅರಸನು ವಿರೂಪಾಕ್ಷ ಹೊಸ ದುರ್ಗದಲ್ಲಿದ್ದನೆಂದು ಗುಬ್ಬಿಯ ಶಾಸನವೊಂದು ತಿಳಿಸುತ್ತದೆ. (Gb. 30, E. C. XII).

1331 ರಿಂದ ಹೊಯ್ಸಳ ರಾಜ್ಯದಲ್ಲಿ ಮುಸ್ಲಿಂ ಸಾಹಸಿಗಳ ಚಟುವಟಿಕೆ ಮತ್ತೆ ಆರಂಭವಾಯಿತು. ಅವರು ಮೊದಲು ಸ್ವಲ್ಪ ಕಷ್ಟನಷ್ಟ

ಗಳನ್ನು ಅನುಭವಿಸಿದಾಗ್ಯೂ ಮೈಸೂರಿನ ಪಶ್ಚಿಮದಲ್ಲಿ ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಿದರು. ಬಲ್ಲಾಳನೇನೋ ರಾಜ್ಯದ ಪಶ್ಚಿಮ ಗಡಿಯನ್ನು ಬಲಗೊಳಿಸಲು ಕ್ರಮಗಳನ್ನು ಕೈಗೊಂಡನು. ರಾಜಕೀಯ ದೃಷ್ಟಿಯಿಂದ ಬಲ್ಲಾಳನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳುತ್ತಿದ್ದ ಆಲುಪ ಸಂತತಿಯ (ಚಿಕ್ಕಾಯಿತಾಯಿ) ರಾಣಿಯೊಬ್ಬಳನ್ನು ಮದುವೆಯಾದನು. ಅಳಿಯ ಸಂತಾನ ಪದ್ಧತಿಯಿಂದಾಗಿ ಅವನು 1333 ರಲ್ಲಿ ಒಂದು ಕರಾವಳಿಯಿಂದ ಮತ್ತೊಂದು ಕರಾವಳಿಯವರೆಗೆ ಆಳುತ್ತಿರುವುದಾಗಿ ಹೇಳಿಕೊಳ್ಳುವಂತಾಯ್ತು. 1336 ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಯಿತು. ಅದಕ್ಕೆ ಬಲ್ಲಾಳನ ನೈತಿಕ ಬೆಂಬಲವಿದ್ದಿತೆಂದು ಸುಲಭವಾಗಿ ಊಹಿಸಬಹುದು.

1338 ರಲ್ಲಿ ಹಿರಿಯ ಬಲ್ಲಪ್ಪ ದಣ್ಣಾಯಕನು ರಾಜ್ಯವನ್ನಾಳುತ್ತಿದ್ದುದಾಗಿ ಚಿತ್ರದುರ್ಗದ ಶಾಸನದಲ್ಲಿ ತಿಳಿಸಲಾಗಿದೆ. (Cd. 6, E. C. XI)

1339 ರಲ್ಲಿ ಬಲ್ಲಾಳನು ವೀರ ವಿಜಯ ವಿರೂಪಾಕ್ಷಪುರದಲ್ಲೂ 1340 ರ ಮಧ್ಯ ಭಾಗದಲ್ಲಿ ತಿರುವಣ್ಣಾಮಲೆಯಲ್ಲಿಯೂ ಇದ್ದನು. ಅತ್ಯಂತ ವೃದ್ಧನಾಗಿದ್ದ ಎಂಭತ್ತು ವರ್ಷಗಳಿಗೂ ಮೀರಿ ವಯಸ್ಸಾಗಿದ್ದ ಬಲ್ಲಾಳನು ತನ್ನ ಮಗನಾದ ನಾಲ್ಕನೆಯ ಬಲ್ಲಾಳರಾಯನಿಗೆ ತಿರುವಣ್ಣಾಮಲೆಯಲ್ಲಿ ಪಟ್ಟಾಭಿಷೇಕ ಮಾಡಿದನು. ತಂದೆ, ಮಕ್ಕಳಿಬ್ಬರೂ ತಿರುವಣ್ಣಾಮಲೆ ಪಟ್ಟಣದಲ್ಲಿ ವಾಸಿಸುತ್ತಿದ್ದಾಗ ಹೊಯ್ಸಳ ರಾಜ್ಯವನ್ನು ಆಕ್ರಮಿಸಿಕೊಳ್ಳಲು ವಿಜಯನಗರದ ಹರಿಹರನು ಹವಣಿಸುತ್ತಿದ್ದನು.

1342 ರಲ್ಲಿ ಹೊಯ್ಸಳರಿಗೂ ಮಧುರೆಯ ಸುಲ್ತಾನನ ಕಡೆಯ ಮುಸಲ್ಮಾನರಿಗೂ ಅಂತಿಮ ಹೋರಾಟವಾಯಿತು. ದಿನಾಂಕ 8–9–1342 ರಂದು ಮೂರನೆಯ ಬಲ್ಲಾಳನು ಚಿರಿಬಿಯಲ್ಲಿ ತುರುಕರೊಂದಿಗೆ ಹೋರಾಟ ಪ್ರಾರಂಭಿಸಿ ಕಾಳಗದಲ್ಲಿ ಮಡಿದುದನ್ನು ಕಡೂರು ಶಾಸನವು ಅಪರೋಕ್ಷವಾಗಿ ಉಲ್ಲೇಖಿಸಿದೆ. (Kd. 75, E. C. VI).

ಬಲ್ಲಾಳನು ಅಸುವನ್ನು ನೀಗಿದ ತೇದಿಯನ್ನು ಖಚಿತವಾಗಿ ತಿಳಿಸಲು ಆಧಾರಗಳಿಲ್ಲ. ಆದರೆ ಅವನು ಮುಸ್ಲಿಮರ ಮೋಸಕ್ಕೆ ತುತ್ತಾದುದನು

ಮುಸ್ಲಿಂ ಇತಿಹಾಸಕಾರನಾದ ಇಬ್ನ್ ಬಟೂಟನಿಂದ ಗೊತ್ತಾಗುವುದು. ಪ್ರಾಯಶಃ ಸಂಧಿ ಮಾಡಿಕೊಳ್ಳುವ ನೆಪದಲ್ಲಿ ಕದನ ವಿರಾಮವನ್ನು ಜಾರಿಗೆ ತಂದಿದ್ದಾಗ, ಮುಸ್ಲಿಮರು ಹಠಾತ್ತನೆ ಅಪರಾಹ್ನದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದ ಬಲ್ಲಾಳನನ್ನು ಬಂಧಿಸಿ, ಅವನನ್ನು ಸುಲ್ತಾನನ ಬಳಿಗೆ ಕರೆದೊಯ್ದರು. ಸೌಜನ್ಯದ ಸೋಗು ಹಾಕಿದ ಸುಲ್ತಾನನು ಬಲ್ಲಾಳನನ್ನು ಬಿಡುಗಡೆ ಮಾಡುವುದಾಗಿ ಆಶ್ವಾಸನೆ ನೀಡಿ, ಅವನಲ್ಲಿದ್ದ ಐಶ್ವರ್ಯವನ್ನೂ ಆನೆ, ಕುದುರೆಗಳನ್ನೂ ವಶಪಡಿಸಿಕೊಂಡನು. ಅವೆಲ್ಲಾ ದೊರೆತೊಡನೆ ಬಲ್ಲಾಳನನ್ನು ಕೊಂದು ಅವನ ಚರ್ಮವನ್ನು ಸುಲಿಯಲಾಯಿತು. ಆ ಚರ್ಮಕ್ಕೆ ಒಣಹುಲ್ಲನ್ನು ತುರುಕಿ, ಆ ಚೀಲವನ್ನು ಮಧುರೆಯ ಗೋಡೆಯ ಮೇಲೆ ನೇತು ಹಾಕಲಾಯಿತಂತೆ. ಅಲ್ಲಿಗೆ ಮೂರನೆಯ ಬಲ್ಲಾಳನ ದೀರ್ಘ ಆಳಿಕೆಗೆ ಚರಮಗೀತೆಯನ್ನು ಹಾಡಿದಂತಾಯ್ತು. ಅಷ್ಟೇ ಅಲ್ಲ, ಅದು ಹೊಯ್ಸಳ ಸಾಮ್ರಾಜ್ಯದ ಇತಿಶ್ರೀ ಆದಂತೆಯೂ ಆಯ್ತು.

ನಾಲ್ಕನೆಯ ಬಲ್ಲಾಳ (ಕ್ರಿ. ಶ. 1342–1345)

ನಾಲ್ಕನೆಯ ಬಲ್ಲಾಳ ಅಥವಾ ವಿರೂಪಾಕ್ಷ ಬಲ್ಲಾಳನು ಹೆಸರಿಗೆ ಮಾತ್ರ 1342 ರಿಂದ 1345 ರ ವರೆಗೆ ಅರಸನಾಗಿದ್ದನು. 1344 ರ ಮಾಲೂರು ಶಾಸನದಲ್ಲಿ ಮತ್ತೊಮ್ಮೆ ಬಲ್ಲಪ್ಪ ದಣ್ಣಾಯಕನ ಹೆಸರು ಬರುವುದರಿಂದ ಅವನ ಪ್ರಾಬಲ್ಯ ಹೆಚ್ಚಾಗಿತ್ತೆಂದು ಭಾವಿಸಬಹುದು. (Mv. 16)

ವಿಜಯನಗರದ ಪ್ರಭಾವದಿಂದಾಗಿ ಹೊಯ್ಸಳ ರಾಜ್ಯದ ಬಹುಮಂದಿಯ ಒಲವು ಹರಿಹರನ ಕಡೆಗಿದ್ದಿತು. ನಾಲ್ಕನೆಯ ಬಲ್ಲಾಳನು ಹರಿಹರನೊಂದಿಗೆ ಘರ್ಷಣೆಗೆ ಸಿದ್ಧವಾಗಿದ್ದರೂ ಅನೇಕ ಮಂದಿ ಹೊಯ್ಸಳ ಪ್ರಜೆಗಳು ಯಾರ ಹಂಗಿಗೂ ಬೀಳದೆ ಸ್ವತಂತ್ರರಾಗಲು ಬಯಸಿದರು. 1346 ರ ವೇಳೆಗೆ ಅನೇಕ ಹೊಯ್ಸಳ ಅಧಿಕಾರಿಗಳು ವಿಜಯನಗರದ ಅರಸರಿಗೆ ನಿಷ್ಠೆ ತೋರಿಸಲಾರಂಭಿಸಿದುದುದರಿಂದ ಎಲ್ಲಾ ನಿರೋಧವೂ ತಣ್ಣಗಾಗಿ ವಿಜಯನಗರ ಸಾಮ್ರಾಜ್ಯದ ವಿಸ್ತರಣೆಯಾಯಿತು. ಹೊಯ್ಸಳ ಸಾಮ್ರಾಜ್ಯವು ಮಣ್ಣುಗೂಡಿತು.

೩. ಹೊಯ್ಸಳ ರಾಜ್ಯದ ಅವನತಿಗೆ ಕಾರಣಗಳು

ಹೊಯ್ಸಳರು ತಾವು ಕಟ್ಟಿದ ರಾಜ್ಯವನ್ನು ತಾವೇ ಒಡೆಯಲು ಕಾರಣರಾದರು. ಮುಸ್ಲಿಮರ ದಂಡಯಾತ್ರೆಯು ಕೇವಲ ನಿಮಿತ್ತ ಮಾತ್ರವಾಗಿದ್ದಿತು. 'ಅತಿಯಾಸೆ ಗತಿಗೇಡು' ಎಂಬ ನಾಣ್ಣುಡಿ ಹೊಯ್ಸಳರಿಗೆ ಚೆನ್ನಾಗಿ ಅನ್ವಯಿಸುವುದು. ಕನ್ನಡ ನುಡಿ ಬಳಕೆಯಲ್ಲಿದ್ದ ಪ್ರದೇಶಗಳಿಗೆ ಮಾತ್ರ ಅವರ ರಾಜ್ಯ ವಿಸ್ತರಣಾಕಾಂಕ್ಷೆ ಸೀಮಿತವಾಗಿದ್ದಿದ್ದರೆ ಇತಿಹಾಸವೇ ಬದಲಾಯಿಸುತ್ತಿದ್ದಿತೋ ಏನೋ. ವೀರನರಸಿಂಹನ ಕಾಲದಲ್ಲಿ ತಮಿಳು ಸೀಮೆಯಲ್ಲಿ ಅಧಿಕಾರದಾಹದಿಂದ ಜರುಗುತ್ತಿದ್ದ ಕಚ್ಚಾಟದಲ್ಲಿ ಹೊಯ್ಸಳರು ಭಾಗವಹಿಸಿದ ದಿನವೇ ಹೊಯ್ಸಳ ವಂಶದ ಅವನತಿಗೆ ಅಂಕುರಾರ್ಪಣವಾಯಿತು.

ಎರಡನೆಯ ನರಸಿಂಹನ ಆಳಿಕೆಯ ಮುಕ್ತಾಯದೊಂದಿಗೆ ಹೊಯ್ಸಳ ಇತಿಹಾಸದ ಭವ್ಯ ಅಧ್ಯಾಯವು ಮುಕ್ತಾಯಗೊಂಡಂತಾಯಿತು. ಅವನ ನಂತರ ಬಂದ ಅರಸರೆಲ್ಲಾ ವಿಷ್ಣುವರ್ಧನ ಅಥವಾ ಎರಡನೆಯ ಬಲ್ಲಾಳನ ಮಟ್ಟಕ್ಕೆ ಏರಲು ಅಸಮರ್ಥರಾಗಿದ್ದರು. ಅವರು ಪ್ರಜಾಕೋಟಿಯ ಬೆಂಬಲವನ್ನು ಗಳಿಸಲು ಶಕ್ಯರಿರಲಿಲ್ಲ.

ಚೋಳರಾಜ್ಯದಲ್ಲೇ ಬಾಲ್ಯವನ್ನು ಕಳೆದ ಸೋಮೇಶ್ವರನ ಒಲವು ತಮಿಳು ಸೀಮೆಗೆ ತಿರುಗಿ ದೋರಸಮುದ್ರಕ್ಕೆ ಹೋಗುವುದೆಂದರೆ ಅದೊಂದು ಪ್ರಾಯಶ್ಚಿತ್ತರೂಪವಾದ ಯಾತ್ರೆ ಎನಿಸಿದ್ದಿತು.

ದಕ್ಷಿಣದ ದಂಡಯಾತ್ರೆಗಳಿಂದಾದ ವೆಚ್ಚವೂ ತಮಿಳು ಸೀಮೆಯಿಂದ ಆಗಾಗ್ಗೆ ಹರಿದು ಬರುತ್ತಿದ್ದ ಐಶ್ವರ್ಯವೂ ಹೊಯ್ಸಳ ಸಾಮ್ರಾಜ್ಯದ ಆರ್ಥಿಕ ಏರುಪೇರಿಗೆ ಅವಕಾಶವಾದುವು. ಪದಾರ್ಥಗಳ ಬೆಲೆ ಏರಿ, ಜೀವನ ವೆಚ್ಚ ಅಧಿಕವಾಗಿ ಜನತೆಯ ಅತೃಪ್ತಿ, ಅಸಮಾಧಾನಗಳು ಎಲ್ಲೆ ಮೀರಿದವು.

ರಾಜ್ಯದಲ್ಲಿ ಆಗಾಗ್ಗೆ ಆಂತರ್ಯುದ್ಧಗಳು ಏಳುತ್ತಿದ್ದವು. ಸೋಮೇಶ್ವರನ ಆಳಿಕೆಯ ಅಂತ್ಯದ ವೇಳೆಗೆ ಸಾಮ್ರಾಜ್ಯವೇ ವಿಭಜನೆಯಾಗಿ ದ್ವಾರಸಮುದ್ರದ ಸುತ್ತಮುತ್ತಲಿನ ಪ್ರದೇಶಗಳು ಮೂರನೆಯ ನರಸಿಂಹನಿಗೂ ಚೋಳ ರಾಜ್ಯದಲ್ಲಿದ್ದ ಭಾಗವು ರಾಮನಾಥನಿಗೂ ಹಂಚಲ್ಪಟ್ಟವು. ನರಸಿಂಹನಿಗೂ ರಾಮನಾಥನಿಗೂ ಹತ್ತಿದ ಜಗಳ ಹರಿಯುತ್ತಿರಲಿಲ್ಲ. ಇದರಿಂದಾಗಿ ಸೇವುಣರ ದಂಡಯಾತ್ರೆಗೆ ಅನುಕೂಲವಾಯಿತು. ಬೇಡರ ಉಪದ್ರವವನ್ನು ಬೇರೆ ಹೊಯ್ಸಳ ಪ್ರಜೆಗಳು ಅನುಭವಿಸಬೇಕಾಯಿತು.

ಇಂತಹ ಅಶಾಂತ ಪರಿಸ್ಥಿತಿಗೆ ಮೂರನೆಯ ಬಲ್ಲಾಳನು ಉತ್ತರಾಧಿಕಾರಿಯಾದನು. ಅವನ ಕಾಲದಲ್ಲೂ ಯುದ್ಧಗಳಿಗೆ ಕೊನೆ ಮೊದಲಿರಲಿಲ್ಲ. ಅರಸನ ದೌರ್ಬಲ್ಯದಿಂದಾಗಿ ಮಂತ್ರಿ ಅಥವಾ ದಣ್ಣಾಯಕರು ಸರ್ವಾಧಿಕಾರಿಗಳಂತೆ ಅಧಿಕಾರ ಚಲಾಯಿಸುವಂತಾಯಿತು. ಆ ಕಾಲದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಿದವು. ಕುಶಲ ಕೆಲಸಗಾರರು ತಮ್ಮ ಹಿತರಕ್ಷಣೆಗಾಗಿ 'ವೀರ ಪಾಂಚಾಲರ ಸಂಘ' ವನ್ನು ಸ್ಥಾಪಿಸಿಕೊಳ್ಳಬೇಕಾಯಿತು.

ಎರಡನೆಯ ಬಲ್ಲಾಳ ಮುಂತಾದ ಕೆಲವು ಅರಸರು ಮಂತ್ರಾಲೋಚನೆಗಾಗಿ ತಮ್ಮ ಪುತ್ರರನ್ನೋ ಪತ್ನಿಯರನ್ನೋ ನೇಮಿಸಿಕೊಳ್ಳುತ್ತಿದ್ದರು. ಅದರಿಂದಾಗಿ ನಿಷ್ಠೆ ಹಾಗೂ ಉತ್ಸಾಹದಿಂದ ಕೂಡಿದ್ದ ಬಂಧುಗಳ ಸಲಹೆ ದೊರೆಯುತ್ತಿದ್ದಿತು. ಆದರೆ ಮೂರನೆಯ ಬಲ್ಲಾಳನು ರಾಣಿವಾಸದವರ ಸಹಕಾರವನ್ನು ಆಡಳಿತ ನಿರ್ವಹಣೆಗಾಗಿ ಬಳಸಿಕೊಳ್ಳದೇ ಹೋದುದು ಪ್ರಮಾದವಾಯಿತು.

ಮೂರನೆಯ ಬಲ್ಲಾಳನ ಕಾಲದಲ್ಲಿ ಹೊಯ್ಸಳ ರಾಜ್ಯವು ಮೂರು ಸಲ ಮುಸಲ್ಮಾನರ ದಂಡಯಾತ್ರೆಗೆ ಗುರಿಯಾಗಿ ರಾಜಧಾನಿಯಾದ ದೋರಸಮುದ್ರವೇ ನಿರ್ನಾಮವಾಯಿತು. ರಾಜ್ಯದ ಸಿರಿ, ಸಂಪತ್ತು ತುರುಕರ ವಶವಾಯಿತು.

ಅದೇ ತಾನೇ ಅಸ್ತಿತ್ವಕ್ಕೆ ಬಂದಿದ್ದ ವಿಜಯನಗರ ಸಾಮ್ರಾಜ್ಯವು ಹೊಯ್ಸಳ ರಾಜ್ಯದ ಅನೇಕ ಮಂದಿ ಪ್ರಜೆಗಳನ್ನು ಆಕರ್ಷಿಸಿತು. ಹೊಯ್ಸಳ

ಅಧಿಕಾರಿಗಳ ಒಲವು ವಿಜಯನಗರದತ್ತ ತಿರುಗಿತು. ಇಂತಹ ವಿಚಿತ್ರ ಪರಿಸ್ಥಿತಿಯಲ್ಲಿ ಸಿಂಹಾಸನವನ್ನೇರಿದ ನಾಲ್ಕನೆಯ ಬಲ್ಲಾಳನು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದರಲ್ಲಿ ವಿಫಲನಾದನು. ಈ ರೀತಿ ಹೊಯ್ಸಳ ಸಾಮ್ರಾಜ್ಯದ ಉನ್ನತ ವೃಕ್ಷ ಉರುಳಿ ಬಿದ್ದಿತು.

೪. ಹೊಯ್ಸಳರ ರಾಜ್ಯಭಾರಕ್ರಮ

ಮಧ್ಯಮ ಯುಗದಲ್ಲಿ ಜನತೆಯ ಐಹಿಕ ಪ್ರಗತಿ ಬಹುಮಟ್ಟಿಗೆ ಅರಸನನ್ನು ಅವಲಂಬಿಸಿದ್ದಿತು. ದುಷ್ಟನಿಗ್ರಹ, ಶಿಷ್ಟಪ್ರತಿಪಾಲನೆ ರಾಜನ ಆದ್ಯ ಕರ್ತವ್ಯಗಳೆನಿಸಿದ್ದುವು. ಎಲ್ಲಿಯ ವರೆಗೆ ಅರಸನು ಧರ್ಮಿಷ್ಠನಾಗಿದ್ದು ಪ್ರಜೆಗಳ ಆಸೆ, ಆಶೋತ್ತರಗಳ ಪ್ರತೀಕದಂತಿರುತ್ತಿದ್ದನೋ ಅಲ್ಲಿಯ ವರೆಗೆ ಪ್ರಜೆಗಳೂ ತಮ್ಮ ಪ್ರಭುವಿನ ಬಗ್ಗೆ ನಿಷ್ಠೆಯನ್ನೂ ಪ್ರೇಮಾದರಗಳನ್ನೂ ಪ್ರದರ್ಶಿಸುತ್ತಿದ್ದರು. ಹನ್ನೊಂದನೆಯ ಶತಮಾನದಲ್ಲಿ ಚೋಳರ ವಿರುದ್ಧ ಸಂಗ್ರಾಮ ಹೂಡಲು ಯಾವ ತ್ಯಾಗಕ್ಕೂ ಸಿದ್ಧವಿದ್ದ ಪ್ರಜಾಕೋಟಿ ಹದಿನಾಲ್ಕನೆಯ ಶತಮಾನದ ವೇಳೆಗೆ ಅತ್ಯಧಿಕ ಸಂಖ್ಯೆಯಲ್ಲಿದ್ದರೂ ಹೊಯ್ಸಳ ರಾಜ ಕುಟುಂಬಕ್ಕಾಗಿ ತ್ಯಾಗ ಮಾಡಲು ಸಿದ್ಧರಿರಲಿಲ್ಲವೆಂದು ಡೆರೆಟ್ ಅವರು ಬರೆದಿರುವುದು ಗಮನಾರ್ಹವಾಗಿದೆ.

ಹೊಯ್ಸಳರ ಕಾಲದ ಅರಸೊತ್ತಿಗೆಯು ಒಂದು ವಿಚಿತ್ರ ರೀತಿಯ ಸಾಂಕುಶ ಪ್ರಭುತ್ವವಾಗಿದ್ದಿತು. ಬಲಶಾಲಿ ಸಾಮಂತರ ಹಾಗೂ ಶ್ರೀಮಂತ ವರ್ಗದವರ ವಿರೋಧವನ್ನು ಅರಸನು ಎದುರಿಸಬೇಕಾಗಿತು. ಜನಪದವು ಅರಸನಿಗೆ ಪ್ರತಿಕೂಲವಾಗಿ ತಿರುಗಿ ಬೀಳುವ ಸಂದರ್ಭಗಳೂ ಇರುತ್ತಿದ್ದುವು. ಎಲ್ಲಕ್ಕಿಂತ ಮಿಗಿಲಾಗಿ ಪಂಚಪ್ರಧಾನರೆಂಬ ಮಂತ್ರಿಮಂಡಲವು, ಅರಸನು ಸ್ವೇಚ್ಛೆಯಿಂದ ವರ್ತಿಸದಂತೆ ಕಡಿವಾಣ ಹಾಕುತ್ತಿದ್ದಿತು. ಆದ್ದರಿಂದ ರಾಜನು ಸಮಸ್ತ ವಿಷಯಗಳ ಸಾರಸರ್ವಸ್ವವಾಗಿದ್ದರೂ ಸಾಕಷ್ಟು ಸಂಖ್ಯೆಯ ಪ್ರಮುಖ ವ್ಯಕ್ತಿಗಳ ನಿಷ್ಠೆಗೆ ಪಾತ್ರನಾಗಿದ್ದರೆ ಮಾತ್ರ ಅವನ ಸ್ಥಾನಭದ್ರವಾಗಿರುತ್ತಿದ್ದಿತು. ಒಟ್ಟಿನಲ್ಲಿ ಅರಸನು ನಾಡಿನ ಐಕ್ಯತೆಯ ಸಂಕೇತವಾಗಿದ್ದನು. ಅರಸ ಮತ್ತು ಮಂತ್ರಿಮಂಡಲವು ಸೇರಿ ಕೇಂದ್ರ ಸರ್ಕಾರವೆನಿಸಿದ್ದಿತು.

ಅರಸ

ಅರಸನ ದೈಹಿಕ ಶಕ್ತಿ, ದಕ್ಷತೆ, ಮುತ್ಸದ್ದಿತನ, ಪರಾಕ್ರಮ, ಕರ್ತವ್ಯ ಪ್ರಜ್ಞೆ ಮುಂತಾದ ಸದ್ಗುಣಗಳ ಮೇಲೆ ಜನತೆಯ ಕ್ಷೇಮಾಭ್ಯುದಯಗಳು ಅವಲಂಬಿಸಿದ್ದುವು. ರಾಜನಾಗಲು ಬೇಕಾದ ಶಾರೀರಿಕ, ಮಾನಸಿಕ ಶಕ್ತಿಗಳ ಅಭಾವವಿದ್ದಲ್ಲಿ ಹೆಚ್ಚು ಕಾಲ ಸಿಂಹಾಸನವನ್ನು ಉಳಿಸಿಕೊಳ್ಳುವುದು ಅಸಾಧ್ಯವಾಗಿದ್ದಿತು. ಮಂತ್ರಿಗಳ ಹಾಗೂ ಇತರ ಅಧಿಕಾರಿಗಳ ಮೇಲಿನ ಹತೋಟಿಯ ಯಶಸ್ಸು ಅರಸನ ವ್ಯಕ್ತಿತ್ವಕ್ಕನುಗುಣವಾಗಿದ್ದಿತು. ಸಾಮಾನ್ಯವಾಗಿ ಓರ್ವ ವ್ಯಕ್ತಿ ಮಾತ್ರ ಅರಸನಾಗಬೇಕಾಗಿದ್ದಿತು. ಕೆಲವು ದಾಖಲೆಗಳಲ್ಲಿ ಈರ್ವರ ಆಳ್ವಿಕೆಯ ಪ್ರಸ್ತಾಪವಿದ್ದರೂ ಮತ್ತೊಬ್ಬನು ನಿಜವಾದ ಅರಸನ ಪ್ರತಿನಿಧಿಯಾಗಿ ಮಾತ್ರ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿದ್ದನೆಂದು ಡೆರೆಟ್ ಅವರು ಅಭಿಪ್ರಾಯವಿಟ್ಟಿದ್ದಾರೆ.

ಹೊಯ್ಸಳ ಅರಸೊತ್ತಿಗೆಯು ಆನುವಂಶಿಕವಾಗಿದ್ದುದರಿಂದಲೂ ಅರಸನು ಜಂಟಿ ಕುಟುಂಬಕ್ಕೆ ಸೇರಿದವನಾಗಿದ್ದುದರಿಂದಲೂ ಅವಿಭಕ್ತ ಕುಟುಂಬದ ಪುತ್ರ ಸಂತಾನಕ್ಕೆಲ್ಲಾ ರಾಜ ಪದವಿಯ ಮೇಲೆ ಹಕ್ಕಿದ್ದಿತು. ಅರಸನು ದಾಯಾದಿಗಳ ಹಕ್ಕುಗಳನ್ನು ಮನ್ನಿಸಬೇಕಾಗಿದ್ದಿತು. ಕೆಲವೊಮ್ಮೆ ಅತೃಪ್ತ ದಾಯಾದಿಗಳೊಂದಿಗೆ ಘರ್ಷಣೆ ಅನಿವಾರ್ಯವಾಗುತ್ತಿದ್ದಿತು. ಆ ಕಾರಣದಿಂದಲೇ ಕೆಲವು ಪರಾಕ್ರಮಿ ಹೊಯ್ಸಳ ರಾಜರು ದಾಯಾದಿಗಳಿಗೆ ತಾವು ಕಾಡಿನ ಕಿಚ್ಚಿನಂತಿದ್ದರೆಂದು ಅರ್ಥಕೊಡುವ ಬಿರುದುಗಳನ್ನು ಧರಿಸುತ್ತಿದ್ದರು.

ಅನೇಕ ಅರಸರು ಮಂತ್ರಾಲೋಚನೆಗಾಗಿ ರಾಜಮನೆತನದವರನ್ನು ನೇಮಿಸಿಕೊಳ್ಳುತ್ತಿದ್ದರು. ಪಂಚಪ್ರಧಾನರ ವಿವೇಕಯುತವಾದ ಸಲಹೆಗಳನ್ನು ಅರಸನು ಸ್ವೀಕರಿಸುತ್ತಿದ್ದನು.

ಹೊಯ್ಸಳ ರಾಜ್ಯವು ಧಾರ್ಮಿಕ ಪ್ರಧಾನ ರಾಜ್ಯ (Theocracy) ವಾಗಿರಲಿಲ್ಲವಾದರೂ ಅನೇಕ ವೇಳೆ ಅರಸನು ರಾಜಗುರುವಿನ ಸಲಹೆಯನ್ನು ಅಪೇಕ್ಷಿಸುತ್ತಿದ್ದನು. ಎರಡನೆಯ ವಿನಯಾದಿತ್ಯನ ಗುರುವಾದ ಶಾಂತಿದೇವನು ಕೇವಲ ರಾಜಗುರು ಮಾತ್ರವಲ್ಲದೆ ರಾಷ್ಟ್ರ ಗುರುವೂ ಆಗಿದ್ದನಂತೆ.

ವಿಷ್ಣುವರ್ಧನನು ತನ್ನ ಸ್ವಂತ ದೇಶವನ್ನು ಬ್ರಾಹ್ಮಣರಿಗೂ ದೇವಾಲಯಗಳಿಗೂ ದಾನಮಾಡಿ ತಾನು ಗೆದ್ದಿದ್ದ ಹೊರ ರಾಜ್ಯಗಳನ್ನು ಮಾತ್ರ ಆಳುತ್ತಿದ್ದನೆಂದು ಕಡೂರಿನ ಶಾಸನಗಳು ಬಣ್ಣಿಸಿವೆ. (Kd. 4 and 106 E. C. VI).

ಎರಡನೆಯ ನರಸಿಂಹನ ರಾಜಗುರುವಾಗಿದ್ದ ರುದ್ರಶಕ್ತಿ ಹಾಗೂ ಎರಡನೆಯ ವೀರ ಬಲ್ಲಾಳನ ರಾಜಗುರುವಾಗಿದ್ದ ವಾಮಶಕ್ತಿದೇವರ ಪ್ರಭಾವ ಗಾಢವಾಗಿತ್ತೆಂದು ಶಾಸನಗಳಿಂದ ತಿಳಿಯಬಹುದಾಗಿದೆ.

ಹೊಯ್ಸಳ ಅರಸನು ತನ್ನ ಆಳ್ವಿಕೆಯ ಸುಭದ್ರತೆಗಾಗಿ ಎಲ್ಲಾ ಮತ ಧರ್ಮಗಳಿಗೂ ಸಮಾನ ಪುರಸ್ಕಾರ ನೀಡಬೇಕಾಗಿದ್ದಿತು.

ಅನೇಕ ಹೊಯ್ಸಳ ರಾಣಿಯರು ಆಡಳಿತದಲ್ಲಿ ಭಾಗವಹಿಸುತ್ತಿದ್ದ ನಿದರ್ಶನಗಳಿವೆ.

ವಿನಯಾದಿತ್ಯನ ರಾಣಿಯಾಗಿದ್ದ ಕೆಳೆಯಬ್ಬರಸಿ ಅಥವಾ ಕೆಳೆಯಲ ದೇವಿಯು ಮರಿಯಾನೆ ದಂಡನಾಯಕನೆಂಬಾತನ ಬಗ್ಗೆ ಅತೀವ ಆಸಕ್ತಿ ವಹಿಸಿ, ಅವನನ್ನು ತನ್ನ ಕಿರಿಯ ಸಹೋದರನಂತೆ ಪೋಷಿಸಿ, ಪ್ರಾಯಶಃ ತನ್ನ ಸೋದರಿಯೋ ಮಗಳೋ ಆಗಿದ್ದ ದೇಕವ್ವೆ ದಂಡನಾಯಕತಿಯನ್ನು ಕೊಟ್ಟು ಪಾಣಿಗ್ರಹಣ ಮಾಡಿದುದಲ್ಲದೆ ಅದೇ ಕಾಲದಲ್ಲಿ ಆತನಿಗೆ ಸಿಂದಗೆರೆಯ ಪ್ರಭುತ್ವವನ್ನೂ ಅನುಗ್ರಹಿಸಿದಳು (Ng. 32, E. C. IV).

ವಿಷ್ಣುವರ್ಧನನು ದತ್ತಿಯೊಂದನ್ನು ಬಿಟ್ಟುಕೊಟ್ಟ ಸಂದರ್ಭದಲ್ಲಿ ಪಂಚಪ್ರಧಾನರಲ್ಲದೆ ಪಟ್ಟಮಹಾದೇವಿ ಶಾಂತಲಾದೇವಿಯೂ ಹಾಜರಿದ್ದಳು. (Cn. 260, b. E. C. V), ಅವನ ಮತ್ತೋರ್ವ ಪತ್ನಿಯಾದ ಬೊಮ್ಮಲೆಯು ಆಸಂದಿ 500 ಎಂಬ ಪ್ರಾಂತ್ಯವನ್ನು ಆಳುತ್ತಿದ್ದಳು. ನಿರ್ಗುಂದ 300 ಎಂಬುದೂ ಅವಳ ಆಡಳಿತಕ್ಕೆ ಒಳಗಾಗಿದ್ದಿತು. ಕಿಸೂರು ಮತ್ತು ಹಾರುವನಹಳ್ಳಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ನಾಳ್-ಪ್ರಭು ಎರಕಗಾವುಂಡನೆಂಬ ಸಾಮಂತನೂ ಅವಳ ಅಧೀನದಲ್ಲಿದ್ದನೆಂದು ಶಾಸನದಿಂದ ಗೊತ್ತಾಗುವುದು.

ಎರಡನೆಯ ಬಲ್ಲಾಳನ ರಾಣಿಯರಂತೂ ದಕ್ಷ ಆಡಳಿತಗಾರರಾಗಿ

ದ್ದರು. ಅವರ ಪೈಕಿ ಉಮಾದೇವಿಯು ಬಲ್ಲಾಳನ ಉತ್ತರದ ದಂಡಯಾತ್ರೆಗಾಗಿ ಅವನೊಂದಿಗೆ ಹೋಗಿದುದಲ್ಲದೆ ಬಂಡಾಯವೆದ್ದಿದ್ದ ಮಲ್ಲಿದೇವರಸ ಎಂಬಾತನ ವಿರುದ್ಧ ಕೈಗೊಂಡ ದಾಳಿಯಲ್ಲಿ ಸ್ವತಃ ಭಾಗವಹಿಸಿದ್ದಳು. ಮತ್ತೊಂದು ಸಂದರ್ಭದಲ್ಲಿ ಅರಸನ ಗೈರು ಹಾಜರಿಯಲ್ಲಿ ದೋರಸಮುದ್ರದ ಆಡಳಿತವನ್ನು ತಾನೇ ನೋಡಿಕೊಂಡಳು. ತೆರಿಗೆ ಕೊಡಲಾರದ ಎರಡು ದೇವಾಲಯಗಳ ಆಡಳಿತದಲ್ಲಿ ಅವಳು ಮಧ್ಯೆ ಪ್ರವೇಶಿಸಿ, ತೆರಿಗೆ ಕೊಡಬಲ್ಲ ಬೇರೆ ಬ್ರಾಹ್ಮಣರಿಗೆ ದೇವಾಲಯಕ್ಕೆ ಸಂಬಂಧಿಸಿದ ವೃತ್ತಿಗಳನ್ನು ನೀಡಿದಳು.

ಎರಡನೆಯ ಬಲ್ಲಾಳನ ಕಿರಿಯರಾಣಿ ಅಭಿನವ ಕೇತಲದೇವಿಯು ಕುಂದವಾಡದಲ್ಲಿ ಪ್ರತಿ ಬುಧವಾರವೂ ಸಂತೆಯನ್ನು ವ್ಯವಸ್ಥೆ ಮಾಡುವಂತೆ ಅಲ್ಲಿನ ಗೌಡರಿಗೂ ಸೆಟ್ಟಿಗಳಿಗೂ ಆದೇಶವನ್ನಿತ್ತುದುದನ್ನು ಹಾವಣಗೆರೆಯ ಶಾಸನವು ವರದಿ ಮಾಡಿದೆ. (Dg. 105, E. C. XI). ಬಲ್ಲಾಳನ ಮತ್ತೊಬ್ಬ ಪತ್ನಿಯಾದ ಚೋಳ ಮಹಾರಾಣಿಯು ಕುಂಬಳ ಪ್ರಾಂತವನ್ನು ಆಳುತ್ತಿದ್ದಳು. ಹೊಯ್ಸಳ ರಾಣಿಯರು ದೇವಾಲಯಗಳನ್ನು ಕಟ್ಟಿಸುವುದರಲ್ಲೂ ದಾನಧರ್ಮಗಳನ್ನು ಮಾಡುವುದರಲ್ಲಿಯೂ ಅದ್ವಿತಿಯರಾಗಿದ್ದರು.

ಹೊಯ್ಸಳ ರಾಣಿಯರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆ ಇದ್ದಂತೆ ಗೋಚರವಾಗುವುದು. ಕ್ರಿ. ಶ. 1208 ರಲ್ಲಿ ರಾಣಿಗೆ ಸಹಾಯ ಮಾಡಲು ಪೆರ್ಗಡೆ ನಯಣ್ಣನೆಂಬಾತನು ಶ್ರೀಕರಣ ಎಂಬ ಹುದ್ದೆಗೆ ನೇಮಿಸಲ್ಪಟ್ಟಿದ್ದನು. ಅಂತಃಪುರದ ಪೋಷಾಕುಗಳ ಉಸ್ತುವಾರಿಗಾಗಿಯೋ ಏನೋ ಪಸಾಯಿತ ಅಥವಾ ಮಹಾಪಸಾಯಿತ ಮತ್ತು ಅಂತಃಪಸಾಯತ ಎಂಬ ಅಧಿಕಾರಿಗಳಿದ್ದರು. ಮಹಾಪಸಾಯತ ಹುದ್ದೆಗೆ ಬ್ರಾಹ್ಮಣರಲ್ಲದೆ ಇತರ ಜಾತಿಯವರನ್ನೂ ನೇಮಿಸುತ್ತಿದ್ದರು. 1194 ಅಥವಾ 1195 ರಲ್ಲಿ ಮೂಕಗೌಡ ಎಂಬ ಹಜಾಮನ ಮಗ ಬಿಲ್ಲ ಮಾದಯ್ಯನು ಮಹಾಪಸಾಯತನಾಗಿದ್ದನು. ರಾಜ್ಯದ ಯಾವುದಾದರೂ ಭಾಗದಲ್ಲಿ ಅಶಾಂತ ಪರಿಸ್ಥಿತಿಯುಂಟಾಗಲು,:ರಾಜ, ರಾಣಿಯರ ನಂಬಿಕೆಗೆ ಅರ್ಹರಾದ ಮಹಾಪಸಾಯತರನ್ನು ಅಲ್ಲಿನ ಆಡಳಿತವನ್ನು ನೋಡಿಕೊಳ್ಳಲು ಕಳುಹಿಸುತ್ತಿದ್ದರು.

ಅರಮನೆಯ ಇಲಾಖೆಗೆ ಸೇರಿದ್ದ ಅಧಿಕಾರಿಗಳಲ್ಲಿ ತಂತ್ರಾಧಿಕಾರಿ

ಮನೆವೆಗ್ಗಡೆ, ಬಸಪತ್ರರನಿಯೋಗಾಧಿಪತಿ, ದ್ವಾರಪಾಲಕ, ಸೆಜ್ಜೆವಲ್ಲ ಹಿರಿಯ ಹಡಪದ, ಮನೆಯ ಮಂತ್ರಿ, ಮನೆತನಾಧಿಕಾರಿ ಮುಂತಾದವರು ಉಲ್ಲೇಖ ನಾರ್ಹರು. ಇವರ ಪೈಕಿ ಕೆಲವರ ಕರ್ತವ್ಯಗಳನ್ನು ಸ್ಪಷ್ಟವಾಗಿ ತಿಳಿಸಬಹುದು. ಅರಮನೆಯ ದ್ವಾರವನ್ನು ರಕ್ಷಿಸುತ್ತಿದ್ದವರ ಮೇಲ್ವಿಚಾರಣೆಗೆ ನೇಮಿಸಲ್ಪಟ್ಟಿದ್ದವನೇ ದ್ವಾರಪಾಲಕ. ಈತನಿಗೆ ಪಾದಿಯರ, ಹಾದಿಹಯ, ಹಾದಿಹರ ಮುಂತಾದ ಹೆಸರುಗಳೂ ಇದ್ದುವು. ಶಯ್ಯಾಗಾರದ ಮೇಲುಸ್ತುವಾರಿಗಾಗಿ ನೇಮಿಸಲ್ಪಟ್ಟಿದ್ದ ಅಧಿಕಾರಿಯೇ ಸೆಜ್ಜೆವಲ್ಲ. ತಾಂಬೂಲ ಅಥವಾ ಅಡಿಕೆಯನ್ನು ಇಟ್ಟುಕೊಂಡು ತಿರುಗುತ್ತಿದ್ದವನೋ ಅಥವಾ ಅಂತಹವರ ಮೇಲ್ವಿಚಾರಕನೋ ಆಗಿದ್ದವನು ಹಿರಿಯ ಹಡಪದ.

ಹೊಯ್ಸಳ ರಾಜರನೇಕರು ರಣರಂಗದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ನಾಗಮಂಗಲದ ಶಾಸನವು ವಿಷ್ಣುವರ್ಧನನನ್ನು 'ಆಳಿಂ ಮುನ್ನಿಱುವಂ', ಎಂದರೆ, ತನ್ನ ಯೋಧರಿಗಿಂತ ಮುಂದೆ ನುಗ್ಗಿ ಯುದ್ಧ ಮಾಡುತ್ತಿದ್ದವನೆಂದು ಹೊಗಳಿದೆ. (Ng. 3, E. C: IV). ಹಾನುಂಗಲ್ಲಿನ ಕೋಟೆಯನ್ನು ವಶಮಾಡಿಕೊಳ್ಳಲು ಸಮರವಾಗುತ್ತಿದ್ದಾಗ ಹೊಯ್ಸಳ ಅರಸನು ಆನೆಯನ್ನು ಹತ್ತಿ ಎಲ್ಲವನ್ನೂ ಪರಿಶೀಲಿಸುತ್ತಿದ್ದನೆಂದು ಬೇಲೂರಿನ ಶಾಸನವೊಂದು ಸೂಚಿಸಿದೆ. (Bl. 202, E. C. V) ಅಸುವನ್ನು ನೀಗುತ್ತಿದ್ದ ಯೋಧನಿಗೆ ಪ್ರೋತ್ಸಾಹ ಕೊಡಲೋಸುಗ ಅರಸನು ಜಮೀನನ್ನು ದಾನವಾಗಿ ನೀಡಿಯೋ ಅಥವಾ ಅವನ ಕುಟುಂಬದವರ ಪೈಕಿ ಯಾರಿಗಾದರೂ ಹುದ್ದೆಯನ್ನು ದಯಪಾಲಿಸಿಯೋ ಆಜ್ಞೆ ಮಾಡುತ್ತಿದ್ದನು. ಸಮರಗಳಲ್ಲಿ ಜಯಶೀಲರಾದ ಯೋಧರಿಗೆ ಗೌರವ ಪದಕಗಳನ್ನೋ ಬಿರುದುಗಳನ್ನೋ ಕೊಡುತ್ತಿದ್ದುದೂ ಉಂಟು. ಯುದ್ಧಕ್ಕೆ ಮುಂಚೆ ದಳಪತಿಗೆ ರಣವೀಳ್ಯವನ್ನು ಅರಸನು ನೀಡುತ್ತಿದ್ದನು.

ಸಮರಗಳಲ್ಲಿ ಮಡಿದ ಸಿಪಾಯಿಗಳ ಮಡದಿ, ಮಕ್ಕಳ ಪೋಷಣೆಗಾಗಿ ಸರ್ಕಾರವು ಕಂದಾಯ ರಹಿತ ಜಮೀನುಗಳನ್ನು ಕೊಡುವ ಪದ್ಧತಿ ಇದ್ದಿತು.

ವೈಯಕ್ತಿಕ ಪರಾಕ್ರಮಕ್ಕಾಗಿ ರಕ್ತ ಕೊಡಗಿ ಎಂಬ ಹೆಸರಿನಿಂದ ಭೂಮಿಯನ್ನು ದತ್ತಿಯನ್ನಾಗಿ ಬಿಟ್ಟುಕೊಡುತ್ತಿದ್ದರು.

ಹೊಯ್ಸಳ ಅರಸರ ಪ್ರಾಣ ರಕ್ಷಣೆಗಾಗಿ ಗರುಡರು ಎಂಬ ಒಂದು ರೀತಿಯ ಆದರ್ಶ ವ್ಯಕ್ತಿಗಳು ಇದ್ದರು. ಚೊಕ್ಕಿ ಮಯ್ಯನು ವಿಷ್ಣುವರ್ಧನನ ಗರುಡನಾಗಿದ್ದನು. ಅವರ ಸಂಖ್ಯೆ ನೂರರಿಂದ ಸಾವಿರದ ವರೆಗೂ ಇದ್ದಿತು. ಅವರು ವಿಶ್ವಾಸ, ಶೌರ್ಯ, ತ್ಯಾಗಗಳ ಪ್ರತೀಕದಂತಿದ್ದರು. ಅರಸನು ಸತ್ತಾಗ ಗರುಡರು ತಮ್ಮ ಮಡದಿ ಹಾಗೂ ಸೇವಕರೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಗರುಡನಾಗಲು ಇಚ್ಛಿಸಿದ ವ್ಯಕ್ತಿ ಅರಸನಿಗೆ ಭಾಷೆಕೊಟ್ಟು ಎಡಗಾಲಿಗೆ 'ಗಂಡ ಪೆಂಡೇರ' ವನ್ನು ಕಟ್ಟಿಕೊಳ್ಳುತ್ತಿದ್ದನು. ಬೇಲೂರಿನ ಶಾಸನವೊಂದು—"ಆತಂ ಪತಿಭಕ್ತಿ ಸಮನ್ವಿತಂ ಬಲ್ಲಾಳ ಭೂಮಿಪಾಲಂಗೆ ಜಗತ್‌ಪೂತ ಚರಿತ್ರಂ ಕೊಟ್ಟಂ ವೀತಭಯಂ ಭಾಷೆಯಂ ಪ್ರತಾಪ ವಿನೂತಂ"— ಎಂಬುದಾಗಿ ಕುವರ ಲಕ್ಷ್ಮನು ಬಲ್ಲಾಳನಿಗೆ ವಚನವಿತ್ತ ವಿವರಣೆಯನ್ನು ಒಳಗೊಂಡಿದೆ. (Bl. 112, E. C. V). ಕುವರ ಲಕ್ಷ್ಮನ ಪತ್ನಿಯೂ ಆವನ ಒಂದು ಸಾವಿರ ವೀರರೂ ಗರುಡರಾಗಲು ತಾವೂ ಪ್ರತಿಜ್ಞೆಯನ್ನು ಸ್ವೀಕರಿಸಿದರು. "ಬಲ್ಲಾಳ ಭೂಪೋತ್ತಮ ಪ್ರಿಯಸುತಂಗೆ ಕುಮಾರ ಲಕ್ಷ್ಮರಥನೀ ನಾಥಂಗೆ ಕೊಟ್ಟಳ್ ಮನಃ ಪ್ರಿಯೆಯೀ ಸುಗ್ಗಲದೇವಿ ಭಾಷೆಯ ನಿಳಾಚಕ್ರಂ ಪೊಗಳ್ವನ್ನೆಗಂ" ಎಂಬುದಾಗಿ ಅದೇ ಶಾಸನ ತಿಳಿಸಿದೆ.

ವೀರಬಲ್ಲಾಳನ ಮರಣಾನಂತರ ಗರುಡರೆಲ್ಲರೂ ಪ್ರಾಣಾರ್ಪಣೆ ಮಾಡಿದ ಸಂಗತಿಯನ್ನು ತಿಳಿಸುವ ಶಾಸನವು ಅವರನ್ನು 'ಲೆಂಕ' ರೆಂದು ಸಂಬೋಧಿಸಿದೆ. ಇತರ ಅನೇಕ ಹೊಯ್ಸಳ ಅರಸರು ನಿಧನ ಹೊಂದಿದಾಗ, ತಾವಿತ್ತಿದ್ದ 'ಭಾಷೆಯಂ ಪೂರಯ್ಸಿದ' ಲೆಂಕ, ಲೆಂಕಕಿಯರ ಬಗ್ಗೆ ಅನೇಕ ಶಾಸನಗಳಲ್ಲಿ ಪ್ರಸ್ತಾಪವಿದೆ. ಈ ಗರುಡರು ತಮ್ಮ ಧೈರ್ಯ ಪರಾಕ್ರಮಗಳಲ್ಲಿ ಆದಿಶೇಷನನ್ನು ಮೀರಿಸಿದ್ದರೆಂದು ವರ್ಣಿಸುವ ಸಾಲುಗಳು— "ಗರುಡನ ಹೊಯ್ಲ್ಗೆ ಮೆಯ್ಯಗಿದು ಸುರ್ಕಿ ಸಹಸ್ರ ಫಣಾಧರಂ ವಸುಂಧರೆ ಯಡಿಗಳ್ದು ಹೋದ ನವನಂನನೆ ಕಂನೆಯ ನಾಯಕಂ ಭಯಂಕರ ಗರುಡಂಗೆ ಮಾರ್ಮಲೆದು ಹೊಯ್ದು ಮರ್ದಪ್ಪಿ ನಿಮಿರ್ಚಿ ತೋಱಿದಂ ಬಿರುದರ ಗೀರ್ವಣನುರ್ವರೆಗೆ ಸೋಮನೃಪಾಳನ ಲೆಂಕವಾಳಿಯಂ"— ಶಾಸನದಲ್ಲಿವೆ.

ನ್ಯಾಯ ತೀರ್ಮಾನವು ಅರಸನ ಕರ್ತವ್ಯಗಳಲ್ಲೊಂದಾಗಿದ್ದಿತು.

ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಸಂಬಂಧಿಸಿದ (Civil) ಮೊಕದ್ದಮೆಗಳನ್ನು ಅರಸ ಅಥವಾ ಅವನ ಪ್ರತಿನಿಧಿಗಳು ವಿಚಾರಿಸಿ ನ್ಯಾಯದಾನ ಮಾಡುತ್ತಿದ್ದರು. ಆದರೆ ವಾದಿ, ಪ್ರತಿವಾದಿಗಳು ರಾಜಿ ಮಾಡಿಕೊಳ್ಳಲು ಸಿದ್ಧವಾಗಿಲ್ಲದ ಸಂದರ್ಭಗಳಲ್ಲೂ ಸ್ಥಳೀಯ ಪಂಚಾಯಿತಿಯ ತೀರ್ಮಾನದ ವಿರುದ್ಧ ಮೊರೆ ಹೋದಾಗ ಮಾತ್ರ ಅರಸನು ನ್ಯಾಯಾಧೀಶನ ಕರ್ತವ್ಯವನ್ನು ನಿರ್ವಹಿಸಬಹುದಾಗಿದ್ದಿತು. ಅರಸನ ತೀರ್ಪೇ ಅಂತಿಮವಾಗಿದ್ದಿತು. ಅರಸನು ಮೊಕದ್ದಮೆಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಧರ್ಮಶಾಸ್ತ್ರ ಮತ್ತು ಬೇರೆ ಬೇರೆ ಜಾತಿ ಪಂಗಡಗಳಲ್ಲಿ ರೂಢಿಯಲ್ಲಿದ್ದ ಪದ್ಧತಿಗಳನ್ನೂ ಸಂಪ್ರದಾಯಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗಿದ್ದಿತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆಯಾ ಕುಲದವರ ಸಭೆಗಳಲ್ಲಿ ಅಂಗೀಕರಿಸಲ್ಪಟ್ಟ ನಿರ್ಣಯಗಳನ್ನು ಅರಸನು ಒಪ್ಪಿಕೊಂಡಾಗ ಅವು ಕಾನೂನುಬದ್ಧವಾಗುತ್ತಿದ್ದವೆಂದು ಡೆರಿಟ್ ಅವರು ಬರೆದಿದ್ದಾರೆ. ಅವರು ಮುಂದುವರಿದು ಪ್ರಭಾವ ಹಾಗೂ ಭ್ರಷ್ಟಾಚಾರಗಳಿಂದ ನ್ಯಾಯದ ಪಾವಿತ್ರ್ಯತೆಗೆ ಅಪಚಾರವಾಗುವ ಸಂದರ್ಭಗಳಿದ್ದಲ್ಲಿ ಮೊಕದ್ದಮೆಯ ಮೊದಲ ಹಂತವೇ ಅರಸನ ಸಮ್ಮುಖಕ್ಕೆ ಹೋಗುತ್ತಿತ್ತೆಂದು ಹದಿಮೂರನೆಯ ಶತಮಾನದ ಮಂತ್ರಿಯೋರ್ವನ ಪ್ರಕರಣವೊಂದನ್ನು ನಿದರ್ಶನವಾಗಿತ್ತಿದ್ದಾರೆ.

ರಾಜಕುಟುಂಬದ ಮೇಲೆ ಸಲ್ಲದ ಅಪವಾದಗಳನ್ನು ಹೊರಿಸಿದವರಿಗೆ ಉಗ್ರ ಶಿಕ್ಷೆ ಕಾದಿರುತ್ತಿದ್ದಿತು. ರಾಜಾಜ್ಞೆಯನ್ನು ಉಲ್ಲಂಘಿಸಿದವರೂ ಶಿಕ್ಷಾರ್ಹರಾಗಿದ್ದರು.

ಅರಸನು ದೇವಾಲಯಗಳ ಅರ್ಚನಾವೃತ್ತಿಗೆ ಉಮೇದುವಾರರನ್ನು ಆಯ್ಕೆ ಮಾಡುವುದೂ ದೇವಾಲಯಗಳ ಆಡಳಿತದ ಮೇಲೆ ನಿಯಂತ್ರಣ ಪ್ರಭಾವವನ್ನೂ ಬೀರುವುದೂ ವಾಡಿಕೆಯಲ್ಲಿದ್ದಿತು. ಅರಸನ ಆದಾಯದ ಮೂಲಗಳಲ್ಲಿ ಭೂಕಂದಾಯ, ತನ್ನ ಖಾಸಗಿ ಜಮೀನಿನ ಉತ್ಪನ್ನ, ಹೂತಿಟ್ಟ ಹಣ, ಗಣಿಗಳು, ಜುಲ್ಮಾನೆ, ಮುಟ್ಟುಗೋಲಾದ ಆಸ್ತಿ, ಸರಕಿನ ಮೇಲಿನ ಸುಂಕ ಮತ್ತು ಅಬ್ಕಾರಿ ತೆರಿಗೆಗಳು ಸೇರಿದ್ದವು.

ಅರಮನೆಯ ವಹಿವಾಟು, ರಾಣಿವಾಸ, ಸೈನ್ಯಕ್ಕೆ ಬೇಕಾದ ಕುದುರೆ,

ಆನೆಗಳ ಪೋಷಣೆ, ರಾಯಭಾರಿಗಳು, ಸರರಾಜರು, ದೇವಾಲಯುಗಳು ಮತ್ತಿ ತರ ವ್ಯಕ್ತಿಗಳಿಗೆ ಕೊಡುವ ಇನಾಮು ಅಥವಾ ಉಡುಗೊರೆ, ಕೂಲಿಯ ಸಿಪಾಯಿಗಳ ಸಂಭಾವನೆ ಮುಂತಾದವುಗಳಿಗೆ ಹೆಚ್ಚಿನ ಹಣ ಖರ್ಚಾಗುತ್ತಿದ್ದಿತು. ಉಳಿದ ಹಣದಲ್ಲಿ ದೇವಾಲಯ, ಬಸದಿ, ಕೆರೆ, ಕೋಟೆ, ಅರಮನೆಗಳ ನಿರ್ಮಾಣ ಅಥವಾ ದುರಸ್ತಿ, ಕಲಾವಿದರ, ಕವಿಗಳ, ವಿದ್ವಾಂಸರ ಪೋಷಣೆ ಮುಂತಾದುವು ಆಗಬೇಕಾಗಿದ್ದಿತು. ಉಳಿತಾಯಕ್ಕಾಗಿ ಕೊಂಚ ಹಣ ಮೀಸಲಾಗುತ್ತಿದ್ದಿತು.

ಮಂತ್ರಿಮಂಡಲ ಮತ್ತು ಅಧಿಕಾರ ವರ್ಗ

ಹೊಯ್ಸಳರ ಕಾಲದಲ್ಲಿ ಪಂಚಪ್ರಧಾನರನ್ನೊಳಗೊಂಡ ಮಂತ್ರಿ ಮಂಡಲವಿದ್ದಿತು. ಆ ಪ್ರಧಾನರಲ್ಲಿ ಸಂಧಿ ವಿಗ್ರಹಿ, ಶ್ರೀಕರಣ ಸರ್ವಾಧಿಕಾರಿ, ಹಿರಿಯ ಭಂಡಾರಿ, ಸೇನಾಧಿಪತಿ ಮತ್ತು ಮಹಾಪಸಾಯತರು ಸೇರಿದ್ದರು. ಇವರ ಪೈಕೀ ಸರ್ವಾಧಿಕಾರಿಯು ಮುಖ್ಯ ಮಂತ್ರಿ ಅಥವಾ ಮಹಾಪ್ರಧಾನನಾಗಿದ್ದನೆಂದು ವಿಲಿಯಂ ಕೊಯೆಲ್ ಬರೆದಿದ್ದಾರೆ. ವಿಷ್ಣುವರ್ಧನನ ಕಾಲದಲ್ಲಿ ಮರಿಯಾನೆ ಮತ್ತು ಭಾರತ ಎಂಬ ಸೋದರರು ಏಕ ಕಾಲದಲ್ಲಿ ಸರ್ವಾಧಿಕಾರಿ ಹುದ್ದೆಯನ್ನು ಅಲಂಕರಿಸಿದ್ದರೆಂದು ಹೇಳಲಾಗಿದೆ.

ಇಂತಹ ಅಮಾತ್ಯರ ನೇಮಕಕ್ಕೆ ಯೋಗ್ಯತೆಯು ಮುಖ್ಯ ಆಧಾರವಾಗಿದ್ದಿತು. ಸಾಮಾನ್ಯವಾಗಿ ಆ ಹುದ್ದೆಗಳು ಆಜೀವ ಪರ್ಯಂತವಾಗಿದ್ದುವು.

ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಪರಮ ವಿಶ್ವಾಸಿ, ಬಾಹತ್ತರ ನಿಯೋಗಾಧಿಪತಿ ಮುಂತಾದ ಕೆಳದರ್ಜೆಯ ಅಧಿಕಾರಿಗಳೂ ಇದ್ದರು. ಎಪ್ಪತ್ತೆರಡು ಅಧಿಕಾರಗಳ ಅಥವಾ ಕಚೇರಿಗಳ ಮುಖ್ಯಸ್ಥನಿಗೆ ಬಾಹತ್ತರ ನಿಯೋಗಾಧಿಪತಿಯೆಂಬ ಹೆಸರಿದ್ದಿತೆಂದು ಡೆರೆಟ್ ಅವರ ಅಭಿಪ್ರಾಯವಾಗಿದೆ.

ಎರಡನೆಯ ನರಸಿಂಹನ ಕಾಲದಲ್ಲಿ ರಾಯದಂಡನಾಥ ಎಂಬ ಬಿರುದನ್ನು ಪಡೆದ ಅಧಿಕಾರಿಗಳೂ ಅವನ ಉತ್ತರಾಧಿಕಾರಿಗಳ ಕಾಲದಲ್ಲಿ

'ಕುಮಾರ' ಎಂಬ ಬಿರುದನ್ನು ಪಡೆದ ಅಧಿಕಾರಿಗಳೂ ಎರಡನೆಯ ಬಲ್ಲಾಳನ ಕಾಲದಲ್ಲಿ ಮೊದಲು ಪಡೆವಲ, ಹಿರಿಯ ಹಡೆವಲ ಮುಂತಾದ ನಾಮಾಂಕಿತಗಳುಳ್ಳ ಅಧಿಕಾರಿಗಳೂ ಇದ್ದರು.

ಸಂಧಿವಿಗ್ರಹಿಯು ವಿದೇಶಾಂಗ ಸಚಿವನಾಗಿದ್ದನು. ಹಿರಿಯ ಬಂಡಾರಿಗೆ ಖಜಾನೆಯ ಅನೇಕ ಅಂಶಗಳ ಬಗ್ಗೆ ತಿಳುವಳಿಕೆ ಇರಬೇಕಾಗಿದ್ದಿತು. ಆತನು ಆಡಳಿತ ಮತ್ತು ವೆಚ್ಚಗಳ ಬಗ್ಗೆ ಪ್ರವೀಣನಾಗಿರಬೇಕಾಗಿದ್ದಿತು. ರಾಜ್ಯದ ಎಲ್ಲಾ ಖಜಾನೆಗಳ ತನಿಖೆಯು ಆತನ ಅಧಿಕಾರ ವ್ಯಾಪ್ತಿಗೆ ಒಳಗಾಗಿದ್ದಿತು. ಪ್ರತಿಯೊಂದು ಖಜಾನೆಗೂ ಒಬ್ಬ ಭಂಡಾರಿಯಿದ್ದನು.

ಹೊಯ್ಸಳ ರಾಜ್ಯದಲ್ಲಿ ಖಜಾನೆಯ ಕೇಂದ್ರಗಳು ಅಸಂಖ್ಯಾತವಾಗಿದ್ದುವು. ಅವುಗಳನ್ನು ಬಂಡಾರ ವಾದು ದುರ್ಗಳ್ ಎನ್ನುತ್ತಿದ್ದರು.

ಲೊಕ್ಕಿಗುಂಡಿಯು ಕರ್ನಾಟಕದ ಪ್ರಮುಖ ಟಂಕಸಾಲೆ (ಕಮ್ಮಟ) ಗಳಲ್ಲಿ ಒಂದಾಗಿದ್ದಿತು. ಅಲ್ಲಿ ಪೊನ್ ಗದ್ಯಾಣ (ಚಿನ್ನದ ನಾಣ್ಯ) ತಯಾರಾಗುತ್ತಿದ್ದಿತು.

ಒಂದೊಂದು ಖಜಾನೆಗೂ ಒಬ್ಬ ಶ್ರೀಕರಣಾಧಿಕಾರಿ ಇದ್ದನು. ಜವಾಹಿರಿಗಳ ತನಿಖಾಧಿಕಾರಿಯಾಗಿ ಮಾಣಿಕ್ಯ ಭಂಡಾರಿ ಇದ್ದನು. ಖಜಾನೆಗಳ ಮೇಲ್ವಿಚಾರಣೆಗಾಗಿ ಕೋಶಾಧ್ಯಕ್ಷರೂ ಮಾಣಿಕ್ಯ ಭಂಡಾರದ ಅಧ್ಯಕ್ಷರೂ ಇದ್ದರು.

ಖಜಾನೆಗಳಲ್ಲಿ ಮೇಲ್ವಿಚಾರಣೆಗಾಗಿ ಕೋಶಾಧ್ಯಕ್ಷರೂ ಮಾಣಿಕ್ಯ ಭಂಡಾರದ ಅಧ್ಯಕ್ಷರೂ ಇದ್ದರು. ಖಜಾನೆಗಳಲ್ಲಿ 'ಗಣಕ'ರೆಂಬ ಗುಮಾಸ್ತರಿದ್ದರು. ಪ್ರಾಮಾಣಿಕತೆ, ಕಾರ್ಯತತ್ಪರತೆಗಳನ್ನು ಪ್ರದರ್ಶಿಸಿದ ಗಣಕರಿಗೆ 'ಶ್ರೀಕರಣ' ಮತ್ತು 'ಭಂಡಾರಿ' ಹುದ್ದೆಗಳಿಗೆ ಬಡ್ತಿ ದೊರೆಯುತ್ತಿದ್ದಿತು.

ಲೆಕ್ಕ–ಪತ್ರಗಳಿಗೆ ಬರೆದಿಟ್ಟದ್ದ ದಾಖಲೆಗಳಿಗೆ 'ಕಡತ' ಎಂಬ ಹೆಸರಿದ್ದಿತು.

ಖಜಾನೆಗಳ ಕಾರ್ಯ ಚಟುವಟಿಕೆಗಳ ಮೇಲೆ ನಿಗಾ ಇಡಲು ರಾಜಾ-

ಧ್ಯಕ್ಷ ಹೆಗ್ಗಡೆಗಳು ಅಥವಾ ಬಂಡಾರದ ಅಧಿಪರ್ ಬೇರೆ ಇದ್ದರೆಂದು ಡಾ॥ ಎಂ. ವಿ. ಕೃಷ್ಣರಾವ್ ಅವರು ಬರೆದಿದ್ದಾರೆ.

ಒಟ್ಟನಲ್ಲಿ ಹೇಳುವುದಾದರೆ ಹಿರಿಯ ಭಂಡಾರಿಯು ಭಂಡಾರದ ಮೇಲ್ವಿಚಾರಕನಾಗಿದ್ದನು. ಶ್ರೀಕರಣ ಸರ್ವಾಧಿಕಾರಿಯು ಲೆಕ್ಕ ಪತ್ರ (Accounts) ಗಳ ಮೇಲ್ವಿಚಾರಕನಾಗಿದ್ದನು.

ಶ್ರೀಕರಣ ಸರ್ವಾಧಿಕಾರಿಯ ಅಧೀನದಲ್ಲಿದ್ದ ಶ್ರೀಕರಣ ಹೆಗ್ಗಡೆಯ ಅಧಿಕಾರ ವ್ಯಾಪ್ತಿಗೆ ಒಂದು ಜಿಲ್ಲೆಯೇ ಸೇರಿದ್ದಿತು.

ಮೊದಮೊದಲು ಭಂಡಾರಿ, ಸಂಧಿವಿಗ್ರಹಿ ಮತ್ತು ಸರ್ವಾಧಿಕಾರಿಗಳು ವಿಶೇಷವಾದ ಪ್ರಾಮುಖ್ಯತೆಯನ್ನು ಪಡೆದಿದ್ದರು. ದಿಗ್ವಿಜಯ ಅಥವಾ ದಂಡಯಾತ್ರೆಯ ಚಟುವಟಿಕೆಗಳು ಹೆಚ್ಚಿದಂತೆಲ್ಲಾ ಸೇನಾಧಿಪತಿ ಹಾಗೂ ಮಹಾಪಸಾಯತರ ಪ್ರಾಮುಖ್ಯತೆ ಹೆಚ್ಚಾಯಿತು.

ಆದಿಯ ಹೊಯ್ಸಳ ಅರಸರ ಮೇಲೆ ಪಂಚಪ್ರಧಾನರ ಪ್ರಭಾವ ಗಣನೀಯವಾಗಿದ್ದಿತು. ನ್ಯಾಯತೀರ್ಮಾನ, ದತ್ತಿಯನ್ನು ಮಂಜೂರು ಮಾಡುವುದು ಮುಂತಾದ ವಿಷಯಗಳಲ್ಲಿ ಅವರ ಒಪ್ಪಿಗೆ ಅಗತ್ಯವಾಗಿದ್ದಿತು. ಅರಸನ ಪ್ರವಾಸ, ವಿಜಯಯಾತ್ರೆಗಳಲ್ಲೂ ಅವರು ಭಾಗವಹಿಸುತ್ತಿದು ದಲ್ಲದೆ ಕೆಲವು ಸಂದರ್ಭಗಳಲ್ಲಿ ಅರಸನು ಪ್ರಾಪ್ತ ವಯಸ್ಸಿಗೆ ಬರುವವರೆಗೂ ರಾಜ್ಯಭಾರದ ಸಂಪೂರ್ಣ ಹೊಣೆಯನ್ನು ಹೊರುತ್ತಿದ್ದರು.

ಸಾಮಾನ್ಯವಾಗಿ ಮಂತ್ರಿ ಪದವಿಯು ವಂಶಪಾರಂಪರ್ಯವಾಗಿದ್ದಿತು. ಚನ್ನರಾಯ ಪಟ್ಟಣದ ಶಾಸನವೊಂದು ಕೇಶವ ಅಥವಾ ಕೇಶರಾಜನೆಂಬ ಮಂತ್ರಿಯ ಬಗ್ಗೆ ದೀರ್ಘ ವಿವರಣೆಯನ್ನಿತ್ತು ಅವನ ಪೂರ್ವಿಕರೆಲ್ಲಾ ಹೊಯ್ಸಳ ಅರಸರಿಗೆ ಮಂತ್ರಿಗಳಾಗಿದ್ದರೆಂದು ತಿಳಿಸಿದೆ. (Cn. 244, E, C. V). ವಿಷ್ಣುವರ್ಧನನು ತನ್ನ ಮಂತ್ರಿಯೋರ್ವನ ಪುತ್ರನಾದ ವಿಷ್ಣುವಿಗೆ "ಅನ್ವಯಾಗತ ಪ್ರಧಾನ ಸಂತತಿಯುಂ ತನಗೆ ಧರ್ಮ ಸಂತತಿಯು ಮೆಂಬ ಬಹುಮಾನದಿಂ" ದ ತಾನೇ ಉಪನಯನ ಮಾಡಿಸಿ, ಅವನು ಪ್ರಾಪ್ತ ವಯಸ್ಕನಾದ ಮೇಲೆ, ದಂಡಾಧೀಶ ಪದವಿಯನ್ನು ಕೊಟ್ಟನು.

ಸೈನ್ಯಾಡಳಿತ (ಲಷ್ಕರಿ ಆಡಳಿತ)

ಹೊಯ್ಸಳ ರಾಜ್ಯದಲ್ಲಿ ಸೈನ್ಯಕ್ಕಾಗಿ ಪ್ರತ್ಯೇಕ ಭಂಡಾರವಿದ್ದಿತು. ಅಲ್ಲಿ ವಸ್ತ್ರಗಳನ್ನೂ ದಂಡಗಳನ್ನೂ ಔಷದಿ ಸಾಮಗ್ರಿಗಳನ್ನೂ ಸಂಗ್ರಹಿಸಿಡುತ್ತಿದ್ದರು. ಪಟ್ಟಿಸ ಭಂಡಾರಿಯು ಅದರ ಮೇಲ್ವಿಚಾರಕನಾಗಿದ್ದನು.

ಬಂಡಿಯಕಾರನು ಪ್ರಾಯಶಃ ಸಮರ–ವಾಹನಗಳನ್ನು ಸರಬರಾಜು ಮಾಡುತ್ತಿದ್ದುದಲ್ಲದೆ ಕದನಗಳಲ್ಲಿಯೂ ಭಾಗವಹಿಸುತ್ತಿದ್ದನು.

ಆನೆಗಳೂ ಕುದುರೆಗಳೂ ದಂಡಯಾತ್ರೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದುದರಿಂದ ಅವುಗಳಿಗೆ ತರಬೇತು ಕೊಡಲು ಪ್ರತ್ಯೇಕ ಶಾಲೆಗಳಿದ್ದುವು.

ಅರಸೀಕೆರೆಯ ಶಾಸನವೊಂದು ವಿಷ್ಣುವರ್ಧನನ ರಾಣಿಯಾಗಿದ್ದ ಬೊಮ್ಮಲಾದೇವಿಯು ಅಂತಹ ಶಾಲೆಯೊಂದನ್ನು ಸ್ಥಾಪಿಸಿದ್ದಳೆಂದು ತಿಳಿಸುತ್ತದೆ (Ak. 58 E C. V). ಆಕೆಯು ಅನಂತಪಾಲ ಎಂಬಾತನನ್ನು ಅಶ್ವಸಾಹಿನಿ (Horse–Trainer) ಯನ್ನಾಗಿ ನೇಮಿಸಿದ್ದಳು.

ಕುದುರೆ ಲಾಯಗಳ ಮುಖ್ಯಸ್ಥರಿಗೆ ಅಶ್ವಾಧ್ಯಕ್ಷ, ತುರಗಸಾಹಿನಿ, ಪಲ್ಲಿಕಾರ ಎಂಬ ಹೆಸರುಗಳಿದ್ದುವು.

ಅಶ್ವಾರೋಹಿ ಸೈನಿಕರು ಈಟಿ, ಕತ್ತಿ, ಕಠಾರಿ, ಗುರಾಣಿಗಳನ್ನು ಯುದ್ಧದ ವೇಳೆ ಉಪಯೋಗಿಸುತ್ತಿದ್ದರು. ಅರಸನು ಅಶ್ವಗಳಿಂದ ಎಳೆಯಲ್ಪಟ್ಟ ರಥಗಳಲ್ಲಿ ಕುಳಿತು ರಣರಂಗಕ್ಕೆ ಧಾವಿಸುತ್ತಿದ್ದನು.

ಎರಡನೆಯ ಬಲ್ಲಾಳನ ಕಾಲದಲ್ಲಿ ಆನೆಗಳ ತರಬೇತಿಗಾಗಿ ಪ್ರತ್ಯೇಕ ಕೇಂದ್ರಗಳಿದ್ದುವು. ಅವನ ಕಾಲವಲ್ಲಿ ನರಸಿಪುರ ತಾಲ್ಲೂಕಿನ ಕೋಳಿಗುಂಡವು ಗಜ ತರಬೇತಿನ ಕೇಂದ್ರವಾಗಿದ್ದಿತು. ಹೊಯ್ಸಳರ ವೈರಿಗಳಾದ ಯಾದವರು ಒಂಟೆಗಳನ್ನೂ ಸಮರ ಭೂಮಿಗೆ ತರುತ್ತಿದ್ದರು. ಎರಡನೆಯ ನರಸಿಂಹನು ತನ್ನ ಶತ್ರುಗಳ ಒಂಟೆಗಳನ್ನು ನಾಶಪಡಿಸಿದನಂತೆ.

ಯುದ್ಧದಲ್ಲಿ ಆನೆಗಳನ್ನು ರಕ್ಷಿಸುತ್ತಿದ್ದ ಸೈನಿಕರಿಗೆ ಅಕ್ಕಟಿಗ ಎಂಬ ಹೆಸರಿದ್ದಿತು.

ಆನೆಪಡೆಗಳ ದಳಪತಿಗೆ ಗಜಸಾಹಿನಿ ಎಂಬ ಹೆಸರಿದ್ದಿತು.

ಆನೆ ಮಾವಂತರ ಅಥವಾ ಮಾವಟಿಗರ ಹುದ್ದೆ ಆನುವಂಶಿಕವಾಗಿದ್ದಿತು. ಬೇಲೂರಿನ ಶಾಸನವೊಂದು ಅರಮನೆಯ ಆಜಿ–ವೈರಿ–ಘಟ್ಟ ಎಂಬ ಆನೆಯನ್ನು ಹತೋಟಿಗೆ ತರುವ ಪ್ರಯತ್ನದಲ್ಲಿ ರಾಮೋಯ ಮಾವಂತನೆಂಬುವನು ಪ್ರಾಣ ಕಳೆದುಕೊಂಡುದುದನ್ನು ಉಲ್ಲೇಖಿಸಿದೆ. (Bl. 339, E. C. XV).

ಯೋಧರನ್ನು ಕೊಲ್ಲುವುದಕ್ಕಾಗಿ (ವಧಕರ್ಮ) ಆನೆಗಳಿಗೆ ವಿಶೇಷ ತರಬೇತನ್ನು ಕೊಡುತ್ತಿದ್ದರು.

ಆನೆಗಳನ್ನು ಹಿಡಿದು ಸಾಕುತ್ತಿದ್ದ ಸಾಮಂತರಿಗೆ ದತ್ತಿಗಳನ್ನು ಬಿಟ್ಟುಕೊಡುವುದರ ಮೂಲಕ ಅರಸನು ವಿಶೇಷ ಪುರಸ್ಕಾರ ನೀಡುತ್ತಿದ್ದನು.

ಸಾಮಂತರಿಗೂ ದಂಡನಾಯಕರಿಗೂ ಪ್ರತ್ಯೇಕ ಸೇನೆಗಳಿದ್ದುವು.

ಪ್ರತಿ ಸೇನೆಯಲ್ಲಿಯೂ ಅಶ್ವ, ಗಜಗಳಲ್ಲದೆ ಪುರುಷ ಸೇವಕರೂ ಅಧಿಕಾರಿಗಳೂ ಇರುತ್ತಿದ್ದರು. 'ಎಂಕಾರು' ಎಂಬ ಶಬ್ದ ಅಂತಹ ಅಧಿಕಾರಿಗಳಿಗೆ ಅನ್ವಯಿಸುವುದು. ಪದಾತಿದಳ (Infantry) ಗಳಲ್ಲಿ ತಾತ್ಕಾಲಿಕವಾಗಿ ಬಾಡಿಗೆಯ ಮೇಲೆ ನೇಮಕಗೊಂಡಿದ್ದ ಸೈನಿಕರೂ ಇರುತ್ತಿದ್ದರು.

ಸಾಮಂತರ ಸೈನ್ಯದ ವೆಚ್ಚಕ್ಕಾಗಿ ಉಂಬಳಿ ಜಮೀನುಗಳನ್ನು ಕೊಡಲಾಗುತ್ತಿದ್ದಿತು.

ಗ್ರಾಮಗಳು ಅಥವಾ ನಾಡುಗಳು ಒದಗಿಸುತ್ತಿದ್ದ ಸೇನಾಪಡೆಗೆ 'ನಾಡಲು' ಎಂಬ ಹೆಸರಿದ್ದಿತು. ಬೇಡರು, 'ಕಳ್ಳರು', ಮೊದಲಾದ ಗಿರಿಜನರೇ ಅದರಲ್ಲಿ ಹೆಚ್ಚಾಗಿದ್ದರು. ಸಂದಿಗ್ಧ ಪರಿಸ್ಥಿತಿಯಲ್ಲಿ ಪಳಗಿದ ಯೋಧರಿಗೆ ದಳಪತಿಯ ಅಂತಸ್ತು ದೊರೆಯುತ್ತಿದ್ದಿತು. ಅವರಿಗೆ 'ಸುಭಟ' ಎಂಬ ಬಿರುದನ್ನೂ ಚಿನ್ನದ ತೋಡಾಗಳನ್ನೂ ಅರಸನು ದಯಪಾಲಿಸುತ್ತಿದ್ದನು.

ಆಡಳಿತದಲ್ಲಿ ಅನುಭವವನ್ನು ಗಳಿಸಿದ್ದ ಬ್ರಾಹ್ಮಣರನ್ನೇ ದಳಪತಿಗಳನ್ನಾಗಿ ನೇಮಿಸುವುದು ವಾಡಿಕೆಯಲ್ಲಿದ್ದಿತು. ಅಕ್ಕಸಾಲಿಗರು, ಹಜಾಮರು ಮುಂತಾದವರಿಗೂ ಸೈನ್ಯದಲ್ಲಿರಲು ಅವಕಾಶವಿದ್ದಿತು.

ಸೈನ್ಯವು ಹಾದು ಹೋಗುವ ಜಿಲ್ಲೆಗಳೊಂದಿಗೆ ದಳಪತಿಗಳು ನಿರಂತರ ಸಂಪರ್ಕವನ್ನು ಹೊಂದಿದ್ದರು. ಅರಸನಿಗೆ ದಳಪತಿಗಳನ್ನು ಅಧಿಕಾರದಿಂದ ತೆಗೆಯುವ ಹಕ್ಕಿದ್ದಿತು.

ಸೈನ್ಯದ ವೆಚ್ಚಕ್ಕಾಗಿ ಹೊಯ್ಸಳರ ಕಾಲದಲ್ಲಿ ಆನೆಯ ಸೇಸೆ, ಕುದುರೆಯ ಸೇಸೆ, ವೀರ ಸೇಸೆ, ಕಟಕ ಸೇಸೆ, ದಂಡಿನ ಭಾಗ್ಯತೆ ಮುಂತಾದ ತೆರಿಗೆಗಳನ್ನು ವಸೂಲ್ಮಾಡುತ್ತಿದ್ದರು.

ಸರಹದ್ದಿನ ಪ್ರಾಂತಗಳಲ್ಲಿ ದಂಡನಾಯಕರನ್ನೇ ಪ್ರಾಂತ್ಯಾಧಿಪತಿ ಅಥವಾ ಸಾಮಂತರನ್ನಾಗಿ ನೇಮಿಸುತ್ತಿದ್ದರು. ರಾಜ್ಯದ ಸುರಕ್ಷತೆಗಾಗಿ ಅನೇಕ ಕೇಂದ್ರಗಳಲ್ಲಿ ದಂಡಿನ ಶಿಬಿರಗಳಿದ್ದುವು.

ಹೊಯ್ಸಳರ ಕಾಲದ ಪ್ರಾಂತ್ಯಾಡಳಿತ

ಹೊಯ್ಸಳರ ಪ್ರಾಂತ್ಯಾಡಳಿತವು ಗಂಗರ ಹಾಗೂ ಚಾಲುಕ್ಯರ ರಾಜ್ಯಭಾರ ಕ್ರಮದಿಂದ ಅನೇಕ ಅಂಶಗಳನ್ನು ಅಳವಡಿಸಿಕೊಂಡಿದ್ದಿತೆಂದು ಡಾ|| ಎಂ. ವಿ. ಕೃಷ್ಣರಾವ್ ಅವರು ತೋರಿಸಿಕೊಟ್ಟಿದ್ದಾರೆ.

ಹೊಯ್ಸಳ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿಯೂ ಪ್ರಾಂತ್ಯಗಳನ್ನು ನಾಡುಗಳನ್ನಾಗಿಯೂ ವಿಭಜಿಸಿದ್ದರು. ಉದಾಹರಣೆಯನ್ನಾಗಿ ತಲಕಾಡು, ಕೊಂಗುನಾಡು, ನಂಗಲಿ, ಗಂಗವಾಡಿ, ನೊಳಂಬವಾಡಿ, ಹಲಗೆರೆ, ಹಳಸಿಗೆ, ಕುಂತಳ, ತೊಂಡೆನಾಡು, ಪುನ್ನಾಡು, ಏಳು ಸಾವಿರ, ಬನವಾಸಿ ಮುಂತಾದುವುಗಳನ್ನು ಕೊಡಬಹುದು.

ಗಡಿಯಲ್ಲಿದ್ದ ವ್ಯಾಪಾರ ಕೇಂದ್ರಗಳನ್ನೂ ಪ್ರಾಂತ್ಯಗಳನ್ನಾಗಿ ಪರಿವರ್ತಿಸಿದ್ದರು.

ಪ್ರಾಂತ್ಯಗಳ ಅಧಿಪತಿಗೆ ಸಾಮಂತ ಅಥವಾ ಮಾಂಡಲಿಕ ಎಂಬ ಹೆಸರಿದ್ದಿತು. ಯುವರಾಜ ಅಥವಾ ರಾಣಿಯರು ಈ ಹುದ್ದೆಗಳಿಗೆ ನೇಮಿಸಲ್ಪಡುತ್ತಿದ್ದರು. ಹಳೆಯ ಅರಸು ಮನೆತನದವರಿಗೂ ರಾಣಿಯರ ಬಂಧುಗಳಿಗೂ ಗೆದ್ದ ರಾಜ್ಯಗಳಲ್ಲಿದ್ದ ರಾಜರಿಗೂ ಆ ಪದವಿಗಳು ಲಭಿಸುತ್ತಿದ್ದವು.

ಒಮ್ಮೆ ಸ್ವತಂತ್ರ ಅರಸರಾಗಿದ್ದು ನಂತರ ಅಧೀನರಾದವರು ಮಂಡಲೇಶ್ವರರೆನಿಸಿದ್ದರು.

ಕೆಲವೊಮ್ಮೆ ಸೇವೆ, ಯೋಗ್ಯತೆಗಳ ಆಧಾರದ ಮೇಲೆ ಬೇರೆಯವರೂ ಪ್ರಾಂತ್ಯಗಳ ರಾಜ್ಯಪಾಲ (Governor) ರಾಗಿ ನೇಮಿಸಲ್ಪಡುತ್ತಿದ್ದರು.

ಸಾಮಂತ ಅಥವಾ ಮಾಂಡಲಿಕರ ಮೇಲೆ ನಿಗಾ ಇಡಲು ಅಧಿಕಾರಿಯೋರ್ವನನ್ನು ಹೊಯ್ಸಳ ಅರಸರು ನೇಮಿಸಿದ್ದರು. ಚಾಲುಕ್ಯರಿಂದ ಎರವಲು ಪಡೆದಿದ್ದ ಈ ಹುದ್ದೆಗೆ ಮಾನ್ಯ ಮಹಾಸಾಮಂತರ ಅಧಿಷ್ಠಾಯಕಂ ಎಂಬ ಹೆಸರಿದ್ದಿತು. ಚಾಲುಕ್ಯರ ಕಾಲದಲ್ಲಿದ್ದಂತೆ ಹೊಯ್ಸಳರ ಕಾಲದಲ್ಲಿಯೂ ಬಡ್ತಿಯ ಮೇಲೆ ಅಧಿಕಾರಿಗಳ ವರ್ಗಾವರ್ಗಿ ಇದ್ದಿತು. ಯಾರ ಸೇವೆಯು ಸರ್ಕಾರಕ್ಕೆ ಅತ್ಯಂತ ಅನಿವಾರ್ಯವಾಗಿದ್ದಿತೋ ಅಂತಹ ಅಧಿಕಾರಿಗೆ ಮಾತ್ರ ವರ್ಗದ ನಿಯಮ ಅನ್ವಯಿಸುತ್ತಿರಲಿಲ್ಲ.

ಪ್ರತಿಯೊಂದು ಪ್ರಾಂತಾಧಿಪತಿಗೂ ತನ್ನದೇ ಆದ ರಾಜಧಾನಿಯಿದ್ದಿತು. ರಾಜಕೀಯ ಸುಭದ್ರತೆಗಾಗಿ ಹೊಯ್ಸಳರ ಕಾಲದಲ್ಲಿ ಅನೇಕ ರಾಜ್ಯಧಾನಿಗಳಿದ್ದವು. ರಾಜಧಾನಿಗಳಲ್ಲದೆ ಆಡಳಿತದ ಸೌಕರ್ಯಕ್ಕಾಗಿ ಅನೇಕ ನಗರಗಳು ನಿರ್ಮಾಣವಾಗಿದ್ದುವು. ಸಿಂಧಗೆರೆಯು ರಾಜಧಾನಿಯಾಗಿದ್ದ ಅರಸೀಕೆರೆಯು ಅಂತಹ ನಗರಗಳಲ್ಲೊಂದಾಗಿದ್ದಿತು. ಅದರ ಆಡಳಿತಕ್ಕಾಗಿ ಶ್ರೀಕರಣ ಮುಂತಾದ ಅಧಿಕಾರಿಗಳೂ ಅದರ ರಕ್ಷಣೆಗಾಗಿ 'ತೋಟಗಾರ' ನೆಂಬುವನೂ ಇದ್ದರು.

ಪ್ರಾಂತ್ಯಗಳ ಅಧಿಪತಿಗಳು ಶಾಂತಿ, ನೆಮ್ಮದಿ, ಶಿಸ್ತು, ಕಾನೂನಿನ ಪಾಲನೆ ಮಾಡಬೇಕಾಗಿದ್ದಿತು. ಅವರು ಜಾನುವಾರು (Cattle) ಗಳ ಅಪಹರಣ, ಶತ್ರುಗಳ ದುರಾಕ್ರಮಣಗಳ ವಿರುದ್ಧ ಕ್ರಮ ಕೈಗೊಂಡು ಗಡಿ ರಕ್ಷಣೆ ಮಾಡಬೇಕಾಗಿದ್ದಿತು. ವಿಜಯಾದಿತ್ಯ ಮಂಗಲ, ತಲಕಾಡು ಮುಂತಾದುವುಗಳ ಸಾಮಂತರಿಗೆ ಪ್ರತ್ಯೇಕವಾದ ಸೇನೆಯೂ ನ್ಯಾಯಾಲಯವೂ ಇದ್ದುವು.

ಸಾಮಂತರು ಸರ್ಕಾರಕ್ಕೆ ಬರಬೇಕಾದ ಕಂದಾಯವನ್ನು ವಸೂಲು ಮಾಡಿಸಿ, ಅದನ್ನು ಖಜಾನೆಗೆ ಪಾವತಿ ಮಾಡಿಸಬೇಕಾಗಿದ್ದಿತು.

ಜಿಲ್ಲೆಗಳಿಗೆ ನಾಡುಗಳೆಂಬ ಹೆಸರಿದ್ದಿತು. ಗಂಗವಾಡಿಯನ್ನು ಹದಿನಾಲ್ಕು ನಾಡುಗಳನ್ನಾಗಿ ವಿಭಾಗಿಸಿದ್ದ ನಿದರ್ಶನವಿದೆ.

ಪ್ರಾಂತ್ಯ ಸರ್ಕಾರದ ನೇರ ಹತೋಟಿಯಲ್ಲಿ ಹೆಗ್ಗಡೆ ಎಂಬ ಅಧಿಕಾರಿ ಇದ್ದನು. ಆ ಹುದ್ದೆಗೆ ಹೆಗ್ಗಡೆಕರಣ, ರಾಜಾಧ್ಯಕ್ಷರ ಕರಣ, ರಾಜ್ಯ ಹೆಗ್ಗಡೆ ಮುಂತಾದ ಹೆಸರುಗಳೂ ಇದ್ದುವು. ಕಂದಾಯ ವಸೂಲಿ, ನ್ಯಾಯ ತೀರ್ಮಾನ, ರಕ್ಷಣಾಕ್ರಮಗಳು ಆತನ ಅಧಿಕಾರ ವ್ಯಾಪ್ತಿಗೆ ಒಳಗಾಗಿದ್ದುವು. ಅವನು ಕೋಟೆ ಕೊತ್ತಲುಗಳನ್ನು ಬಲಪಡಿಸಿ, ಶತ್ರುಗಳ ದಾಳಿಯನ್ನು ತಡೆಯಬೇಕಾಗಿದ್ದಿತು. ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟದ್ದ 'ವಿಚಾರಿ' ಗಳಿಗೂ ರಾಜಾಧ್ಯಕ್ಷಿಗಳಿಗೂ ನಾಡಹೆಗ್ಗಡೆಯು ಸುದ್ದಿ ಸಮಾಚಾರಗಳನ್ನು ತಿಳಿಸಬೇಕಾಗಿದ್ದಿತು.

ಪ್ರಾಂತ್ಯ ಮತ್ತು ನಾಡುಗಳ ಆಡಳಿತ ನಿರ್ವಹಣೆಯಲ್ಲಿ ಶ್ರೀಕರಣ ಹೆಗ್ಗಡೆ, ಸುಂಕವೆಗ್ಗಡೆ, ಖಣವೆಗ್ಗಡೆ, ಧಂಡಾಯವೆಗ್ಗಡೆ ಮುಂತಾದ ಅಧಿಕಾರಿಗಳಿಗೂ ಪಾಲು ಇದ್ದಿತು.

ಪ್ರತಿಯೊಬ್ಬ ವ್ಯಕ್ತಿಯಿಂದ ಬಾಕಿ ಬರಬೇಕಾಗಿದ್ದ ಕಂದಾಯದ ಮೊತ್ತವನ್ನು ಶ್ರೀಕರಣ ಹೆಗ್ಗಡೆಯು ಬರೆಯಬೇಕಾಗಿದ್ದಿತು; ಸರ್ಕಾರವು ವಿನಾಯತಿ ಕೊಟ್ಟದ್ದ ಮೊಬಲಗನ್ನು ನಮೂದಿಸಬೇಕಾಗಿದ್ದಿತು.

ಸುಂಕವೆಗ್ಗಡೆಯು ತೆರಿಗೆಗಳನ್ನು ವಸೂಲು ಮಾಡುತ್ತಿದ್ದನು. ಪ್ರತಿಯೊಬ್ಬ ಹೆಗ್ಗಡೆಯ ಅಧೀನದಲ್ಲಿ ಒಬ್ಬ ಸೇನಭೋವನಿದ್ದನು. ಸುಂಕದ ಇಲಾಖೆಯಲ್ಲೂ ಭ್ರಷ್ಟಾಚಾರದ ಸಂಭವವಿದ್ದುದರಿಂದ ಅಧಿಕಾರಿಗಳ ವರ್ಗಾವರ್ಗಿಗೆ ಅವಕಾಶವಿದ್ದಿತು. ಹೊಯ್ಸಳರಲ್ಲಿ ಕರಣಿಕನಾಗಿ ಅನುಭವಗಳಿಸಿದ್ದ ಹರಿಹರನು ತನ್ನ ಬಸವರಾಜ ದೇವರ ರಗಳೆಯಲ್ಲಿ "ಎರೆವ ಲಂಚವನೀವ ದಂಡನಾಥರ್ಕಳಂ" ಎಂಬುದಾಗಿ ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆದಿದ್ದಾನೆ.

ತೆರಿಗೆ ರಿಯಾಯತಿ ಮುಂತಾದುವುಗಳಿಗೆ ರಾಜನ ಅನುಮತಿ ಅಗತ್ಯವಿದ್ದಿತು. ಅನೇಕ ದಾಖಲೆಗಳ ಮೇಲೆ ಶ್ರೀಮಲಪರೊಳ್ ಗಂಡ ಅಥವಾ ಶ್ರೀ ಬಲ್ಲಾಳ ದೇವಸ್ಯ ಅಥವಾ ಶ್ರೀ ವೀರನಾರಸಿಂಹ ದೇವಸ್ಯ, ಶ್ರೀಮಲಪ

ವಿನ ಬೃಂದಾವನದ ಗೋಪಾಲದೇವರ ನೈವೇದ್ಯ, ದೀವಿಗೆಗಳಿಗಾಗಿ ಪ್ರತಿ ವರ್ಷವೂ ಹದಿನೆಂಟೂ ಚಿಲ್ಲರೆ ಗದ್ಯಾಣಗಳನ್ನು ತೆರಿಗೆಯಾಗಿ ಕೊಡಬೇಕಾಗಿತ್ತೆಂದು ತಿಳಿಸಲಾಗಿಡೆ. (Ck. 71, E. C. XVI).

ಯುವರಾಜನಿಗಾಗಿ ಭೂಮಿಯ ಮೇಲೆ ಹಾಕಿದ್ದ ತೆರಿಗೆಗೆ 'ಕುಮಾರ' ಎಂಬ ಹೆಸರಿದ್ದಿತು.

ಅರಸನು ಮಂಜೂರು ಮಾಡಿದ್ದ ವಿಶ್ರಾಂತಿ ವೇತನ ಮೊದಲಾದುವುಗಳಿಗಾಗಿ ನಿಧಿಸಂಗ್ರಹಿಸಲು ಹಾಕಿದ್ದ ತೆರಿಗೆಗೆ 'ನಿಬಂಧ' ಎನ್ನುತ್ತಿದ್ದರು.

ನಾಡಿನ ಭಂಡಾರದ ಸಿಬ್ಬಂದಿಯ ವೇತನಕ್ಕಾಗಿ ಹಾಕಿದ್ದ ತೆರಿಗೆ ಶ್ರೀಕರಣವೆಂಬ ಹೆಸರಿದ್ದಿತು.

ಹೆಗ್ಗಡೆಗಳಿಗೆ ಕೊಡಬೇಕಾಗಿದ್ದ ತೆರಿಗೆಯೇ 'ಸುಂಕ'. ಅಡಕೆ ತೋಟಗಳ ಮೇಲೆ 'ಅಡಕೆ ಲೆಕ್ಕ' ಎಂಬ ತೆರಿಗೆಯು ವಿಧಿಸಲ್ಪಟ್ಟಿದ್ದಿತು.

ಪಶು ಸಂಗೋಪನ ಮಾಡುವವರು ಪ್ರಾಯಶಃ 'ನಲ್ಲಾವು–ನಲ್ಲೆತ್ತು' ಎಂಬ ತೆರಿಗೆಯನ್ನು ಕೊಡಬೇಕಾಗಿದ್ದಿತು.

ಸ್ಥಿರ ಆಸ್ತಿಯನ್ನು ಹೊಂದಿದ್ದವರು ಅವರ ಅಂತಸ್ತಿಗೆ ತಕ್ಕಂತೆ 'ತೊಡರು' ಎಂಬ ತೆರಿಗೆಯನ್ನು ಕೊಡಬೇಕಾಗಿದ್ದಿತು.

ಸುತ್ತಿಗೆ ಅಥವಾ ಒನಕೆಗೆ ಸಂಬಂಧಿಸಿದಂತೆ ಕೊಡತಿ–ವನ ಎಂಬ ತೆರಿಗೆ ಇದ್ದಿತು. ಬಲಾತ್ಕಾರದ ದುಡಿಮೆಗೆ 'ಬಿಟ್ಟಿ' ಎಂಬ ಹೆಸರಿದ್ದಿತು.

ಚೋಳ ರಾಜರಿಗೆ ಸಹಾಯ ಮಾಡಲು ಹಾಕಿದ್ದ ತೆರಿಗೆಗೆ 'ಚೋಳ–ಕಾರುಣ್ಯವೆಂಬ ಹೆಸರಿದ್ದಿತು.

ನಾಡ ಹೆಗ್ಗಡೆಯು 'ಕಾಣಿಕೆ' ಎಂಬುದನ್ನು ವಸೂಲು ಮಾಡುತ್ತಿದ್ದನು.

ಎತ್ತುಗಳ ಪೂರೈಕೆಗಾಗಿ 'ಎತ್ತಿನ ಉಪೋತ್ತರ' ಎಂಬ ತೆರಿಗೆ ಇದ್ದಿತು.

ಕಾನೂನು ಭಂಗ ಮಾಡಿದವರು ಕೊಡಬೇಕಾದ ಜುಲ್ಮಾನೆಗೆ 'ಅನ್ಯಾಯ' (ಅ + ನ್ಯಾಯ) ಎಂಬ ಹೆಸರಿದ್ದಿತು.

ಹಿಂದೆಂದೂ ಇಲ್ಲದ ವಿಶೇಷ ತೆರಿಗೆಯನ್ನು ಅರಸನು ವಿಧಿಸಿದಾಗ ಅದನ್ನು 'ಅಪೂರ್ವಾಯ' ಎನ್ನುತ್ತಿದ್ದರು.

ಪಟ್ಟಾಭಿಷೇಕ ಪುತ್ರೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ಯಾವುದಾದರೂ ರೀತಿಯ ಹಣದ ವಸೂಲಿಯಾಗುತ್ತಿದ್ದಿತು.

ಹೊಯ್ಸಳರ ಕಾಲದಲ್ಲಿ ವಸೂಲ್ಮಾಡುತ್ತಿದ್ದ ಇತರ ತೆರಿಗೆಗಳಲ್ಲಿ ಗಾಣದೆರೆ, ಬಣ್ಣಿಗೆ (ಬಣ್ಣ ಹಾಕುವವರ ಮೇಲಿನ ತೆರಿಗೆ), ಮನೆದೆರೆ, ಆಲೆದೆರೆ (ಕಬ್ಬಿನ ಮೇಲೆ), ಕುಂಬಾರದೆರೆ, ಅಂಬಿಗದೆರೆ, ಒಡ್ಡದೆರೆ (ಕೆರೆಯು ಆಗತಕ್ಕೆ ಸಂಬಂಧಿಸಿದುದು), ತೊತ್ತುದೆರೆ (ಉಪಪತ್ನಿಯ ಮೇಲಿನ ತೆರಿಗೆ) ಮುಂತಾದುವುಗಳು ಉಲ್ಲೇಖನಾರ್ಹವಾಗಿವೆ. ಇವುಗಳ ಪೈಕಿ ಕೆಲವನ್ನು ಅಬ್ಕಾರಿ ಇಲಾಖೆಯೂ ಮತ್ತೆ ಕೆಲವನ್ನು ಜಮೀನ್ದಾರರೂ ವಸೂಲು ಮಾಡುತ್ತಿದ್ದರೆಂದು ಹೇಳಲಾಗಿದೆ.

ಬಾಲವನ, ಪಂಚಕಾರುಕ, ಕೇಳ್ವಿ- ನಿಮಂದಿ, ಬಿಟ್ಟಿ-ಬಿಡಾರ ಮುಂತಾದುವುಗಳು ಬೇರೆ ರೀತಿಯ ಶುಲ್ಕ ಅಥವಾ ತೆರಿಗೆಗಳಾಗಿದ್ದವು.

ಸ್ಥಳೀಯ ಅಪರಾಧಿಗಳು ಅಲ್ಲಿನ ಅಧಿಕಾರಿಗಳಿಗೆ ಶಿಕ್ಷೆಯ ರೂಪವಾಗಿ 'ತಪ್ಪು', 'ತವುಡಿ', 'ದಂಡಾಯ' ಮುಂತಾದ ಸಣ್ಣಪುಟ್ಟ ತೆರಿಗೆ (ಕಿರುಕುಳ) ಗಳನ್ನು ಸಲ್ಲಿಸಬೇಕಾಗಿದ್ದಿತು. ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿದ್ದ ತಮಿಳು ಪ್ರದೇಶಗಳಲ್ಲಿ 'ಸೂರ್ಯ-ವರಿ ಎಂಬ ತೆರಿಗೆಯನ್ನು ವಸೂಲ್ಮಾಡುತ್ತಿದ್ದರು.

ಕ್ರಿ. ಶ. 1313 ರ ಹಿರಿಯೂರಿನ ಶಾಸನದಲ್ಲಿ ಮಹಾಮಂಡಲೇಶ್ವರ ವಿಂಝುದೇವ ರಾಣಿಯು ಮೂರನೆಯ ಬಲ್ಲಾಳನಿಗೆ ಹೊದಕೆಯೊಂದನ್ನು ಕಾಣಿಕೆಯಾಗಿ ಕಳುಹಿಸಿಕೊಟ್ಟನೆಂದೂ ಅದನ್ನು ತಲುಪಿಸಿದ 'ಕಲ್ಲ ಗೌಡಂಗೆ ಜೆಳ್ಳಕೆಜೂಯನ್ನು ಕೊಡಗಿಯಾಗಿ' ಬಲ್ಲಾಳನು ನೀಡಿದನೆಂದೂ ಪ್ರಸ್ತಾಪಿಸಲಾಗಿದೆ. 'ಹೊದಕೆ' ಎಂಬುದು ಜುಲ್ಮಾನೆ ಅಥವಾ ಕಾಣಿಕೆಯ ಅರ್ಥವನ್ನು ಕೊಡುವುದೆಂದೂ ಶಾಸನದಲ್ಲಿ ಬರುವ 'ಶಂವರಣಿ' ಎಂಬ ಶಬ್ದವು

ರೊಳ್ಗಂಡ ಶ್ರೀ ವೀರ ಸೋಮೇಶ್ವರ ದೇವಸ್ಯ ಎಂಬ ನಾಮಾಂಕಿತದ ಮೊಹರುಗಳಿದ್ದುದರಿಂದ ಅತಿ ಹೆಚ್ಚಿನ ಸ್ವಾತಂತ್ರ್ಯವನ್ನು ನಾಡುಗಳ ಅಧಿಪತಿಗಳಿಗೆ ಹೊಯ್ಸಳರು ಕೊಟ್ಟಿರಲಿಲ್ಲವೆಂದು ಹೇಳಬಹುದು.

ಅರಸನು ನೀಡುತ್ತಿದ್ದ ದತ್ತಿ (grant) ಮುಂತಾದುವುಗಳನ್ನು ಖಾಯಂಗೊಳಿಸಲು ಲೋಕೋಪಕಾರ ಕರಣನೆಂಬ ಅಧಿಕಾರಿಯಿದ್ದನು. ಆತನು ಅರಸ ಅಥವಾ ಸಾಮಂತರೊಂದಿಗೆ ಸಂಪರ್ಕವನ್ನು ಹೊಂದಿದ್ದನು. ರಾಯಭಾರಿ ರೀತಿಯ ಕರ್ತವ್ಯಗಳನ್ನು ನೆರವೇರಿಸಲು ತಂತ್ರಾಧಿಕಾರಿ ಅಥವಾ ತಂತ್ರಾಧಿಷ್ಠಾಯಕ ಎಂಬ ಅಧಿಕಾರಿ ಇದ್ದನು.

ಹೊಯ್ಸಳರ ಕಾಲದಲ್ಲಿನ ಅನೇಕ ಪಟ್ಟಣಗಳು ಮಾರುಕಟ್ಟೆಯ ಕೇಂದ್ರಗಳಾಗಿದ್ದುವು. ಅಲ್ಲಿನ ನಾಡುಗಳ ಉತ್ಪನ್ನವನ್ನು ಕೊಂಡು ವಿದೇಶೀ ಸರಕುಗಳನ್ನು ಅಲ್ಲಿ ಮಾರುತ್ತಿದ್ದರು. ವರ್ತಕ ಸಂಘಗಳಿದ್ದುವು. ಈಗಿನ ನಗರ ಸಭಾಧ್ಯಕ್ಷರೊಂದಿಗೆ ಹೋಲಿಸಬಹುದಾದ 'ಪಟ್ಟಣಸ್ವಾಮಿ' ಎಂಬ ಮುಖಂಡರು ಇದ್ದರು. ಮನೆಗಂದಾಯ, ಮಾರಾಟದ ತೆರಿಗೆ ಹಾಗೂ ಮಾರುಕಟ್ಟೆಗಳಿಗೆ ಸಂಬಂಧಿಸಿದ ನಿಯಮಾವಳಿಗಳು ಪಟ್ಟಣಗಳಲ್ಲಿ ಜಾರಿಯಲ್ಲಿದ್ದುವು.

ಹೊಯ್ಸಳರ ಕಾಲದ ತೆರಿಗೆ ಪದ್ಧತಿ

ಹೊಯ್ಸಳರ ಕಾಲದ ಭೂಕಂದಾಯ ಪದ್ಧತಿಯು ಜಟಿಲವಾಗಿದ್ದಿತು. ಅನೇಕ ಜಮೀನುಗಳಿಗೆ ಮೂಲಭೂತವಾದ ಕಂದಾಯವು ನಿಗದಿಯಾಗಿದ್ದಿತು. ಶಾಶ್ವತ ಕಂದಾಯ ಪದ್ಧತಿಗೆ ಒಳಗಾದ ತೆರಿಗೆಗೆ ಸಿದ್ಧಾಯ ಎಂಬ ಹೆಸರಿದ್ದಂತೆ ಕಾಣುವುದು. ಬೇರೆ ರೀತಿಯ ಅನೇಕ ತೆರಿಗೆಗಳೂ ವಿಧಿಸಲ್ಪಟ್ಟಿದ್ದುವು.

ಕ್ರಿ. ಶ. 1340 ರ ಚಿಕ್ಕ ನಾಯಕನಹಳ್ಳಿಯ ಸಮೀಪದ ಶಾಸನದಲ್ಲಿ ಖಾಣ, ಅಭ್ಯಾಗತ, ಕಟಕ ಸೇಸೆ, ವೀರ ಸೇಸೆ, ಆನೆಯ ಸೇಸೆ, ಬಾಸಿಗರ್ದೆರೆ (ಮದುವೆಗೆ ಸಂಬಂಧಿಸಿದುದು). ಹೊಗೆರ್ದೆರೆ, ಮಗ್ಗದೆರೆ ಮುಂತಾದ ತೆರಿಗೆಗಳನ್ನು ಉಲ್ಲೇಖಿಸಿರುವುದಲ್ಲದೆ ಮಹಾಜನಗಳು ರಾಮಕೃಷ್ಣ ಪ್ರಭು

ಸೇನೆಯ ಜಮಾವಣೆ (ಸಂಗ್ರಹಣೆ) ಗೆ ಸಂಬಂಧಿಸಿರಬಹುದೆಂದೂ ಕೆ. ಎ. ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯವಾಗಿದೆ. (E. C. XVI).

ಮೇಲ್ಕಂಡ ಪ್ರಕರಣವನ್ನು ಹಿರಿಯೂರು ಶಾಸನ (Hr. 87) ವಲ್ಲದೆ ಚಿಕ್ಕನಾಯಕನ ಹಳ್ಳಿಯ ಶಾಸನ (Ck. 68) ವೂ ಪ್ರಸ್ತಾಪಿಸಿದೆ.

ಹೊಯ್ಸಳರ ಕಾಲದಲ್ಲಿದ್ದ ತೆರಿಗೆಗಳೆಲ್ಲವೂ ಎಲ್ಲಾ ಅರಸರ ಕಾಲ ದಲ್ಲಿಯೂ ಒಂದೇ ರೀತಿಯಲ್ಲಿ ಇರಲಿಲ್ಲವೆಂಬುದು ಸಮಂಜಸವಾದುದು. ಅನೇಕ ತೆರಿಗೆಗಳ ದರವನ್ನು ಸ್ಪಷ್ಟವಾಗಿ ತಿಳಿಸಲು ಆಧಾರಗಳಿಲ್ಲ.

೫. ಹೊಯ್ಸಳರ ಕಾಲದ ಧಾರ್ಮಿಕ ಪರಿಸ್ಥಿತಿ

ಹೊಯ್ಸಳ ಸಾಮ್ರಾಜ್ಯದಲ್ಲಿ ಜೈನ, ಬೌದ್ಧ, ಶೈವ ಮತ್ತು ವೈಷ್ಣವ ಮತಧರ್ಮಗಳು ಅಸ್ತಿತ್ವದಲ್ಲಿದ್ದುವು. ಈ ಎಲ್ಲಾ ಧರ್ಮಗಳಿಗೂ ಆಳರಸರು ಪ್ರೋತ್ಸಾಹ ಕೊಡುತ್ತಿದ್ದುದರಿಂದ ಹೊಯ್ಸಳ ರಾಜರಿಗೂ ಅವರ ಸಾಮಂತರಿಗೂ 'ಚತುಸ್ ಸಮಯ ಸಮುದ್ಧರಣ' ಎಂಬ ಬಿರುದಿದ್ದಿತು. ಅರಸನ ವೈಯಕ್ತಿಕ ಒಲವು ಯಾವುದೋ ಒಂದು ಪಂಥದ ಕಡೆಗೆ ತಿರುಗಿದ್ದರೂ ಅನ್ಯಮತದ ಬಗ್ಗೆ ಅವನು ಅಸಹನೆ ತೋರಿಸಿದ ನಿದರ್ಶನಗಳಿಲ್ಲ. ವೈಷ್ಣವಧರ್ಮದ ಅನುಯಾಯಿಯಾಗಿದ್ದ ವಿಷ್ಣುವರ್ಧನನು ಬಂಕಾಪುರದಲ್ಲಿನ ಶಿವದೇವಾಲಯಕ್ಕೆ ಪುರಸ್ಕಾರ ನೀಡಿದುದೂ ಜೈನ ಗುರುವಾಗಿದ್ದ ಶ್ರೀಪಾಲ ತ್ರೈವಿದ್ಯಾದೇವನಿಗೆ ಭಕ್ತಿ ಗೌರವಗಳನ್ನು ಸಲ್ಲಿಸಿದುದಲ್ಲದೆ ಜೈನ ಬಸದಿಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ದತ್ತಿಗಳನ್ನು ಕೊಟ್ಟದುದೂ ಶಾಸನಗಳಿಂದ ವ್ಯಕ್ತವಾಗಿದೆ.

ವಿಷ್ಣುವರ್ಧನನೂ ಅವನ ತಾಯಿ ಮತ್ತು ಅಣ್ಣನೂ ಸೇರಿ ಶಿವಯೋಗಿ ಧರ್ಮಪುರಿ ಭಟ್ಟರಿಗೆ ದಾನ ಮಾಡಿದುದನ್ನು ಶ್ರೀರಂಗಪಟ್ಟಣದ ಶಾಸನವೊಂದು ತಿಳಿಸಿದೆ. (Sr. 49, (Revised E. C. XIV).

ವಿಷ್ಣುವರ್ಧನನು ತುಲಾ–ಪುರುಷವೆಂಬ ಧಾರ್ಮಿಕ ವಿಧಿಯನ್ನಾಚರಿಸಿದುದನ್ನು ಅರಸೀಕೆರೆಯ ಶಾಸನವೊಂದರಿಂದ ತಿಳಿಯಬಹುದು. (Ak. 144, E. C. V) ವಿಷ್ಣುವರ್ಧನನು ಹಿರಣ್ಯಗರ್ಭ ಎಂಬ ಧಾರ್ಮಿಕ ಕ್ರಿಯೆಯನ್ನೂ ಅಶ್ವಮೇಧಯಾಗವನ್ನೂ ಆಚರಿಸಿದುದನ್ನು ವಿಲಿಯಂ ಕೋಯೆಲ್‌ಹೋ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಹೊಯ್ಸಳರಾಜರ ಧಾರ್ಮಿಕ ಸಹನೆಯನ್ನು ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿನ ಈ ಕೆಳಗಿನ ಶ್ಲೋಕವು ಚೆನ್ನಾಗಿ ಪ್ರತಿಬಿಂಬಿಸುವುದು.

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹ ಶ್ಶ್ವೇತಿ ಹ ಜೈನ ಶಾಸನ ಮತಾಃ ಕರ್ಮೇತಿ ಮಿಮಾಂಸಕಾಃ
ಸೋಯಂ ವೋ ವಿದಧಾತು ವಾಂಛಿತ ಫಲಂ ಶ್ರೀ ಕೇಶವಃ
ಸರ್ವದಾ ||

ಹೊಯ್ಸಳರ ಕಾಲದಲ್ಲಿ ಶಿವ ಮತ್ತು ವಿಷ್ಣುವಿನ ನಡುವೆ ಇರುವ ಭೇದ ವನ್ನು ತೊಡೆದು ಹಾಕಲು ಪ್ರಯತ್ನಿಸಿದ ದೃಷ್ಟಾಂತಗಳಿವೆ.

ಶ್ರೀಮತ್ತ್ರೈಲೋಕ್ಯ ಪೂಜ್ಯಾಯ ಸರ್ವಕರ್ಮಸು ಸಾಕ್ಷಿಣೇ ಫಲ ದಾಯ ನಮೋ ನಿತ್ಯಂ ಕೇಶವಾಯ ಶಿವಾಯಚ—

ಈ ರೀತಿಯ ಶ್ಲೋಕಗಳು ಹೊಯ್ಸಳರ ಶಾಸನಗಳಲ್ಲಿ ಕಾಣಿಸಿ ಕೊಂಡಿವೆ.

ಕ್ರಿ. ಶ. 1224 ರ ದಾವಣಗೆರೆ ಶಾಸನವು ಹರಿಹರದಲ್ಲಿರುವ ಹರಿಹರೇ ಶ್ವರ ದೇವಾಲಯದ ನಿರ್ಮಾಣದ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪಿಸಿ, ಹರಿ, ಹರರಲ್ಲಿರುವ ವ್ಯತ್ಯಾಸವನ್ನು ಹೋಗಲಾಡಿಸಲೋಸುಗ ದೇವರುಗಳು ಒಂದೇ ಆಕಾರವನ್ನು ತಾಳಿದುದಾಗಿ ವರ್ಣಿಸಿದೆ. (Dg. 25, E. C. XI). ಎರಡನೆಯ ನರಸಿಂಹನ ಮಹಾಪ್ರಧಾನನಾಗಿದ್ದ ಪೋಳಾಳ್ವ ದೇವನು ಹರಿಹರ ದೇವಾಲಯವನ್ನು ಕಟ್ಟಿಸಿ, ಅದನ್ನು ನೂರಹದಿನೈದು ಚಿನ್ನದ ಕಳಸಗಳಿಂದ ಅಲಂಕರಿಸಿದನೆಂದು ಹೇಳಲಾಗಿದೆ. ಅವನು ಬನವಳ್ಳಿ ಎಂಬಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ನಿರ್ಮಿಸಿದನು.

ಹನ್ನೆರಡನೆಯ ಶತಮಾನದ ಹೊಯ್ಸಳ ದೇವಾಲಯಗಳಲ್ಲಿ ಬುದ್ಧನ ವಿಗ್ರಹಗಳು ದೊರಕುತ್ತವೆ ಎಂಬುದಾಗಿ ಮೈಸೂರಿನ ಪ್ರಾಚೀನ ವಸ್ತು ಶೋಧನಾ ಇಲಾಖೆಯ ವರದಿ (Mysore Archaeological Report of 1933–page 78) ಯಿಂದ ತಿಳಿದು ಬರುವುದು. ಹನ್ನೆರಡನೆಯ ಶತಮಾನದಲ್ಲಿ ಲಿಂಗಾಯತ ಅಥವಾ ವೀರಶೈವ ಧರ್ಮವು ಹೊಯ್ಸಳ ರಾಜ್ಯವನ್ನೂ ಪ್ರವೇಶಿಸಿತು. ಅದರ ಬಗ್ಗೆ ಯಾವ ವಿರೋಧವೂ

ವ

ಹೊಯ್ಸಳರ ಕಾಲದಲ್ಲಿ ದೇವಾಲಯಗಳನ್ನೂ ಬಸದಿಗಳನ್ನೂ ಕಟ್ಟಿಸು ವುದರಲ್ಲೂ ದೇವರು ಹಾಗೂ ಬ್ರಾಹಣರುಗಳಿಗಾಗಿ ದಾನ, ಧರ್ಮಗಳನ್ನು ಮಾಡುವುದರಲ್ಲೂ ಅರಸನಿಂದ ಹಿಡಿದು ದರ್ಜೆಯ ವರೆಗೂ ಜನರು ಒಬ್ಬರ ನ್ನೊಬ್ಬರು ಮೀರಿಸಿದಂತೆ ಶಾಸನಗಳಿಂದ ಭಾಸವಾಗುವುದು.

ವಿನಯಾದಿತ್ಯನ ಮಹಾಸಂಧಿವಿಗ್ರಹಿ ದಂಡನಾಯಕ ಪೂಚಿಮಯ್ಯನ ಅರು ಯೋಧರುಗಳಿಂದ ಶಿವದೇವಾಲಯಗಳು ನಿರ್ಮಾಣವಾದುವು. (Ak. 194, E. C. XV). ಎರಡನೆಯ ವಿನಯಾದಿತ್ಯನು ದೇವಾಲಯ ಗಳನ್ನೂ ಜಿನಾಲಯಗಳನ್ನೂ ಕೆರೆಗಳನ್ನೂ ನಿರ್ಮಿಸಿ ಪ್ರಜೆಗಳನ್ನು ಸಂತೋಷ ಪಡಿಸಿದನೆಂದು ಶ್ರವಣಬೆಳ್ಗೊಳದ ಶಾಸನವೊಂದರಿಂದ ತಿಳಿಯಬಹುದು.

ಎರೆಯಂಗನ ಕಾಲದಲ್ಲೂ ದೇವಾಲಯಗಳೂ ಜೈನ ಬಸದಿಗಳೂ ಕಟ್ಟಿಸಲ್ಪಟ್ಟವು.

ಹಿರಿಯ ಬಲ್ಲಾಳ ದೇವರಸನು ತಲಕಾಡಿನಲ್ಲಿ ಕಟ್ಟಿಸಿದ್ದ ಶಿವದೇವಾ ಲಯವೊಂದಕ್ಕೆ ವೀರಬಲ್ಲಾಳನು ಮತ್ತೆ ದತ್ತಿಗಳನ್ನು ಅನುಗ್ರಹಿಸಿದುದನ್ನು ಕ್ರಿ. ಶ. 1184 ರ ಮಳವಳ್ಳಿ ಶಾಸನವು ಪ್ರಸ್ತಾಪಿಸುತ್ತದೆ. (Mi. 83, E. C. III).

ಒಂದನೆಯ ಬಲ್ಲಾಳನ ರಾಣಿಯ ತುಪ್ಪದ ಬಾಗಲ (ಬಾಗಿಲು) ಸೇವಕರು ಶ್ರೀಬಲ್ಲೇಶ್ವರ ದೇವರ ನಿವೇದ್ಯಕ್ಕೆ ನಿಧಿಯನ್ನು ಠೇವಣಿಯನ್ನಾಗಿ ಅರ್ಪಿಸಿದ್ದರು. (Sk. 87 E. C. VII).

ವಿಷ್ಣುವರ್ಧನನ ಕಾಲದಲ್ಲಿ ಕಟ್ಟಿಸಿದ ದೇವಾಲಯಗಳಂತೂ ಜಗತ್ ಪ್ರಸಿದ್ಧವಾಗಿವೆ. ಅವನ ದಳಪತಿಯಾದ ಗಂಗರಾಜನು ಗಂಗವಾಡಿಯಲ್ಲಿದ್ದ ಜೈನ ದೇವಾಲಯಗಳನ್ನೆಲ್ಲಾ ಜೀರ್ಣೋದ್ಧಾರಮಾಡಿದನು.

ವಿಷ್ಣುವರ್ಧನನ ರಾಣಿಯಾದ ಶಾಂತಲೆಯೂ ಶ್ರವಣಬೆಳ್ಗೊಳದಲ್ಲಿ ಸವತಿ ಗಂಧವಾರಣೆ ಬಸದಿಯನ್ನೂ ಬೇಲೂರಿನಲ್ಲಿ ಕಪ್ಪೆಚೆನ್ನಿಗರಾಯನ ದೇವಾಲಯವನ್ನೂ ಕಟ್ಟಿಸಿದಳು. ವಿಷ್ಣುವರ್ಧನನ ಮತ್ತೋರ್ವರಾಣಿ ಯಾದ ಬೊಮ್ಮಲೆಯೂ ನಾಗಮಂಗಲದಲ್ಲಿ ಶಂಕರನಾರಾಯಣ ದೇವಸ್ಥಾನ ವನ್ನು ಕಟ್ಟಿಸಿದಳು.

ದೋರಸಮುದ್ರದ ಸಿಂಪಿಗರು (ದರ್ಜಿಯವರು) ಅರಮನೆಯಲ್ಲಿದ್ದ ಕುಸುಮೇಶ್ವರ ದೇವರಿಗಾಗಿ ವಂತಿಗೆ ಕೊಟ್ಟುದುದನ್ನು ಬೇಲೂರಿನ ಶಾಸನವೊಂದರಿಂದ ಗೊತ್ತಾಗುವುದು.

ಒಂದನೆಯ ನರಸಿಂಹನು ದ್ವಾರಸಮುದ್ರದ ಹೊಯ್ಸಳೇಶ್ವರ ದೇವಾಲಯ ಮುಂತಾದುವುಗಳನ್ನು ಕಟ್ಟಿಸಿದನು. ಅವನ ಸಮರ್ಥ ದಳಪತಿಯಾಗಿದ್ದ ಹುಳ್ಳನು ಚತುರ್ವಿಂಶತಿ ತೀರ್ಥಂಕರ ಬಸದಿಯನ್ನು ಕಟ್ಟಿಸಿದನು. ಅವನು ಬಂಕಾಪುರದ ಜೈನ ದೇವಾಲಯವೊಂದನ್ನು ದುರಸ್ತಿ ಮಾಡಿಸಿದುದಲ್ಲದೆ ಕೊಪಣದಲ್ಲಿದ್ದ ಜೈನಯತಿಗಳ ಕಾಣಿಕೆಗಾಗಿ ಜಮೀನುಗಳನ್ನು ದಾನ ಮಾಡಿದನು. (E. C. II)

ಒಂದನೆಯ ನರಸಿಂಹನ ಅಂಗರಕ್ಷಕನಾಗಿದ್ದ ಮುದ್ದೆಯ ನಾಯಕನು ಮುದ್ದೇಶ್ವರ ದೇವಾಲಯವನ್ನು ಕಟ್ಟಿಸಿ ಭೂದಾನ ಮಾಡಿದುದನ್ನೂ ಸುರಿಗೆಯ ವಿಜಯಾದಿತ್ಯ ಹೆಗ್ಗಡೆಯು ಗೊರವೂರು ಎಂಬಲ್ಲಿ ತ್ರಿಕೂಟ ಲಿಂಗವನ್ನು ಸ್ಥಾಪಿಸಿದುದನ್ನು ದೋರಸಮುದ್ರದ ತಂಬುಲದ ಸಾಸಿರ್ವರು (ವಿಳ್ಯೇದೆಲೆ ವ್ಯಾಪಾರಿಗಳು) ವಿಜಯ ಪಾರ್ಶ್ವನಾಥದೇವ ಬಸದಿಗೆ ಸಲ್ಲಿಸಿದ ಕೊಡುಗೆಗಳನ್ನೂ ಕ್ರಮವಾಗಿ ಅರಸೀಕೆರೆ, ಹಾಸನ ಮತ್ತು ಬೇಲೂರಿನ ಶಾಸನಗಳು ಹೊರಗೆಡಹಿವೆ. (E. C. XV).

ಎರಡನೆಯ ಬಲ್ಲಾಳನ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳಿಗೂ ಬಸದಿಗಳಿಗೂ ಲೆಕ್ಕವೇ ಇಲ್ಲ. ಗೊಮ್ಮಟ, ಪಾರ್ಶ್ವನಾಥ ಮತ್ತು ಇಪ್ಪತ್ತನಾಲ್ಕು ತೀರ್ಥಂಕರರುಗಳಿಗಾಗಿ ತನ್ನ ತಂದೆಯು ಮೂರು ಹಳ್ಳಿಗಳನ್ನು ದಾನಮಾಡಿದ್ದುದನ್ನು ಬಲ್ಲಾಳನು ಖಾಯಂಗೊಳಿಸಿದ ಸಂಗತಿಯು ಶ್ರವಣಬೆಳ್ಗೊಳದ ಶಾಸನದಿಂದ ಗೊತ್ತಾಗುವುದು (No. 240, E. C. II). ಅವನು ತುಂಗಾಭದ್ರಾನದಿಯ ಪಶ್ಚಿಮದಡದಲ್ಲಿನ ಒಂದು ಸ್ಥಳದಲ್ಲಿ ತನ್ನ ತಂದೆ ನರಸಿಂಹದೇವನ ಹೆಸರಿನಲ್ಲಿ ಲಿಂಗಪ್ರತಿಷ್ಠೆ ಮಾಡಿಸಿದನು. ಮಹದೇವ ಎಂಬ ಸಹವಾಸಿ ಬ್ರಾಹ್ಮಣನು ಗೌತಮೇಶ್ವರ ದೇವರನ್ನೂ ಆತನ ಸಹೋದರಿ ಮಾದಲದೇವಿಯೂ ಲಕ್ಷ್ಮೀ ನಾರಾಯಣನನ್ನೂ ಪ್ರತಿಷ್ಠಾಪಿಸಿದರು. ಅವೆರಡು ದೇವರುಗಳಿಗೂ ಬಲ್ಲಾಳನು ಜಮೀನುಗಳನ್ನು

ದಾನ ಮಾಡಿದನು. (Bl. 241, E. C. XV). ಶಿವಶಕ್ತಿ ಮತ್ತು ಚಂದ್ರಭೂಷಣರೆಂಬ ಕಾಳಾಮುಖ ಪಂಥದ ಗುರುಗಳ ಹೆಸರು ಗಳನ್ನೂ ಅರಸಿಯಕೆರೆಗೆ ಸಂಬಂಧಿಸಿದ ಶೈವಸ್ಥಾನದ ಬಗ್ಗೆಯೂ ಆ ಶಾಸ ನವು ಪ್ರಸ್ತಾಪಿಸಿದೆ. 'ಲಾಕುಳಾಗಮ ಸಮಯ' ಪಂಥದ ಕೆಲವು ಮುನಿಗಳ ಹೆಸರುಗಳನ್ನು ಅರಸೀಕೆರೆ ಶಾಸನದಲ್ಲಿ ಕೊಡಲಾಗಿದೆ. (Ak. 62, E. C. V). ಬಲ್ಲಾಳನ ಮಹಾಪ್ರಧಾನ ದೇವಯ್ಯ ಮತ್ತಿತರು ಯಾದವನ ಹಳ್ಳಿಯ ಕಾಳಿದೇವರಿಗೆ ದತ್ತಿಯನ್ನು ಕೊಟ್ಟದು ದನ್ನೂ ಆ ಹಳ್ಳಿಯ 'ಪ್ರಜೆಗಳ್' ದೇವರಿಗಾಗಿ 'ದೇವ-ಗೊಳಗ' ಮತ್ತು 'ಧರ್ಮ-ಗೊಳಗ' ಗಳನ್ನು ದಾನ ಮಾಡಿದುದನ್ನೂ ಅರಸೀಕೆರೆಯ ಮತ್ತೊಂದು ಶಾಸನದಿಂದ ತಿಳಿದುಕೊಳ್ಳಬಹುದು. ಅದೇ ಶಾಸನದಲ್ಲಿ ಸೂತಕದಲ್ಲಿದ್ದವರಾರೂ ಕೆರೆಯಲ್ಲಿ ಸ್ನಾನ ಮಾಡಕೂಡದೆಂದು ನಿಷೇಧಿಸ ಲಾಗಿದೆ. (Ak. 220, E. C. XV).

ಎರಡನೆಯ ಬಲ್ಲಾಳನ ಕಾಲದ ಹಿರಿಯ ದಂಡನಾಯಕ ಲಕುಮ- ಯ್ಯನು ಸರಗೂರಿನ ಅಮೃತೇಶ್ವರ ದೇವಾಲಯದಲ್ಲಿ ನಂದಾದೀವಿಗೆಯನ್ನು ಉರಿಸಲು ದಾನ ಮಾಡಿದನು. (E. C. XIV). ಅದೇ ಕಾಲದ ನಾಚ್ಚಿ ಯಾಳ್ವರ್ ಎಂಬ ನರ್ತಕಿ ತಲಕಾಡಿನ ಕೀರ್ತಿ ನಾರಾಯಣ ದೇವಾಲಯಕ್ಕೆ ದೊಡ್ಡ ಲೋಹದ ಕಂಬವನ್ನೂ ಅಖಂಡ ದೀಪದ ವೆಚ್ಚಕ್ಕಾಗಿ ಕೊಂಚ ಹಣವನ್ನೂ ನೀಡಿದಳು. (Tn, 189 E. C. XIV).

ರೇಚರಸ ಎಂಬ ಕಳಾಚೂರ್ಯ ಕುಲದ ಮಂತ್ರಿಯೋರ್ವನು ಬಲ್ಲಾ ಳನ ಆಶ್ರಯವನ್ನು ಪಡೆದು ಅರಸೀಕೆರೆಯ ಸಾವಿರ ಜೈನ ಕುಟುಂಬಗಳಿಗಾಗಿ 'ಸಹಸ್ರಕೂಟ ಚೈತ್ಯಾಲಯ' ವನ್ನು ಸ್ಥಾಪಿಸಿ, ಅರಸನ ಅನುಮತಿಯಿಂದ ಅದಕ್ಕೆ ಪುದಿವಟ್ಟನ್ನು ಕೊಟ್ಟನು. (Ak. 77, E. C. V).

ವೀರನರಸಿಂಹನ ಒಬ್ಬ ದಣ್ಣಾಯಕನು ಕಾಂಚಿಯ ದೇವಾಲಯ ವೊಂದಕ್ಕೆ ಭೂದಾನ ಮಾಡಿದನು.

ಸೋಮೇಶ್ವರನು ಹಿರಣ್ಯ-ಗರ್ಭ, ತುಲಾಪುರುಷ ಮತ್ತಿತರ ದಾನ ಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಿದನೆಂದು ಅರಸೀಕೆರೆಯ ಶಾಸನವೊಂದ ರಿಂದ ಗೊತ್ತಾಗುವುದು. (Ak. 108, E. C. V).

ಮೂರನೆಯ ನರಸಿಂಹನ ಮಂತ್ರಿಯಾದ ಚಿಕ್ಕಕೇತಯ್ಯನು ನರಸಿಂಗ ಚತುರ್ವೇದಿ ಮಂಗಲ ಅಥವಾ ಮದ್ದೂರಿನ ದೇವಾಲಯಕ್ಕೆ ದಾನಗಳನ್ನು ಮಾಡಿದನು. (Md. 1, E. C. III).

ಅರಸನ ಮಂತ್ರಿಯೂ ದಳಪತಿಯೂ ಆಗಿದ್ದ ಸೋಮನು, ಸೋಮನಾಥಪುರ ಅಗ್ರಹಾರದಲ್ಲಿ ಭವ್ಯವಾದ ದೇವಾಲಯವನ್ನು ಕಟ್ಟಿಸಿದನು. (Dg. 36, E. C. XI). ವೀರನರಸಿಂಹನ ಮಹಾಮಂತ್ರಿಯಾಗಿದ್ದ ಪೆರುಮಾಳೆಯು ಕೆರೆಯೊಂದನ್ನು ಅದಕ್ಕೆ ಸೇರಿದ ಜಮೀನಿನ ಸಹಿತ ಕೊಂಡುಕೊಂಡು ಅದನ್ನು ಇಪ್ಪತ್ತನಾಲ್ಕು ಭಾಗಗಳನ್ನಾಗಿ ಮಾಡಿ ಅವುಗಳನ್ನು ಬ್ರಾಹ್ಮಣರಿಗೆ ಹಂಚಿದನಂತೆ. (Cd. 12, E. C. XI). ಅವನ ತಾಯಿಯಾದ ಮಾಂಚಾಲೆ ಅಥವಾ ಮಾಂಚಿಯಕ್ಕ ಎಂಬಾಕೆಯು ನರಸಿಂಹದೇವರಿಗಾಗಿ ತುಳಸಿ ವೃಂದಾವನಗಳನ್ನು ನಿರ್ಮಿಸಿದಳು.

ಕ್ರಿ. ಶ. 1273 ರ ಬೇಲೂರಿನ ಶಾಸನವೊಂದು ಹೊರಗಿನಿಂದ ಬೇಲೂರಿಗೆ ಬರುವ ಬ್ರಾಹ್ಮಣರ ಭೋಜನಕ್ಕಾಗಿ ಪಟ್ಟಣಸ್ವಾಮಿ ಶಂಕರನು ನಗದು ಹಣವನ್ನು ದಾನವಾಗಿ ಇತ್ತುದುದನ್ನು ತಿಳಿಸಿದೆ. (E. C. XV).

ಕ್ರಿ. ಶ. 1285 ರ ತಿಪಟೂರು ಶಾಸನವು ದಾನಿಯೊಬ್ಬನನ್ನು ಹೊಸ ಸಮಯ ಲಾಕುಳನೆಂದು ಬಣ್ಣಿಸಿರುವುದರಿಂದ ಆ ಪಂಥದಲ್ಲಿ ನವೀನ ಅಂಶಗಳನ್ನು ಅಳವಡಿಸಿದ್ದಿರಬಹುದೆಂದು ಬಿ. ಎಲ್. ರೈಸ್ ಬರೆದಿದ್ದಾರೆ. (E. C. XII).

ಮೂರನೆಯ ನರಸಿಂಹನ ಕಾಲದ ಬೇಲೂರಿನ ಶಾಸನವೊಂದು ಅರಸನು ಹೆಬ್ಬಾಳೆ ಎಂಬ ಹಳ್ಳಿಯ ಕಂದಾಯವನ್ನೆಲ್ಲಾ ಕಾಶಿಯಲ್ಲಿ ವಾಸಿಸುವ ಯಾತ್ರಿಕರು ತುರುಷ್ಕರಿಂದ ವಿಧಿಸಲ್ಪಟ್ಟ ತೆರಿಗೆಯನ್ನು ಪಾವತಿ ಮಾಡುವುದಕ್ಕಾಗಿ ಕೊಡುಗೆಯನ್ನಾಗಿ ಕೊಟ್ಟನೆಂದು ತಿಳಿಸಿದೆ. (Bl. 298 E. C. XV).

ರಾಮನಾಥನ ಮಂತ್ರಿಯಾಗಿದ್ದ ಕಂಬಯ ದಣ್ಣಾಯಕನು ಮಯಿಂದವೊಳಲ ಕೆರೆಯನ್ನು ದುರಸ್ತಿ ಮಾಡಿಸಿದುದಲ್ಲದೆ ಗಂಧವರಣಪುರ ಅಗ್ರಹಾರ ಅಥವಾ ಹೊನ್ನುಡಿಕೆಯ ಚೊಕ್ಕ ಪೆರುಮಾಳ್ ದೇವರಿಗೆ ದತ್ತಿಯನ್ನು

ಕೊಟ್ಟನೆಂದು ತುಮಕೂರಿನ ಶಾಸನವೊಂದು ತಿಳಿಸುತ್ತದೆ. (Tm. 17, E. C. XII). ರಾಮನಾಥನು ಕೋಗಿಲಿಯ ಚೆನ್ನಪಾರ್ಶ್ವ ದೇವಾಲಯಕ್ಕೆ ಉದಾರವಾಗಿ ದಾನ ಮಾಡಿದನು. ರಾಮನಾಥನು ಶ್ರೀರಂಗದ ರಂಗನಾಥ ದೇವಾಲಯಕ್ಕೆ ಕೊಡಲೋಸುಗ ನಾಲ್ಕು ಆಭರಣಗಳನ್ನು ಖಾಸಗಿ ವ್ಯಕ್ತಿಯೋರ್ವನಿಗೆ ನೀಡಿದುದನ್ನು ತಮಿಳು ಶಾಸನವೊಂದು ಪ್ರಸ್ತಾಪಿಸಿದೆ.

ಮೂರನೆಯ ಬಲ್ಲಾಳನ ಕಾಲದ ಶಾಸನಗಳೂ ಸಹ ಧಾರ್ಮಿಕ ಪರಿಸ್ಥಿತಿಯ ಬಗ್ಗೆ ಅನೇಕ ಸ್ವಾರಸ್ಯ ಸಂಗತಿಗಳನ್ನು ಒಳಗೊಂಡಿವೆ.

ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಪ್ರಸಾದ ವಿನಿಯೋಗದ ಬಗ್ಗೆ ವೀರ ಬಲ್ಲಾಳದೇವರಸನು ಸುಗ್ರೀವಾಜ್ಞೆ ಮಾಡಿ, ಮೂರು ಮಂದಿ ಪ್ರಧಾನ ಅರ್ಚಕರಿಗೆ ಅಗ್ರಸ್ಥಾನವೂ ಪ್ರಸಾದ ವಿನಿಯೋಗದಲ್ಲಿ ಆದ್ಯತೆಯೂ ಸಲ್ಲಬೇಕೆಂದು ಕಟ್ಟು ಮಾಡಿದನಂತೆ (Tn. 4, E. C. III).

ಪೆರುಮಾಳೆ ದೇವನ ಪುತ್ರರಲ್ಲೊಬ್ಬನಾದ ಮಾಧವ ದಣ್ಣಾಯಕನು ತಾನು ರಾಜನಿಂದ ಪಡೆದಿದ್ದ ಗ್ರಾಮಗಳನ್ನು ತೆರಕಣಾಂಬಿಯ ದೇವಾಲಯಗಳಿಗೆ ದತ್ತಿಯಾಗಿ ಬಿಟ್ಟುಕೊಟ್ಟನು. (E. C. IV).

ತಂಗಲಿಯ ಆದಾಮುದ್ದು ಎಂಬಾತನು ಬೇಲೂರಿನ ದೇವಾಲಯದಲ್ಲಿ ಬಾಳೆಹಣ್ಣಿನ ವಿನಿಯೋಗಕ್ಕಾಗಿಯೇ ದತ್ತಿಯನ್ನು ಬಿಟ್ಟನು. (Bl. 24, E. C. XV). ಚಿಕ್ಕನಾಯಕನ ಹಳ್ಳಿಯ ಶಾಸನವೊಂದರಲ್ಲಿ ಮಹಾಸಾಮಂತ ಮಾಡಯ್ಯನು 'ಲಾಕುಳಾಗಮ ಸಮಯ'ದ ಬೆಂಬಲಿಗನಾಗಿದ್ದ ಪದ್ಮರಸಿ ಪಂಡಿತನ ಪಾದಗಳನ್ನು ತೊಳೆಯುತ್ತಿದ್ದುದನ್ನು ತೋರಿಸಲಾಗಿದೆ. (Ck. 64, E. C. XVI).

ಹೊಯ್ಸಳರ ಕಾಲದಲ್ಲಿ ಇನ್ನೂ ಸ್ವಲ್ಪ ಪಾಪ ಭೀತಿ ಇತ್ತೆಂದು ಸೂಚಿಸುವುದಕ್ಕೋ ಎಂಬಂತೆ ಕ್ರಿ. ಶ. 1300 ರ ಒಂದು ವೀರಗಲ್ಲಿನಲ್ಲಿ 'ಪಾಪೋಹಂ ಪಾಪ ಕರ್ಮಾಹಂ' ಎಂಬ ಒಂದೇ ಒಂದು ಸಂಸ್ಕೃತ ಶ್ಲೋಕವನ್ನು ಕೆತ್ತಲಾಗಿದೆ. Bl. 358 E. C. XV).

೭. ಹೊಯ್ಸಳರ ಕಾಲದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

ಹೊಯ್ಸಳರ ಕಾಲದಲ್ಲಿ ಕುಟುಂಬವು ಸಮಾಜದ ಆಧಾರ ಸ್ತಂಭ ವಾಗಿದ್ದಿತು. ವರ್ಣಾಶ್ರಮ ಧರ್ಮವು ಕಟ್ಟುಸಿಟ್ಟಾಗಿ ಜಾರಿಗೆ ಬಂದಿದ್ದಂತೆ ತೋರುವುದು. ಹೊಳಲ್ಕೆರೆಯ ಶಾಸನವೊಂದರಲ್ಲಿ ವೀರ ಬಣಂಜುಸೆಟ್ಟಿ-ಗುಟ್ಟರೂ ಪಟ್ಟಣಸ್ವಾಮಿಯೂ, ದೇವಾಲಯದ ಪೂಜಾರಿಗಳೂ ಮತ್ತು ಹದಿನೆಂಟು ಜಾತಿಯವರೆಲ್ಲರೂ ಸೇರಿ ಮಾರಗೌಡ ಎಂಬುವನನ್ನು ಹೊನ್ನೆಯ ಕೆರೆಯ ನಾಡಹೆಗ್ಗಡೆಯನ್ನಾಗಿ ನೇಮಿಸಿದ ಪ್ರಸ್ತಾಪ ಬಂದಿದೆ. (Ak. 137, E. C. XI). ಆದ್ದರಿಂದ ಸಮಾಜದಲ್ಲಿ ಅನೇಕ ಜಾತಿಗಳೂ ಉಪ ಪಂಗಡಗಳೂ ಇದ್ದವೆಂದು ಊಹಿಸಬಹುದು. ಮಧ್ಯಮ ವರ್ಗಕ್ಕೆ ಸೇರಿದ್ದ 'ಸೆಟ್ಟಿ' ಗಳು ಜನಜೀವನದಲ್ಲಿ ಗಣನೀಯ ಪಾತ್ರವಹಿಸಿದ್ದರು. ಅಕ್ಕಸಾಲಿ ಕರು, ಬಡಗಿಗಳು, ಜವಾಹಿರಿ-ವ್ಯಾಪಾರಿಗಳು, ಗಾರೆ ಕೆಲಸದವರು, ಹಿತ್ತಾಳೆ, ಕಂಚು ಪಾತ್ರೆಗಳ ತಯಾರಕರೂ ಸೇರಿ 'ವೀರಪಾಂಚಾಲ'ರೆನಿ ಸಿದ್ದರು. ಇವರಿಗೂ ಸಮಾಜದಲ್ಲಿ ಪ್ರಾಮುಖ್ಯತೆಯಿದ್ದಿತು. ಪತಿ, ಪತ್ನಿ ಯರು ಬೇರೆ ಬೇರೆ ಜಾತಿಗೆ ಸೇರಿದ್ದ ಒಂದು ನಿದರ್ಶನವೆಂದರೆ ವೀರಬಲ್ಲಾ ಳನ ಮಂತ್ರಿಯಾಗಿದ್ದ ಚಂದ್ರಮೌಳಿಯದು. ಆತನು ಶೈವ ಸಂಪ್ರದಾಯದ ಬ್ರಾಹ್ಮಣನೆಂದೂ ಆತನ ಪತ್ನಿಯಾದ ಆಚಿಯಕ್ಕಳು ನಿಷ್ಠಾವಂತ ಜೈನ ಳೆಂದೂ ಹೇಳಲಾಗಿದೆ.

ಅರಸೀಕೆರೆಯ ಕೆಲವು ಶಾಸನಗಳಲ್ಲಿ ಆ ಊರಿನಲ್ಲಿ ಬ್ರಾಹ್ಮಣರು ಅಧಿಕ ಸಂಖ್ಯೆಯಲ್ಲಿದ್ದರೆಂದೂ ಅಸಂಖ್ಯಾತ ಮಂದಿ ಕಾಯಿಲಾಳ್‌ಗಳಿದ್ದರೆಂದೂ ಉಲ್ಲೇಖಿಸಲಾಗಿದೆ. ತೆಂಗಿನ ಮರವನ್ನು ಹತ್ತಿ ಕಾಯಿಗಳನ್ನು ಕಿತ್ತು

ಹಾಕುವ ವೃತ್ತಿಯಲ್ಲಿದ್ದವರೇ ಕಾಯಿಲಾಳ್‌ಗಳೆಂದು ಬಿ. ಎಲ್. ರೈಸ್ ಅಭಿಪ್ರಾಯಪಟ್ಟಿದ್ದಾರೆ.

ಬ್ರಾಹ್ಮಣರುಗಳಿಗಾಗಿ ರಾಜರು ಅಥವಾ ಶ್ರೀಮಂತರು ಅಗ್ರಹಾರಗಳನ್ನು ಕಟ್ಟಿಸಿ ದಾನ ಮಾಡುತ್ತಿದ್ದುದುಂಟು. ಅರಸರು ತುಲಾಪುರುಷ, ಹಿರಣ್ಯಗರ್ಭ ಮುಂತಾದ ಧಾರ್ಮಿಕ ಸಮಾರಂಭಗಳೆಂದು ಬ್ರಾಹ್ಮಣರಿಗೆ ದಾನ, ಧರ್ಮ, ಮಾಡಿ ಅವರನ್ನು ತೃಪ್ತಿಪಡಿಸುತ್ತಿದ್ದರು. 'ತುಲಾಪುರುಷ' ವೆಂದರೆ ವ್ಯಕ್ತಿಯ ತೂಕದಷ್ಟು ಸುವರ್ಣದಾನ ಮಾಡಬೇಕಾಗಿದ್ದಿತು. ಹಿರಣ್ಯಗರ್ಭವೆಂದರೆ, ಒಬ್ಬ ವ್ಯಕ್ತಿಯು ತೆವಳಿಕೊಂಡು ಹೋಗಬಹುದಾದಷ್ಟು ಗಾತ್ರದ ಸುವರ್ಣ ಗೋವನ್ನು ಮಾಡಿಸಿ, ಪೂಜೆ ಪುನಸ್ಕಾರಗಳ ನಂತರ ಅದನ್ನು ಭಗ್ನಮಾಡಿ, ಚಿನ್ನವನ್ನು ವಿಪ್ರಗೆ ಹಂಚುವುದು.

ಹೊಯ್ಸಳ ಅರಸರೂ ಶ್ರೀಮಂತರೂ ಬಹುಪತ್ನಿವಲ್ಲಭರಾಗಿದ್ದರು. ಒಂದನೆಯ ನರಸಿಂಹನಿಗೆ ಸತ್ಕುಲ ಪ್ರಸೂತರಾದ ಮುನ್ನೂರ ಎಂಭತ್ತು ನಾಲ್ಕು ಮಂದಿ ಪತ್ನಿಯರೋ ಉಪಪತ್ನಿಯರೋ ಇದ್ದರೆಂದು ಬೇಲೂರಿನ ಶಾಸನವೊಂದರಿಂದ ಗೊತ್ತಾಗುವುದು (Bl. 193, E. C. V).

ಹುಲಿಯೆರುವಿನ ಸಾಮಂತ ಬಿಟ್ಟಿಮಯ್ಯನ ಅಂತಃಪುರದಲ್ಲೂ ನಾನಾ ಬಗೆಯ ಸ್ತ್ರೀಯರು ಇದ್ದರೆಂದು ಹೇಳಲಾಗಿದೆ.

ಸಾಮಾನ್ಯವಾಗಿ ಸ್ತ್ರೀಯರು ಋತುಮತಿಯರಾದ ಮೇಲೆ ವಿವಾಹವಾಗುತ್ತಿದ್ದರೆಂದೂ ಕೆಲವೊಮ್ಮೆ ತಾವೇ ತಮ್ಮ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರೆಂದೂ ವಿಲಿಯಂ ಕೊಯೆಲ್‌ಹೋ ಅವರು ಬರೆದಿದ್ದಾರೆ. ನರ್ತಕಿಯರು ವೇಶ್ಯಾವೃತ್ತಿಯನ್ನು ಕೈಗೊಂಡಿದ್ದರೆಂದೂ ಅವರೊಂದಿಗೆ ಶಾರೀರಕ ಸಂಬಂಧವನ್ನಿಟ್ಟುಕೊಳ್ಳುವುದು ಅಗೌರವವೆಂದು ಪರಿಗಣಿಸಲ್ಪಟ್ಟಿರಲಿಲ್ಲವೆಂಪೂ ಅವರು ಭಾವಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅನೈತಿಕ ಸಂಪರ್ಕದಿಂದ ದಾಸಿ ಅಥವಾ ಗುಲಾಮಳ ಉದರದಲ್ಲಿ ಜನಿಸಿದ ಮಕ್ಕಳಿಗೂ ಶ್ರೀಮಂತರ ಆಸ್ತಿಯ ಹಕ್ಕುದಾರಿಕೆಗೆ ಅವಕಾಶವಿದ್ದಿತಂತೆ. (Bl: 219, E. C. V).

ಕೇವಲ ವ್ಯಭಿಚಾರವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಸ್ತ್ರೀಯು

ರಿಗೆ ಅಷ್ಟೇನೂ ಗೌರವವಿರಲಿಲ್ಲವೆಂದು ಹೇಳಬಹುದು. ಅಂತಹ ವಾರಾಂಗನೆಯರ ಮೇಲೆ ಸರ್ಕಾರವು ತೆರಿಗೆಯನ್ನು ವಿಧಿಸಿದ್ದಿತು. ಪರಸ್ತ್ರೀಯೊಂದಿಗಿನ ಲೈಂಗಿಕ ಸಂಪರ್ಕವು ಪಾಪಕರವೆಂದು ಅಂದಿನ ಜನರೂ ಪರಿಗಣಿಸಿದ್ದರು. ಆದರೆ ಯುದ್ಧದಲ್ಲಿ ಮಾತ್ರ ಶತ್ರುವಿನ ರಾಣಿಯರನ್ನು ವಶಪಡಿಸಿಕೊಂಡ ಪ್ರಕರಣಗಳು ಶಾಸನಗಳಲ್ಲಿವೆ.

ಒಟ್ಟಿನಲ್ಲಿ ಹೇಳುವುದಾದರೆ ಹೊಯ್ಸಳರ ಕಾಲದ ಮಹಿಳೆಯರಿಗೆ ಸಮಾಜದಲ್ಲಿ ಗೌರವವಿದ್ದಿತು. ಕೆಲವು ಹೆಂಗಸರು ಧಾರ್ಮಿಕ ವ್ಯವಹಾರಗಳಲ್ಲೂ ಹಸ್ತಕ್ಷೇಪ ಮಾಡುತ್ತಿದ್ದರು. ಕುಂಜನಂಬಿಸೆಟ್ಟಿಯ ಪುತ್ರಿ ಚಂದವ್ವೆಯು ಕುಂಜೇಶ್ವರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರವನ್ನು ವಹಿಸಿಕೊಂಡಿದ್ದಳೆಂದು ಶಿಕಾರಿಪುರದ ಶಾಸನವೊಂದರಿಂದ ಗೊತ್ತಾಗುವುದು. (Sk. 92, E. C, VII). ಸಂಗೀತ, ನೃತ್ಯ, ಸಾಹಿತ್ಯ ಮುಂತಾದ ರಂಗಗಳನ್ನು ಸ್ತ್ರೀಯರು ಪ್ರವೇಶಿಸಬಹುದಾಗಿದ್ದಿತೆಂಬ ಸಂಗತಿಯನ್ನು ಶಾಂತಲಾರಾಣಿ, ಕಂತಿ ಮುಂತಾದವರ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು. ಅಂದಿನ ವನಿತೆಯರೂ ಸೌಂದರ್ಯೋಪಾಸಕರಾಗಿದ್ದರು. ಸ್ತ್ರೀಯರು ನಾನಾಬಗೆಯ ಉಡುಗೆಗಳನ್ನು ಧರಿಸುತ್ತಿದ್ದರು. ಕೆಲವು ಬಗೆಯ ಉಡುಪುಗಳ ಮೇಲೆ ತೆರಿಗೆಗಳನ್ನು ವಿಧಿಸಲಾಗಿದ್ದಿತು. ಪುರುಷರು ಪಂಚೆಯನ್ನು ಬನಿಯನ್ ಮಾದರಿಯ ಅಂಗಿಯನ್ನೂ ರುಮಾಲನ್ನು ಧರಿಸುತ್ತಿದ್ದರು.

ಹೊಯ್ಸಳರ ಕಾಲದಲ್ಲಿ ಹಾಲು, ಅಕ್ಕಿ, ಜೋಳ, ಹಣ್ಣುಗಳು ಜನರ ಮುಖ್ಯ ಆಹಾರ ಪದಾರ್ಥಗಳಾಗಿದ್ದುವು. ಮಂಡಿಗೆ, ಶಾಲ್ಯಾನ್ನ, ಹೋಳಿಗೆ, ಉಂಡೆ, ಹುರಿಗೆ, ಲಡ್ಡು, ಸೀಕರಣೆ ಮುಂತಾದ ವಿಶೇಷ ಖಾದ್ಯಗಳೂ ಮಾವಿನಹಣ್ಣು, ಬಾಳೆಹಣ್ಣು, ಹಲಸಿನ ಹಣ್ಣುಗಳೂ ಜನರಿಗೆ ಪ್ರಿಯವಾಗಿದ್ದುವು. ಸುವಾಸನೆಯಿಂದ ಕೂಡಿದ ಸಣ್ಣಗಾತ್ರದ ಗಂಧಸಾಲಿ ಎಂಬ ಹೆಸರಿನ ಅಕ್ಕಿಯನ್ನು ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ. ಈರುಳ್ಳಿ, ಹಾಗೂ ಹಂದಿ, ಕರಡಿ, ಆನೆ. ಪಾರಿವಾಳ, ಕುದುರೆ, ನಾಯಿಗಳ ಮಾಂಸವು ನಿಷೇಧಾಹಾರಗಳಾಗಿದ್ದುವು. ವೈಷ್ಣವ ಧರ್ಮಕ್ಕೆ ಪುರಸ್ಕಾರ ದೊರೆತ ಮೇಲೆ ಯಜ್ಞಯಾಗಾದಿಗಳು ಪುನರುಜ್ಜೀವನಗೊಳಿಸಲ್ಪಟ್ಟು, ಯಾಗಗಳಲ್ಲಿ ಉಪ

ಯೋಗಿಸಲ್ಪಡುವ ಪ್ರಾಣಿಗಳು ಆಹಾರದಲ್ಲಿ ವರ್ಜ್ಯನೀಯವಾದವು. ಜೈನರಲ್ಲದೆ ರಾಜರು ಮಾಂಸಾಹಾರ ಪ್ರಿಯರಾಗಿ, ಅರಮನೆಗಳಲ್ಲಿ ಮಾಂಸಪಾಕ ವಿಶಾರದರನ್ನು ನೇಮಿಸುತ್ತಿದ್ದರು.

ಕುಸ್ತಿ, ದ್ಯೂತ, ಗಾಯನ, ವಾದ್ಯ ಸಂಗೀತ, ನೃತ್ಯ, ನಾಟಕಗಳು ಜನರ ಮನರಂಜನಾಸಾಧನಗಳಾಗಿದ್ದುವು. ಚಿಕ್ಕಮಗಳೂರಿನ ಶಾಸನವೊಂದರಲ್ಲಿ ಸಣ್ಣ ಬೆಣಚುಕಲ್ಲುಗಳಿಂದ ಆಡಬಹುದಾದ ಆಟಗಳನ್ನು— 'ಅಣ್ಣೆಕಲ್', 'ತಿಟ್ಟುಕಲ್— ಉಲ್ಲೇಖಿಸಲಾಗಿದೆ. (Cm. 22, E. C. VI). ಸೋಮರಾಜ ಎಂಬ ಕವಿಯು ತನ್ನ ಶೃಂಗಾರಸಾರ ಎಂಬ ಗ್ರಂಥದಲ್ಲಿ ಡೊಂಬರು ಕುಣಿತವನ್ನು ವರ್ಣಿಸಿದ್ದಾನೆ. 'ರಂಗಭೋಗ'ಕ್ಕಾಗಿ ದತ್ತಿಗಳನ್ನು ಬಿಟ್ಟುಕೊಟ್ಟಿದ್ದ ನಿದರ್ಶನಗಳು ಶಾಸನಗಳಲ್ಲಿವೆ. ದೇವಾಲಯದ ನೌಕರರಲ್ಲಿ ರಂಗಭೂಮಿಯ ವ್ಯವಸ್ಥಾಪಕನೂ ಸೇರಿದ್ದನು.

ಹಗಲಿನಲ್ಲಿ ವೇಳೆಯನ್ನು ತಿಳಿದುಕೊಳ್ಳಲು ಸಹಾಯ ಮಾಡುವ ನೀರು ತೊಟ್ಟಿಕ್ಕುವ ಮಡಕೆಯೊಂದನ್ನು ದೇವಾಲಯವೊಂದರಲ್ಲಿ ಇಟ್ಟಿದ್ದರೆಂದು ಶಾಸನದಿಂದ ಗೊತ್ತಾಗುವುದು (Hn. 73).

ಜನರು ಸಾಮಾನ್ಯವಾಗಿ ರಾಜಭಕ್ತಿಯುಳ್ಳವರಾಗಿದ್ದರು. ಅರಸನೂ ಸಹ ನಿಷ್ಠಾವಂತ ಪ್ರಜೆಗಳಿಗೆ ಉಂಬಳಿ, ಮಾನ್ಯ, ಕೊಡುಗಿ ಮುಂತಾದ ದತ್ತಿಗಳನ್ನು ದಯಪಾಲಿಸುತ್ತಿದ್ದನು.

ಗೋ ಅಪಹರಣಗಳಿಗೆ ಸಂಬಂಧಿಸಿದ ಕಾಳಗಗಳಲ್ಲಿ ಪ್ರಾಣಬಿಟ್ಟವರಿಗಾಗಿ ವೀರಗಲ್ಲುಗಳನ್ನು ನೆಡುತ್ತಿದ್ದ ಪದ್ಧತಿ ಜನರಲ್ಲಿದ್ದಿತು. ವೀರನರಸಿಂಹನ ಕಾಲದಲ್ಲಿ ಕೊಡಗು ಜಿಲ್ಲೆಯ ನಿಡುತ ಎಂಬಲ್ಲಿ ನೆಟ್ಟ ವೀರಕಲ್ಲೊಂದರಲ್ಲಿ ಉಬ್ಬಿರುವ ಕೆತ್ತನೆಯ ಕೆಲಸವಿದೆ. ವಿಜಯ–ರಥದಲ್ಲಿ ಕುಳಿತಿರುವ ವೀರನನ್ನು ದೇವಲೋಕದ ಸಂಗೀತಗಾರರು ಅಥವಾ ಗಂಧರ್ವರು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿರುವಂತೆ ಚಿತ್ರಿಸಲಾಗಿದೆ. ಕೆಲವು ವೀರಗಲ್ಲುಗಳಲ್ಲಿ ಅಪ್ಸರೆಯರು ವೀರನನ್ನು ದೈಹಿಕವಾಗಿ ಮೇಲಕ್ಕೆ ಎತ್ತುಕೊಂಡು ಹೋಗುತ್ತಿರುವಂತೆಯೂ ಚಿತ್ರಿಸಲಾಗಿದೆ.

ವೀರಬಲ್ಲಾಳ ದೇವನ ಕಾಲದಲ್ಲಿ ಪೋಚಿಯ ಕೆರಿಯ ನಾಯಕ ಎಂಬುವನು ಯುದ್ಧಕ್ಕಾಗಿ ಧಾವಿಸುತ್ತಿದ್ದ ಸೇನೆಯ ವಿಜಯಕ್ಕಾಗಿ ತನ್ನ ತಲೆಗೊಟ್ಟು'ದುದನ್ನು ಗೋರಿಬಿದನೂರಿನ ಶಾಸನವೊಂದು ತಿಳಿಸುತ್ತದೆ. (Gd. 41, E. C. VIII),

ಮೂರನೆಯ ನರಸಿಂಹನ ಕಾಲದಲ್ಲಿ ಹುಲಿಯೊಂದನ್ನು ಧೈರ್ಯವಾಗಿ ಎದುರಿಸಿ, ಅದನ್ನು ಕೊಂದು ಹಾಕಿದ ಕಾಟೈ ಎಂಬ ಹಜಾಮನಿಗೆ ಇಳ-ಮರುದೂರಿನ ಮಹಾಜನಗಳೇ ದತ್ತಿಯೊಂದನ್ನು ಬಿಟ್ಟುಕೊಟ್ಟುದುದನ್ನು ಎಳಂದೂರಿನ ಶಾಸನವು ಪ್ರಸ್ತಾಪಿಸಿದೆ. (Yl. 74. E· C. XII).

ಹೊಯ್ಸಳರ ಕಾಲದಲ್ಲಿ ಎಂದಾದರೊಮ್ಮೆ ಸ್ತ್ರೀಯರು ಸಹಗಮನ ಪದ್ಧತಿಯನ್ನಾಚರಿಸುತ್ತಿದ್ದರು. (Ak. 81 and Sh. 61) ಜೈನರಲ್ಲಿ ಸಲ್ಲೇಖನ ಎಂಬ ಆಮರಣಾಂತ ಉಪವಾಸ ವ್ರತದ ಮೂಲಕ ಸಾವನ್ನ-ಪ್ಪುವ ವಾಡಿಕೆಯಿದ್ದಿತು. ಕ್ರಿ. ಶ. 1183 ರ ತಿರುಮಕೂಡಲು–ಶಾಸನ ದಲ್ಲಿ ಚಂದ್ರಪ್ರಭಾ ಎಂಬಾತನು ಸಲ್ಲೇಖನ ವಿಧಿಯಿಂದ ನಿಧನ ಹೊಂದಿದು ದನ್ನು ತಿಳಿಸಲಾಗಿದೆ. 'ಸಮಾಧಿ' ಎಂಬ ವಿಧಿಯನ್ನೂ ಸಾವಿಗಾಗಿ ಕೆಲವು ಜೈನರು ಆಚರಿಸುತ್ತಿದ್ದರು. ಶಿಕಾರಿಪುರದ ಶಾಸನವೊಂದರಲ್ಲಿ ಜೈನ ವರ್ತಕ ನೋರ್ವನ ಧರ್ಮಪತ್ನಿಯು 'ಸಮಾಧಿ ವಿಧಿಯಂ ಪಡೆದಳ್ಸುರ ಲೋಕ ಸೌಖ್ಯಮಂ' ಎಂಬುದಾಗಿ ಬಣ್ಣಿಸಲಾಗಿದೆ. ಮತ್ತೊಂದು ಶಾಸನದಲ್ಲಿ ವಿನಯಾದಿತ್ಯನ ಭಂಡಾರಿ ಚಂಡಿಮಯ್ಯನ ಹೆಂಡತಿಯಾದ ಬೊಪ್ಪವೆಯು ಸನ್ಯಾಸನ ವ್ರತವನ್ನು ಕೈಗೊಂಡಿದ್ದಾಗ ಮೃತ್ಯುವಿಗೀಡಾದುದನ್ನು ತಿಳಿಸ ಲಾಗಿದೆ.

ಸತ್ವ ಪರೀಕ್ಷೆ(Ordeal)ಯ ಮೂಲಕ ವಿವಾದವನ್ನು ಬಗೆಹರಿಸಿ ಕೊಂಡ ಪ್ರಕರಣವೊಂದನ್ನು ಕ್ರಿ. ಶ. 1261 ರ ಮಂಡ್ಯದ ಶಾಸನವೊಂದು ಬೆಳಕಿಗೆ ತಂದಿದೆ. ವೀರನರಸಿಂಹದೇವನ ದಳಪತಿಯಾದ ಚೋಳ ಗೌಡ ನಿಗೆ ಕಾಳಗವೊಂದರಲ್ಲಿ ಗೆದ್ದನೆಂಬ ಕಾರಣದಿಂದ ಜಮೀನೊಂದನ್ನು ದತ್ತಿ ಯಾಗಿ ಕೊಡಲಾಗಿದ್ದಿತು. ಆದರ ಸರಹದ್ದಿನ ಬಗ್ಗೆ ವಿವಾದ ಉಂಟಾಗಲು ದೋರಸಮುದ್ರದ ಹೊಯ್ಸಳೇಶ್ವರ ದೇವರ ಸಮ್ಮುಖದಲ್ಲಿ ದಿವ್ಯವಹಿಡಿದು

(ನೈವೇದ್ಯಕ್ಕಿಟ್ಟಿದ್ದ ಆಹಾರವನ್ನು ಮುಟ್ಟಿ ಪ್ರಮಾಣ ಮಾಡಿಯೋ ಅಥವಾ ಅದರ ಮೇಲೆ ಆಣಿಯಿಟ್ಟೋ) ತಮ್ಮ ಮೊಕದ್ದಮೆಯನ್ನು ಬಗೆಹರಿಸಿ ಕೊಂಡರು. (Md. 30, E. C. III). ಕ್ರಿ. ಶ. 1309 ರ ಬೇಲೂರಿನ ಶಾಸನವು ಅದುರಿಕಾವಣ್ಣನೆಂಬುವನು ಹಳೇಬೀಡಿನ ಹೊಯ್ಸಳೇಶ್ವರನ ಮುಂದೆ ಕಾದ ಕಬ್ಬಿಣದ ಗುಳವನ್ನು ಭದ್ರವಾಗಿ ಹಿಡಿದುಕೊಂಡು ಅಗ್ನಿ ಪರೀಕ್ಷೆಯಲ್ಲಿ ಉತ್ತೀರ್ಣನಾದುದನ್ನು ತಿಳಿಸಿದೆ. (Bl. 3!1, E. C. XV).

ಬೇಸಾಯ, ಗೃಹ ಕೈಗಾರಿಕೆ, ವ್ಯಾಪಾರ, ಸೇನೆ ಮುಂತಾದುವು ಜನರ ಜೀವನೋಪಾಯಗಳಾಗಿದ್ದವು. ಆದಷ್ಟು ಜಮೀನುಗಳನ್ನು ಸಾಗುವಳಿಗೆ ಯೋಗ್ಯವನ್ನಾಗಿ ಮಾಡುವುದೇ ಹೊಯ್ಸಳ ಸರ್ಕಾರದ ನೀತಿಯಾಗಿದ್ದಿತು. ಆದರಿಂದಾಗಿ ಸರ್ಕಾರದ ವರಮಾನವೂ ಹೆಚ್ಚಿತು. ನೀರಾವರಿಗಾಗಿ ಕೆರೆಗಳನ್ನೂ ಕಾಲುವೆಗಳನ್ನೂ ಬಾವಿಗಳನ್ನೂ ನಿರ್ಮಿಸಿದ್ದರು. ಕೆರೆಗಳ ದುರಸ್ತಿ ಹಾಗೂ ಬದಿಗಳ ನಿವಾರಣೆಗೆ ಗಮನಕೊಟ್ಟಿದ್ದರು. ಮೂರನೆಯ ನರಸಿಂಹನ ಮಹಾಪ್ರಧಾನನಾಗಿದ್ದ ಪೆರುಮಾಳ ದೇವನು ಉಭಯ ನರಸಿಂಹಪುರ ಅಥವಾ ಈಗಿನ ನಾಗಮಂಗಲದ ತಾಲ್ಲೂಕಿನಲ್ಲಿರುವ ಬೆಳ್ಳೂರಿನ ಗದ್ದೆಗಳ ನಾಲೆಗಳಲ್ಲಿ ಸದಾ ನೀರಿರುವಂತೆ ತುಂಬಾ ಹಣವನ್ನು ವೆಚ್ಚ ಮಾಡಿದುದನ್ನು ಬ್ರಾಹ್ಮಣರೇ ಒಪ್ಪಿಕೊಂಡರೆಂದು ನಾಗಮಂಗಲದ ಶಾಸನಗಳು ಸೂಚಿಸುತ್ತವೆ. ಒಂದನೆಯ ನರಸಿಂಹನ ಮಂತ್ರಿಯಾದ ಪದ್ಮರಸನು ಅರಸನ ಅನುಮತಿಯನ್ನೂ ಪಡೆಯದೆ ರಾಜಭಂಡಾರದಿಂದ ಹನ್ನೆರಡು ಸಾವಿರ ಹೊನ್ನುಗಳನ್ನು ವೆಚ್ಚಮಾಡಿ ಬೇಲೂರಿನಲ್ಲಿ ಬಿಟ್ಟಿಸಮುದ್ರ ಎಂಬ ಕೆರೆಯನ್ನು ನಿರ್ಮಿಸಿದನು. ಆದರಿಂದಾಗಿ ಅವನು ಕೆರೆಯ ಪದ್ಮರಸನೆಂದು ಪ್ರಖ್ಯಾತನಾದನು. ರಾಮನಾಥನ ಜನಪ್ರಿಯ ಮಂತ್ರಿಯಾಗಿದ್ದ ಕಂಬಯ ದಣ್ಣಾಯಕನು ತನ್ನ ರಾಜ್ಯದ ನೀರು ಸರಬರಾಜಿಗೆ ವಿಶೇಷ ಗಮನಕೊಟ್ಟನೆಂದು ತುಮಕೂರಿನ ಅನೇಕ ಶಾಸನಗಳು ಕೊಂಡಾಡಿವೆ.

ಹೊಯ್ಸಳರ ಕಾಲದಲ್ಲಿ ಚಿನ್ನ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆ ಲೋಹಗಳಿಗೆ ಸಂಬಂಧಿಸಿದ ಕೈಗಾರಿಕೆಗಳು ಹತ್ತಿ ಕೈಗಾರಿಕೆ, ಮರಗೆಲಸ, ಕುಂಬಾರಿಕೆ ಮುಂತಾದ ಗುಡಿ ಕೈಗಾರಿಕೆಗಳಿದ್ದವು.

ವಾಣಿಜ್ಯ ಬೆಳವಣಿಗೆಯು ಹೊಯ್ಸಳ ರಾಜ್ಯದ ಆರ್ಥಿಕ ವ್ಯವಸ್ಥೆಯ ಬೆನ್ನು ಮೂಳೆಯಂತಿದ್ದಿತು. ವಾಣಿಜ್ಯವು ಮುಖ್ಯವಾಗಿ ಬಣಜಿಗರು ಅಥವಾ ವೀರ ಬಣಜೀ ಧರ್ಮಕ್ಕೆ ಸೇರಿದವರ ಕೈಯಲ್ಲಿದ್ದಿತೆಂದು ವಿಲಿಯಂ ಕೊಯೆಲ್‌ಹೋ ಅವರು ಬರೆದಿದ್ದಾರೆ. ವರ್ತಕರಿಗೆ ಸಾಮಾನ್ಯವಾಗಿ 'ಸೆಟ್ಟಿ' ಎಂಬ ಉಪನಾಮವಿದ್ದಿತು. ಅವರಿಗೆ 'ಮಹಾವಡ್ಡ ವ್ಯವಹಾರಿ, ಎಂಬ ಬಿರುದೂ ಇದ್ದಿತು. ವರ್ತಕರು ಅಯ್ಯಾವಳೆ ಮತ್ತಿತರ ಪ್ರಮುಖ ಗ್ರಾಮ, ನಗರಗಳಲ್ಲಿ ವಾಸಿಸುತ್ತಿದ್ದರು. ಅವರು ಶ್ರೇಷ್ಠವಾದ ಆನೆಗಳು, ಪಳಗಿದ ಕುದುರೆಗಳು, ದೊಡ್ಡದಾದ ನೀಲಮಣಿಗಳು, ಪಚ್ಚೆರತ್ನಗಳು, ವಜ್ರ ವೈಢೂರ್ಯಗಳು, ಪುಷ್ಯರಾಗ (Topaz) ಕೆಂಪು ಕಲ್ಲುಗಳು, ಹವಳಗಳು, ಸಂಭಾರ ಜೀನಸುಗಳು, ಶ್ರೀಗಂಧ, ಕರ್ಪೂರ, ಕಸ್ತೂರಿ, ಕುಂಕುಮ, ಸುಗಂಧದ್ರವ್ಯಗಳೊಂದಿಗೆ ಭೂಮಾರ್ಗ ಹಾಗೂ ಜಲಮಾರ್ಗವಾಗಿ ಸಂಚರಿಸುತ್ತಾ ತಮ್ಮ ಸರಕುಗಳನ್ನು ಒಟ್ಟಾಗಿಯೋ ಚಿಲ್ಲರೆಯಾಗಿಯೋ ಮಾರುತ್ತಿದ್ದರೆಂದು ಶಾಸನಗಳಿಂದ ಗೊತ್ತಾಗುವುದು. ಧಾನ್ಯ, ವಸ್ತ್ರ, ಒಡವೆ, ಸೌದೆ, ವೀಳ್ಯೇದೆಲೆ, ಎಣ್ಣೆ ಮತ್ತು ಜಾನುವಾರು (Cattle) ಗಳ ಮಾರಾಟವೂ ಪ್ರಾಮುಖ್ಯತೆ ಹೊಂದಿದ್ದಿತು. ಪದಾರ್ಥಗಳನ್ನು ಹೊತ್ತು ಮಾರುವವರು ಆಗಲೂ ಇದ್ದರು. ಅರಸೀಕೆರೆಯ ಶಾಸನವೊಂದರಲ್ಲಿ ಬ್ರಾಹ್ಮಣ ವರ್ತಕರು ಸಮುದ್ರದಾಚೆಯಿಂದ ಆನೆ, ಕುದುರೆ ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು ರಾಜರಿಗೆ ಮಾರುತ್ತಿದ್ದ ವೃತ್ತಾಂತವಿದೆ. (Ak. 62). ಎರಡನೆಯ ಬಲ್ಲಾಳನ ಜನಪ್ರಿಯತೆಯಿಂದಾಗಿ ಒಂದು ಹೊಸ ಅಳತೆ ಕಡ್ಡಿಗೆ ದ್ರೋಹಹರಮಲ್ಲ ಎಂಬ ಹೆಸರನ್ನಿಡಲಾಯಿತಂತೆ.

ವಸ್ತುಗಳ ಹಾಗೂ ಪ್ರಾಣಿಗಳ ಪರೀಕ್ಷೆಯಲ್ಲಿ ಪ್ರವೀಣನಾಗಿದ್ದ ಕೇರಳದ ವರ್ತಕ ದಾಮೋದರ ಸೆಟ್ಟಿಗೆ ಪೊಯ್ಸಳ ರಾಜ್ಯದಲ್ಲಿ ದೊರೆತ ಗೌರವಾದರಗಳನ್ನು ಮತ್ತೊಂದು ಶಾಸನವು ಹೊರಗೆಡಹಿದೆ. (Ak. 82, E, C. V). ಅವನ ತಮ್ಮನಾದ ಕುಂಜನಂಬಿಯು ಮುತ್ತು-ರತ್ನಗಳ ಪರೀಕ್ಷೆಯಲ್ಲಿ ನಿಸ್ಸೀಮನಾಗಿದ್ದನಂತೆ.

ಕಾರ್ಮಿಕರಿಗೆ ಕೊಡಬೇಕಾದ ಮಜೂರಿ ಹಣವನ್ನು ಸಾಮಾನ್ಯವಾಗಿ ಧಾನ್ಯರೂಪದಲ್ಲಿ ಕೊಡುತ್ತಿದ್ದರು. ಆದರೆ ನಾಣ್ಯಗಳು ಚಲಾವಣೆ

ಯಲ್ಲಿದ್ದುವು. ಗಡ್ಯಾಣ, ಪಣ, ಅರ್ಧಪಣ, ಹೊನ್ ಮುಂತಾದ ಶಬ್ದಗಳು ಶಾಸನಗಳಲ್ಲಿ ಬಂದಿವೆ. ಹೊಯ್ಸಳರ ನಾಣ್ಯಗಳ ಮೇಲ್ಮುಖದಲ್ಲಿ ಶಾರ್ದೂಲದ ಚಿತ್ರವಿದೆ. ಸೂರ್ಯ, ಚಂದ್ರರ ನಡುವೆ ಮತ್ತೊಂದು ಪುಟ್ಟ ಹುಲಿಯ ಆಕೃತಿಯಿದೆ. ಶಾರ್ದೂಲದ ಮುಂಭಾಗದಲ್ಲಿ ಆನೆಯ ಅಂಕುಶ ಅಥವಾ ದೀಪಸ್ತಂಭವಿರುವುದುಂಟು. ನಾಣ್ಯದ ಹಿಂಭಾಗವು ಹಳೆಗನ್ನಡದ ಅಕ್ಷರಗಳಲ್ಲಿ ಶ್ರೀ ತಲಕಾಡುಗೊಂಡ, ಶ್ರೀ ನೊಳಂಬವಾಡಿಗೊಂಡ, ಶ್ರೀ ಮಲಪರೊಳ್ ಗಂಡ ಎಂಬ ಬಿರುದುಗಳನ್ನು ಒಳಗೊಂಡಿವೆ. ವಿಷ್ಣುವರ್ಧನನ ನಾಣ್ಯಗಳು ಮೂರು ಗಾತ್ರಗಳಲ್ಲಿವೆ. ಅವುಗಳಲ್ಲಿ ದೊಡ್ಡದು ಬಹುಶಃ ವರಾಹಗಳೆಂದೂ ಅತ್ಯಂತ ಚಿಕ್ಕವು ಅರ್ಧ ಪಣಗಳೆಂದೂ ಮಧ್ಯಸ್ಥವಾದದ್ದು ಪಣಗಳಿರಬಹುದೆಂದೂ ಶ್ರೀ ಹಯವದನರಾಯರು ಅಭಿಪ್ರಾಯಪಟ್ಟಿದ್ದಾರೆ. ಅವುಗಳ ಮುಂಭಾಗದಲ್ಲೂ ಹೊಯ್ಸಳರ ಲಾಂಛನವಾದ ಶಾರ್ದೂಲವೂ ದೇವರ ಆಕೃತಿಯೂ ಸೂರ್ಯ–ಚಂದ್ರರ ಆಕೃತಿಗಳೂ ಇವೆ; ಹಿಂಭಾಗದಲ್ಲಿ ಶ್ರೀ ನೊಳಂಬವಾಡಿಗೊಂಡ ಎಂಬ ಬಿರುದನ್ನೂ ಎರಕ ಹೊಯ್ಯಲಾಗಿದೆ. ಎಲ್ಲಾ ಪಣಗಳ ಮೇಲ್ಮುಖದಲ್ಲಿ ಶಾರ್ದೂಲವಿದ್ದರೂ ಹಿಂಭಾಗದಲ್ಲಿ ಒಂದೊಂದು ನಾಣ್ಯದಲ್ಲಿ ಒಂದೊಂದು ರೀತಿಯ ಮಾನವ ಆಕೃತಿ ಇದೆ. ಹನ್ನೆರಡನೆಯ ಶತಮಾನದಲ್ಲಿ ಹಣವನ್ನು ಹೂತಿಡುವುದೂ ಜನರಲ್ಲಿ ವಾಡಿಕೆಯಲ್ಲಿದ್ದಿತು.

೭. ಹೊಯ್ಸಳರ ಕಾಲದಲ್ಲಾದ ಶೈಕ್ಷಣಿಕ ಹಾಗೂ ಸಾಹಿತ್ಯ ಪ್ರಗತಿ

ಶಿಕ್ಷಣ

ಹೊಯ್ಸಳರ ಕಾಲದಲ್ಲಿ ವಿದ್ಯಾಭ್ಯಾಸಕ್ಕಾಗಿ ಸೌಲಭ್ಯಗಳಿದ್ದುವು ಹಿಂದೂ ಮತ್ತು ಜೈನರ ಅನೇಕ ಶಿಕ್ಷಣ ಸಂಸ್ಥೆಗಳು ಅಸ್ತಿತ್ವದಲ್ಲಿದ್ದುವು. ವಿಖ್ಯಾತ ವಿದ್ವಾಂಸರ ಬಗ್ಗೆ ಶಾಸನಗಳಲ್ಲಿ ಸಾಕಷ್ಟು ಪ್ರಸ್ತಾಪ ಬಂದಿದೆ.

ಹಿಂದೂಗಳ ಬಗ್ಗೆ ಹೇಳುವುದಾದರೆ ಅಗ್ರಹಾರಗಳು, ಘಟಿಕಗಳು, ಬ್ರಹ್ಮಪುರಿಗಳು, ಮಠಗಳು ಮತ್ತು ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದುವು.

ಬ್ರಾಹ್ಮಣ ವಿದ್ವಾಂಸರ ಬೀಡಾಗಿದ್ದ ಅಗ್ರಹಾರಗಳ ಸ್ಥಾಪನೆ ಅಥವಾ ಪೋಷಣೆಗೆ ಅರಸನೂ ಮಂತ್ರಿಗಳೂ ನೆರವಾಗುತ್ತಿದ್ದ ನಿದರ್ಶನಗಳಿವೆ. ಬಲಿ ವಂಶಕ್ಕೆ ಸೇರಿದ್ದ ಕೊಡಂಗನೂರು ಬ್ರಾಹ್ಮಣರಿಗೆ ಜನಮೇಜಯನು ಕೊಟ್ಟಿದ್ದಕ್ಕಿಂತಲೂ ಉತ್ತಮವಾದ ಗ್ರಾಮವನ್ನು ಕೊಡಿಸುತ್ತೇನೆಂದು ಭರವಸೆಯಿತ್ತ ವಿಷ್ಣುವರ್ಧನನು ಅವರೆಲ್ಲರೂ ಕೆಲ್ಲಂಗೆರೆಯಲ್ಲಿ ನೆಲೆಸಲು ಸಹಾಯ ಮಾಡಿದನು. ಅದು ವಿಖ್ಯಾತ ಅಗ್ರಹಾರವಾಯಿತು. "ಕೆಲ್ಲಂಗೆರೆ ಸೋಭಿಸುತಿರ್ಪರು ವಿಪ್ರರೆಲ್ಲರುಂ" ಎಂಬುದಾಗಿ ಅರಸೀಕೆರೆಯ ಶಾಸನವು ವರ್ಣಿಸಿದೆ. (Ak. 110, E. C. V).

ವೀರನರಸಿಂಹದೇವನ ಮಹಾಮಂತ್ರಿಯಾಗಿದ್ದ ಸೋಮನು ಪ್ರಸನ್ನ ಸೋಮನಾಥಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದನು. ಅದು ಎಲ್ಲರಿಂದಲೂ ಗೌರವಿಸಲ್ಪಟ್ಟ ವಿದ್ಯಾಪೀಠವಾಯಿತು. (Tn. 97, E. C. III) ಅವನ ಮತ್ತೊಬ್ಬ ಪ್ರಸಿದ್ಧ ಮಂತ್ರಿಯಾಗಿದ್ದ ಪೆರುಮಾಳನು ವೈಲಂಗೆ

ಅಥವಾ ಈಗಿನ ಮಾಲಂಗಿಯಲ್ಲಿ ಉಚ್ಚ ಶಿಕ್ಷಣ ಸಂಸ್ಥೆಯೊಂದಕ್ಕಾಗಿ ಜಮೀನುಗಳನ್ನು ಕೊಂಡು ದಾನ ಮಾಡಿದನು. ಆ ಸಂಸ್ಥೆಯಲ್ಲಿ ಋಗ್ವೇದವನ್ನು ಬೋಧಿಸುವ ಪ್ರಾಧ್ಯಾಪಕರಿದ್ದುದರ ಜೊತೆಗೆ ನಾಗರ, ಕನ್ನಡ, ತಿಗುಳ (ತಮಿಳು) ಮತ್ತು ಆರ್ಯ (ಮರಾಠಿ) ಭಾಷೆಗಳ ಬೋಧಕರೂ ಇದ್ದರು. (Tn. 27 E. C. III).

ಹಾಸನ ಜಿಲ್ಲೆಯ ಸರ್ವಜ್ಞಪುರದಲ್ಲಿ ವೇದ, ಸ್ತೋತ್ರ, ತರ್ಕಗಳಲ್ಲಿ ಪರಿಣತರಾದವರಿದ್ದರು. ಅಲ್ಲಿ ವ್ಯಾಖ್ಯಾನ, ಚರ್ಚೆ, ಪುರಾಣ ವಾಚನಗಳು ಜರುಗುತ್ತಿದ್ದವು. ಶಿವಮೊಗ್ಗೆ ಜಿಲ್ಲೆಯ ನಾಗರಖಂಡವೂ ಒಂದು ವಿಖ್ಯಾತ ಅಗ್ರಹಾರವಾಗಿದ್ದಿತು.

ಹೆಂಜಾರ ಪಟ್ಟಣದ ನೊಣಂಜೇಶ್ವರ ದೇವಾಲಯವು ಮಹಾ ಘಟಿಕ ಸ್ಥಾನವಾಗಿದ್ದಿತು. ಶಿಕಾರಿಪುರದ ತಾಲ್ಲೂಕಿನಲ್ಲಿರುವ ತಾಳಗುಂದ ದೇವಾಲಯದಲ್ಲಿ ಸಂಸ್ಕೃತ ಪಾಠಶಾಲೆಯೊಂದು ಹನ್ನೆರಡನೆಯ ಶತಮಾನದಲ್ಲಿದ್ದಿತು. ಅಲ್ಲಿ ವೇದ, ವೇದಾಂತ, ಮೀಮಾಂಸೆ, ಭಾಷಾಶಾಸ್ತ್ರ ಹಾಗೂ ಕನ್ನಡ ಅಧ್ಯಯನಕ್ಕೆ ವ್ಯವಸ್ಥೆ ಇದ್ದಿತು.

ಬಳ್ಳಿಗಾವೆಯಲ್ಲಿದ್ದ ಬ್ರಹ್ಮಪುರಿ (ಬ್ರಾಹ್ಮಣರ ವಸತಿ) ಮಠಗಳು, ದೇವಾಲಯುಗಳು, ಬಸದಿಗಳು ಹಾಗೂ ಬೌದ್ಧ ವಿಹಾರಗಳು ವಿದ್ಯಾಕೇಂದ್ರಗಳಾಗಿದ್ದುವು.

ಪ್ರಾಥಮಿಕ ಶಿಕ್ಷಣಕ್ಕಾಗಿ ಎರಡನೆಯ ಬಲ್ಲಾಳನ ಮಂತ್ರಿಯಾಗಿದ್ದ ಹೆಗ್ಗಡೆ ಈರೆಯಣ್ಣನು ನರಸಿಂಹಪುರದಲ್ಲಿ ಒಂದು ಮನೆಯುನ್ನು ಕಟ್ಟಿಸಿ, ಅಗ್ರಹಾರದ ಸೋವಿಯಣ್ಣನನ್ನು ಕರ್ನಾಟವನ್ನು ಬೋಧಿಸಲು ನೇಮಿಸಿದ್ದನು. ವಿದ್ಯಾರ್ಥಿ ವೇತನಕ್ಕೂ ಅವನು ಏರ್ಪಾಡು ಮಾಡಿದ್ದನು. ಹೊಯ್ಸಳ ಅರಸ ಸೋಮೇಶ್ವರನೂ ನೂತನ ಅಗ್ರಹಾರಗಳನ್ನು ನಿರ್ಮಿಸಿ ವಿದ್ಯೆಯ ಪುನರುಜ್ಜೀವನ ಮಾಡಿದನು.

ಪುರಾಣ ಶ್ರವಣ, ಧಾರ್ಮಿಕ ಜಿಜ್ಞಾಸೆಯ ಶ್ರವಣ, ನಾಟಕ ವೀಕ್ಷಣೆ ಮುಂತಾದುವು ಮಹಿಳಾ ಶಿಕ್ಷಣದ ಸಾಧನಗಳಾಗಿದ್ದವೆಂದು ಊಹಿಸಬಹುದು. ಸಂಗೀತ ಹಾಗೂ ಲಲಿತ ಕಲೆಗಳ ಶಿಕ್ಷಣವನ್ನು ರಾಜಕುಟುಂಬ

ದವರೂ ಶ್ರೀಮಂತರೂ ಹಾಗೂ ಸಂಗೀತ ಮತ್ತು ಲಲಿತ ಕಲೆಗಳನ್ನು ಅಭ್ಯಾಸ ಮಾಡಿದ್ದ ಕುಟುಂಬದವರ ಮಕ್ಕಳೂ ಪಡೆಯುತ್ತಿದ್ದರು.

ವ್ಯಕ್ತಿ ಶಿಕ್ಷಣವು ಆನುವಂಶಿಕವಾಗಿ ದೊರೆಯುತ್ತಿದ್ದಿತು. ಹೊಯ್ಸಳರ ಕಾಲದಲ್ಲಿ ಆಯುರ್ವೇದ, ಪಶುವೈದ್ಯ, ಗಣಿತಶಾಸ್ತ್ರ, ಗಜಶಾಸ್ತ್ರ ಮುಂತಾದ ವೈಜ್ಞಾನಿಕ ವಿಷಯಗಳಲ್ಲಿ ಗಣನೀಯ ಪ್ರಮಾಣದ ಪ್ರಗತಿಯಾಗಿದ್ದಿತು.

ಹೊಯ್ಸಳರ ಕಾಲದಲ್ಲಿ ಪಾಂಡಿತ್ಯಕ್ಕೆ ಹೆಸರಾಗಿದ್ದ ಕೆಲವರ ಪರಿಚಯವನ್ನು ಈಗ ಮಾಡಿಕೊಳ್ಳೋಣ.

ಶ್ರೀಪಾಲನೆಂಬ ಗದ್ಯ ಹಾಗೂ ಪದ್ಯಗಳ ವ್ಯಾಖ್ಯಾನಕಾರನು ಚೋಳ ಮತ್ತಿತರ ರಾಜರ ಆಸ್ಥಾನಗಳಲ್ಲಿದ್ದ ಪಂಡಿತರನ್ನು ಪರಾಭವಗೊಳಿಸಿದನೆಂದು ಕಡೂರಿನ ಶಾಸನವು ತಿಳಿಸಿದೆ. (Kd. ೬೪, E. G. VI)

ಅರಸೀಕೆರೆಯ ಶಾಸನವು ಶ್ರೀಪಾಲನನ್ನು ತರ್ಕಶಾಸ್ತ್ರಜ್ಞರ ಸಾಮ್ರಾಟನೆಂದೂ ಗದ್ಯ ಮತ್ತು ಪದ್ಯಗಳಲ್ಲಿ ನಿಸ್ಸೀಮನಾಗಿದ್ದನೆಂದೂ ಬಣ್ಣಿಸಿದೆ. (Ak. 141 E. C. V).

ಒಂದನೆಯ ನರಸಿಂಹನ ಕಾಲದಲ್ಲಿದ್ದ ಲೋಕಾಚಾರ್ಯನು ಉನ್ನತ ಶ್ರೇಣಿಯ ವ್ಯಾಕರಣ ಶಾಸ್ತ್ರಜ್ಞನೂ ಜೋತಿಷ್ಕನೂ ಆಗಿದ್ದನು. (Ak. 55 E. C. V).

ಎರಡನೆಯ ಬಲ್ಲಾಳನ ರಾಜಗುರುವಾಗಿದ್ದ ವಾಮಶಕ್ತಿದೇವನು ಸಂಗೀತ, ನೃತ್ಯಗಳಲ್ಲಿ ಅಭಿರುಚಿಯುಳ್ಳವನಾಗಿದ್ದುದಲ್ಲದೆ ವಿದ್ವಾಂಸನೂ ಆಗಿದ್ದನು. ಬಲ್ಲಾಳನ ಮಂತ್ರಿಯಾದ ಈರೆಯಣ್ಣನು 'ಧರ್ಮ ಪ್ರಸಂಗದಿಂ' ಕೇದಾರ ದೇವಾಲಯಕ್ಕೆ ಹೋದಾಗ ವಾಮಶಕ್ತಿ ದೇವನ ಪಾಂಡಿತ್ಯಕ್ಕೆ ಬೆರಗಾದನಂತೆ. (Sk. 105 E. C. VII)

ಎರಡನೆಯ ಬಲ್ಲಾಳನ ವಿಖ್ಯಾತ ಮಂತ್ರಿಯಾಗಿದ್ದ ಚಂದ್ರಮೌಳಿಯು ತರ್ಕ, ಸಾಹಿತ್ಯ, ಭರತಶಾಸ್ತ್ರ, ಸಂಗೀತ, ವ್ಯಾಕರಣ, ಉಪನಿಷತ್ತು ಮುಂತಾದುವುಗಳಲ್ಲಿ ಅಗ್ರಗಣ್ಯನಾಗಿದ್ದನೆಂದು ಶ್ರವಣಬೆಳ್ಗೊಳದ ಶಾಸನವೊಂದರಲ್ಲಿ ತಿಳಿಸಲಾಗಿದೆ.

ವೀರನಾರಸಿಂಹ ಹೊಯ್ಸಳನ ಕಾಲದಲ್ಲಿದ್ದ ಕೊಟ್ಟತೆಣೆಯ ಕಲ್ಲ ಮಟದ ಮಲ್ಲಿಕಾರ್ಜುನ ಪಂಡಿತನು, ಪಂಚ ಪ್ರತಿಷ್ಠೆಗಳೊಳ್ ಅಂದರೆ ಮಯ, ಭೂಪಾಳ, ಯೋಗ ಪಾರಾಯಣ, ಪ್ರತಿಷ್ಠೆ ಮತ್ತು ಪ್ರತಿಷ್ಠಾರ್ಣವ ಗಳಲ್ಲದೆ, ತರ್ಕ, ವ್ಯಾಕರಣ, ವ್ಯಕ್ತಿ, ಪಜಿ, ಭ್ಯೋಮ ದಿಕ್ಸು ದುರ್ಗ್ಘಟಕು ಶಾಸ್ತ್ರಂಗಳೊಳ್ ' ಪರಿಣತನಾಗಿದ್ದನೆಂದು ಚಿಕ್ಕ ನಾಯಕನ ಹಳ್ಳಿಯ ಶಾಸನ ತಿಳಿಸಿದೆ. (Ck. 40 E. C. XII).

ಅರಸನ ಪ್ರಧಾನ ಕರಣಿಕನಾಗಿದ್ದ ವಿಶ್ವನಾಥನು ಎರಡು ಹಸ್ತ ಗಳಿಂದಲೂ ಬರೆಯಬಲ್ಲವನಾಗಿದ್ದುದಲ್ಲದೆ ನೂರು ಅವಧಾನಗಳನ್ನು (ಜ್ಞಾಪಕ ಶಕ್ತಿಗೆ ಸಂಬಂಧಿಸಿದ ಸಾಹಸ— Mnemonic feats) ಮಾಡಬಲ್ಲವನಾಗಿದ್ದನು. ವಿದ್ವಾಂಸರೂ ಅವನ ಪ್ರತಿಭೆಗಾಗಿ ತಲೆದೂಗಿದ ರಂತೆ (Cn. 203, E. C. V) ವಿಶ್ವನಾಥನ ಅಣ್ಣನಾದ ಈಶ್ವರದೇವನು ಅರಸನಿಗೇ ಅಕ್ಷರಾಭ್ಯಾಸ ಮಾಡಿಸಿದುದಲ್ಲದೆ ಕಲೆಗಳಲ್ಲೂ ಅವನಿಗೆ ಪ್ರಾವಿಣ್ಯತೆಯನ್ನು ತಂದುಕೊಟ್ಟನಂತೆ.

ವೀರನರಸಿಂಹನ ಮಹಾಪ್ರಧಾನನಾಗಿದ್ದ ' ತೊಲಗದ ಕಂಬ ' ಎಂಬ ಬಿರುದಾಂಕಿತ ಪೋಲಾಳ್ವದೇವನು ಸಾಹಿತಿಯಾಗಿದ್ದುದಲ್ಲದೆ ವಾಚಾಳಿಯೂ ಆಗಿದ್ದನೆಂದು ಕಾಣುತ್ತದೆ. "ಸಮಸ್ತ ಸಚಿವರ್ ಲೆಪ್ಪಂಗಳೆಂತೆಂಬ ಮಂತಣ ದೊಳ್ ನಾಲಗೆಯೀತನಿಂ" ಎಂಬುದಾಗಿ ದಾವಣಗೆರೆಯ ಶಾಸನವು ಬಣ್ಣಿಸಿದೆ.

ಮೂರನೆಯ ನರಸಿಂಹನ ಕಾಲದಲ್ಲಿದ್ದ ವೈದ್ಯದೇವ ಪಿಳ್ಳೆಯು ಧನ್ವಂತರಿಯಂತೆ ನೂತನ ವೈದ್ಯ ಕಲೆಯಲ್ಲಿ ಪಾರಂಗತನಾಗಿದ್ದನು.

ಸಾಹಿತ್ಯ

ಹೊಯ್ಸಳರ ಕಾಲದಲ್ಲಿ ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯ ವೃಕ್ಷವು ಎತ್ತರವಾಗಿ ಬೆಳೆಯಿತು. ಆ ಕಾಲದ ದೇಶಪ್ರೇಮ, ರಾಜನಿಷ್ಠೆ, ಧಾರ್ಮಿಕ ಶ್ರದ್ಧೆ, ಆತ್ಮಬಲಿದಾನ ಮುಂತಾದ ವೈಶಿಷ್ಟ್ಯಗಳು ಅಂದಿನ ಸಾಹಿತ್ಯ ಕೃತಿ ಗಳಲ್ಲಿ ಪ್ರತಿಬಿಂಬಿತವಾಗಿವೆ. 'ಕಂತಿ ಹಂಪನ ಸಮಸ್ಯೆ' ಎಂಬ ಗ್ರಂಥ

ವನ್ನು ರಚಿಸಿದ ಕನ್ನಡದ ಪ್ರಥಮ ಕವಯಿತ್ರಿ ಕಂತಿಯು ಹೊಯ್ಸಳ ರಾಜ್ಯ ದಲ್ಲಿ ಜನ್ಮವೆತ್ತಿದಳೆಂಬುದು ಉಲ್ಲೇಖಸಾರ್ಹವಾಗಿದೆ.

ದಂತ ಕಥೆಯನ್ನು ನಂಬುವುದಾದರೆ 'ರಾಮಚಂದ್ರ ಚರಿತ' ಮತ್ತು 'ಮಲ್ಲಿನಾಥ ಪುರಾಣ' ವನ್ನು ಬರೆದ ನಾಗಚಂದ್ರನು ಒಂದನೆಯ ಬಲ್ಲಾಳನ ಆಸ್ಥಾನಸಲ್ಲಿದ್ದನು. ವಿಷ್ಣುವರ್ಧನನ ಆಸ್ಥಾನ ಕವಿಯಾದ ರಾಜಾದಿತ್ಯನು ಲೀಲಾವತಿ ಕ್ಷೇತ್ರಗಣಿತ, ವ್ಯವಹಾರರತ್ನ, ಚಿತ್ರಹಸುಗೆ ಮುಂತಾದ ಗಣಿತ ಶಾಸ್ತ್ರದ ಗ್ರಂಥಗಳನ್ನು ರಚಿಸಿದನು.

ಪ್ರಾಯಶಃ ನಾಗಚಂದ್ರನ ಸಮಕಾಲೀನನಾಗಿದ್ದ ನಯಸೇನನು 'ಧರ್ಮಾಮೃತ' ವೆಂಬ ಕಾವ್ಯವನ್ನು ಬರೆದನು.

'ಕಬ್ಬಿಗರ ಕಾವ' ದ ಕರ್ತೃವಾದ ಆಂಡಯ್ಯನು ಶುದ್ಧ ಕನ್ನಡದ ಬಳಕೆಗೆ ಹೆಸರುವಾಸಿಯಾದನು.

ಒಂದನೆಯ ನರಸಿಂಹನ ಕಾಲದಲ್ಲಿದ್ದ ಸುಮನೋಬಾಣನು ಜೈನ ಪುರಾಣಕ್ಕೆ ಸಂಬಂಧಿಸಿದ ಗ್ರಂಥವೊಂದನ್ನು ಬರೆದನು. ಸೋಮನಾಥನೆಂಬ ಕವಿಯು 'ಕರ್ಣಾಟಕ ಕಲ್ಯಾಣ ಕಾರಕ' ಎಂಬ ವೈದ್ಯಶಾಸ್ತ್ರ ಗ್ರಂಥವನ್ನು ಬರೆದನು. ಅದನ್ನು ಸುಮನೋಬಾಣ ಮತ್ತು ಅಭಯಚಂದ್ರ ಸಿದ್ಧಾಂತರೆಂಬ ಕವಿಗಳು ತಿದ್ದಿ ಸರಿಪಡಿಸಿದರಂತೆ.

ನರಸಿಂಹನ ಆಸ್ಥಾನದಲ್ಲಿ ಮೊದಲು ಕರಣಿಕ ವೃತ್ತಿಯಲ್ಲಿದ್ದ ಹರಿಹರ ದೇವನು ಅನಂತರ ಹಂಪೆಯಲ್ಲಿ ನೆಲೆಸಿ ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಶಿವಶರಣ ರಗಳೆಗಳನ್ನು ರಚಿಸಿದನು. 'ರಗಳೆ' ಎಂಬುದು ಒಂದು ಹಾಡಿನ ಮಟ್ಟು ಅಥವಾ ಶೈಲಿ. ರಗಳೆಯ ಮಟ್ಟಿನಲ್ಲಿ ಕಾವ್ಯರಚನೆ ಮಾಡಿದ್ದರಿಂದ "ರಗಳೆಯ ಕವಿ" ಎಂಬ ಅಪಹಾಸ್ಯಕ್ಕೆ ಗುರಿಯಾದನೆಂದೂ ಅದನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ 'ಗಿರಿಜಾ ಕಲ್ಯಾಣ' ವನ್ನು ಚಂಪೂ ಶೈಲಿಯಲ್ಲಿ ಬರೆದನೆಂದೂ ದಂತಕಥೆ ಇದೆ.

ಹರಿಹರನ 'ಪಂಪಾಶತಕ' ವು ವೀರಶೈವ ಕವಿಗಳ ಶತಕ ಸಾಹಿತ್ಯ ಸೃಷ್ಟಿಗೆ ಅಂಕುರಾರ್ಪಣವಾಯಿತು. ಹರಿಹರನ ಶತಕಗಳಲ್ಲಿ ಭಕ್ತಿಯು ಹೊನಲೇ ಹರಿದಿದೆ. ವೈರಾಗ್ಯವು ಅದರೊಂದಿಗೆ ಹಾಸು ಹೊಕ್ಕಾಗಿದೆ.

ಭಕ್ತಿ ಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿ ಪದದಿಂದಧಿಕವಿದಕೆ ಪಡಿಯಿಲ್ಲೆನಿಸಿ
ಉರವಣಿಸು ಪರಮಭಕ್ತಿಯ ಸುಖದ ಸೊಕ್ಕೇಱ—

ಕವಿ ಮೈಮರೆತಿರುವುದು ಸ್ಪಷ್ಟವಾಗಿದೆ.

ಮುಡುಗೆಯ ಅಷ್ಟಶತಕವು ಪವಾಡವೊಂದನ್ನು ನಿರೂಪಿಸುತ್ತದೆ. ಗಿರಿಜಾ ಕಲ್ಯಾಣವು ಒಂದು ಸೊಗಸಾದ ಕಾವ್ಯ. ಕಾವ್ಯವಸ್ತು ಹಳೆಯದಾದರೂ ಅದನ್ನು ಹೇಳುವ ರೀತಿಯಲ್ಲಿ ನವ್ಯತೆಯಿದೆ. ಅದೊಂದು ವರ್ಣನಾತ್ಮಕ ಕಾವ್ಯ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದಿರುವಂತೆ ಹರಿಹರನ ಶೈಲಿಯ ಮುಖ್ಯ ಲಕ್ಷಣ ಉತ್ಸಾಹ. 'ಉತ್ಸಾಹದಿಂ ಮೆಚ್ಚಿ ಪೇಳ್ದಾಗಿರಿಜಾಕಲ್ಯಾಣ ಕಾವ್ಯಂ' ಎಂಬುದಾಗಿ ತಾನೇ ಹೇಳಿಕೊಂಡಿದ್ದಾನೆ.

ಹರಿಹರನ ಸೋದರಳಿಯ ರಾಘವಾಂಕನು ಪ್ರಥಮ ದರ್ಜೆಯ ಕವಿಗಳಲ್ಲೊಬ್ಬನು. ರಾಘವಾಂಕನು ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭಚಾರಿತ್ರ. ಹರಿಹರ ಮಹತ್ವ ಎಂಬ ಕೃತಿಗಳ ಕರ್ತೃವು. ಅವುಗಳ ಪೈಕಿ 'ಶರಭ ಚಾರಿತ್ರ' ಮತ್ತು ಹರಿಹರ ಮಹತ್ವ' ಗಳು ಉಪಲಬ್ಧವಾಗಿಲ್ಲ.

ರಾಘವಾಂಕನ ಕೃತಿಗಳು ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟವೆ. ರಾಘವಾಂಕನ ಮೇರು ಕೃತಿಯಾದ ಹರಿಶ್ಚಂದ್ರ ಕಾವ್ಯವು ಕಾವ್ಯದ ಚೌಕಟ್ಟಿನಲ್ಲಿ ನಾಟಕವೊಂದನ್ನು ಹೊತ್ತು ಕುಳಿತಿರುವ ಕೃತಿ' ಎಂಬ ಭಾವನೆಯನ್ನು ಮೂಡಿಸುತ್ತದೆ. ಸಂಭಾಷಣೆಯು ಆ ಕಾವ್ಯದ ರಸಘಟ್ಟಿಯಾಗಿದೆ. 'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು' ಎಂಬ ಅಮರ ಸಂದೇಶವನ್ನು ಕಾವ್ಯವು ಜಗತ್ತಿಗೆ ಸಾರುತ್ತಿದೆ.

ಸಿದ್ಧರಾಮ ಪುರಾಣವು ಪ್ರಸಿದ್ಧ ವಚನಕಾರನಾದ ಸಿದ್ಧರಾಮನ ಕಾರ್ಯ ಸಾಧನೆಯನ್ನೂ 'ಸೋಮನಾಥ ಚರಿತೆ'ಯು ಆದಯ್ಯನೆಂಬ ವೀರಶೈವ ಶರಣನ ಜೀವನ ವೃತ್ತಾಂತವನ್ನೂ ಚಿತ್ರಿಸಿವೆ.

ದೋರಸಮುದ್ರದಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸನು 'ದೀಕ್ಷಾ ಬೋಧೆ' ಎಂಬ ಧಾರ್ಮಿಕ ಗ್ರಂಥವನ್ನು ರಚಿಸಿದನು.

ಎರಡನೆಯ ಬಲ್ಲಾಳನ ಆಸ್ಥಾನದಲ್ಲಿ ನೇಮಿಚಂದ್ರನು ಲೀಲಾವತಿ ಎಂಬ ಲೌಕಿಕ ಕಾವ್ಯವನ್ನೂ 'ನೇಮಿನಾಥ ಪುರಾಣ' ಎಂಬ ಧಾರ್ಮಿಕ ಕಾವ್ಯವನ್ನೂ ರಚಿಸಿದನು. 'ಲೀಲಾವತಿ' ಒಂದು ಶೃಂಗಾರ ಕಾವ್ಯ. 'ಸ್ತ್ರೀ ರೂಪಮೆ ರೂಪಂ ಶೃಂಗಾರಮೆ ರಸಂ' ಎಂಬ ಅಭಿಪ್ರಾಯಕ್ಕೆ ಮನ್ನಣೆ ನೀಡಿದವನು ನೇಮಿಚಂದ್ರ. ಕಾವ್ಯವೆಂಬುದು ಅಮೂಲ್ಯ ವಸ್ತು ಎಂದು ಭಾವಿಸಿದ್ದ ನೇಮಿಚಂದ್ರನು,

"ಬೆಲೆಯಿಂದಕ್ಕುಮೆ ಕೃತಿಗಾ
ವಿಲ ಭುವನದ ಭಾಗ್ಯದಿಂದ ಮಕ್ಕು ನೋಳ್ಪಂ
ಬೆಲೆಗೊಟ್ಟು ತಾರ ಮಧುವಂ
ಮಲೆಯಾನಿಲಂ ಮನೋಜನಂ, ಕೌಮುದಿಯುಂ,

ಎಂದು ಸವಾಲು ಹಾಕಿದ್ದಾನೆ.

ನೇಮಿಚಂದ್ರನ ಸಮಕಾಲೀನನೂ ಎರಡನೆಯ ಬಲ್ಲಾಳನ ಮಂತ್ರಿಗಳಲ್ಲೊಬ್ಬನಾದ ಚಂದ್ರಮೌಳಿಯ ಆಶ್ರಿತನೂ ಆಗಿದ್ದ ರುದ್ರಭಟ್ಟನು 'ಜಗನ್ನಾಥ ವಿಜಯ'ದ ಕರ್ತೃ. ಜಗನ್ನಾಥ ಚರಿತ್ರೆಯು ಶ್ರೀ ಕೃಷ್ಣನ ಜೀವನ ವೃತ್ತಾಂತವನ್ನು ಒಳಗೊಂಡಿದೆ. ವೈದಿಕ ಪುರಾಣವೊಂದನ್ನು ಕನ್ನಡ ಕಾವ್ಯರೂಪವಾಗಿ ಬಟ್ಟೆ ಇಳಿಸಿದವರಲ್ಲಿ ಇವನು ಆದ್ಯ ಪ್ರವರ್ತಕನೆನ್ನಲಾಗಿದೆ.

ಹೊಯ್ಸಳರ ಕಾಲದ ಕವಿಗಳಲ್ಲಿ ಅತ್ಯಂತ ಪ್ರಮುಖನಾದ ಜನ್ನನು 'ಯಶೋಧರ ಚರಿತೆ' ಮತ್ತು 'ಅನಂತ ಪುರಾಣ'ಗಳನ್ನು ಬರೆದಿದ್ದಾನೆ. ಅವನ ಕೃತಿಗಳು ಲೋಕೋತ್ತರ ಪ್ರತಿಭೆ ಮತ್ತು ಕಲ್ಪನಾಶಕ್ತಿಗಳ ಸಂಕೇತವಾಗಿವೆ. ಕವಿ ಚಕ್ರವರ್ತಿ ಎಂಬ ಪ್ರಶಸ್ತಿಯನ್ನು ಪಡೆದ ಜನ್ನ ಅಥವಾ ಜನಾರ್ಧನ ದೇವನು ಎರಡನೆಯ ಬಲ್ಲಾಳನ ಆಸ್ಥಾನವನ್ನು ಅಲಂಕರಿಸಿದ್ದನು. ಕವಿ ತನ್ನ ಕಾವ್ಯವನ್ನು 'ಬಾಳ ಬಟ್ಟೆಯ ಪರಮಾಗಮ' ಎಂದು ಬಣ್ಣಿಸಿದ್ದಾನೆ. 'ಯಶೋಧರ ಚರಿತೆ'ಯು ಹಿಂಸೆಯ ದುಷ್ಫಲ ಮತ್ತು

ಅಹಿಂಸೆಯ ಸತ್ಫಲವನ್ನು ಎತ್ತಿ ಜೀವದಯೆಯ ಮಹತ್ವವನ್ನು ತಿಳಿಸಿ ಕೊಡುವ ಜೈನ ಧಾರ್ಮಿಕ ಕಥೆ ಎಂಬುದಾಗಿ ಶ್ರೀ ರಂ. ಶ್ರೀ ಮುಗಳಿ ಬರೆದಿದ್ದಾರೆ. 'ಅನಂತ ಪುರಾಣ'ವೆಂಬುದು ತೀರ್ಥಂಕರನೊಬ್ಬನ ಜೀವನ ಚರಿತ್ರೆಯಾಗಿದೆ.

ಜನ್ನನ ಭಾವನಾದ ಮಲ್ಲಿಕಾರ್ಜುನನು 'ಸೂಕ್ತಿ ಸುಧಾರ್ಣವ' ವನ್ನು ಬರೆದನು. ಮಲ್ಲಿಕಾರ್ಜನನ ಪುತ್ರನೇ ಸುಪ್ರಸಿದ್ಧ ವೈಯಾಕರಣಿಯಾದ ಕೇಶಿರಾಜ. ಅವನು 'ಶಬ್ದಮಣಿ ದರ್ಪಣ'ದ ಕರ್ತೃವಾಗಿದ್ದಾನೆ.

ಎರಡನೆಯ ನರಸಿಂಹನ ಮಹಾಪ್ರಧಾನನಾದ ಪೋಲಾಳ್ವದೇವನು 'ಹರ ಚರಿತೆ' ಎಂಬುದನ್ನು ಷಟ್ಪದಿಯಲ್ಲಿ ರಚಿಸಿದನು.

ಆಚಣ್ಣನೆಂಬುವನು ತನ್ನ ತಂದೆ ಅರ್ಧದಷ್ಟು ಬರೆದಿದ್ದ ವರ್ಧಮಾನ ಪುರಾಣವನ್ನು ವಿಸ್ತರಿಸಿ, ಮುಗಿಸಿದುದಲ್ಲದೆ 'ಶ್ರೀಪದಾಶೀತಿ' ಎಂಬ ಮತ್ತೊಂದು ಗ್ರಂಥವನ್ನೂ ಬರೆದನು.

ಎರಡನೆಯ ಬಲ್ಲಾಳನ ಕಾಲದಲ್ಲಿದ್ದ ಬುಚಿರಾಜ, ಸೋಮನಾಥ ಪಂಡಿತ, ಚಿದಾನಂದ ಕವಿ, ದಶಕೀರ್ತಿದೇವರು ಮುಂತಾದವರು ಶಾಸನಗಳನ್ನು ರಚಿಸುತ್ತಿದ್ದ ಕವಿಗಳಲ್ಲಿ ಉಲ್ಲೇಖನಾರ್ಹರು.

ಸಂಸ್ಕೃತ ಸಾಹಿತ್ಯ

ಹೊಯ್ಸಳ ರಾಜ್ಯದಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳಿಗೆ ಅಪಾರ ಪ್ರೋತ್ಸಾಹವಿದ್ದಿತು. ವಂಶಪಾರಂಪರ್ಯವಾಗಿ ಬಂದಿದ್ದ ಒಂದು ಕುಟುಂಬದ ಕವಿಗಳು ಹೊಯ್ಸಳರ ಆಸ್ಥಾನದಲ್ಲಿ 'ವಿದ್ಯಾ ಚಕ್ರವರ್ತಿ' ಎಂಬ ಸ್ಥಾನವನ್ನು ಅಲಂಕರಿಸಿದ್ದರೆಂದೂ ಆದರೆ ಅವರುಗಳ ಹೆಸರುಗಳು ತಿಳಿಯದೆಂದೂ ಡಾ|| ಕೆ. ಎ. ನೀಲಕಂಠಶಾಸ್ತ್ರಿಗಳು ಬರೆದಿದ್ದಾರೆ. 13 ನೇ ಶತಮಾನದ ಆದಿಯಲ್ಲಿ ವೀರನರಸಿಂಹನಿಗೂ ಪಾಂಡ್ಯರಿಗೂ ನಡೆದ ಸಮರದ ಬಗ್ಗೆ ಕವಿಯೊಬ್ಬನು 'ಗದ್ಯ ಕರ್ಣಾಮೃತ' ಎಂಬ ಗ್ರಂಥವನ್ನು ಬರೆದನು.

ಮೂರನೆಯ ಬಲ್ಲಾಳನ ಕಾಲದಲ್ಲಿ ಮತ್ತೊಬ್ಬ ವಿದ್ಯಾ ಚಕ್ರ ವರ್ತಿಯು 'ರುಕ್ಮಿಣಿ ಕಲ್ಯಾಣ'ವೆಂಬ ಮಹಾ ಕಾವ್ಯವನ್ನು ರಚಿಸಿದುದಲ್ಲದೆ 'ಅಲಂಕಾರ ಸರ್ವಸ್ವ' ಮತ್ತು 'ಕಾವ್ಯ ಪ್ರಕಾಶ' ಎಂಬ ಶಾಸ್ತ್ರೀಯ ಗ್ರಂಥಗಳ ಮೇಲೆ ವ್ಯಾಖ್ಯಾನಗಳನ್ನು ಬರೆದನು.

ತ್ರಿವಿಕ್ರಮ ಪಂಡಿತನು 'ಉಷಾಹರಣ'ವೆಂಬ ಕವಿತೆ, ನಾರಾಯಣ ಪಂಡಿತನ 'ಮಾಧ್ವ ವಿಜಯ,' 'ಮಣಿಮಂಜರಿ', 'ಪಾರಿಜಾತ ಹರಣ' ಎಂಬ ಪದ್ಯ ಸಾಹಿತ್ಯವೂ ಉಲ್ಲೇಖನಾರ್ಹವು. ಈ ಮೇಲ್ಕಂಡ ಕೃತಿಗಳನ್ನೆಲ್ಲಾ ಲೌಕಿಕ ಸಾಹಿತ್ಯವೆನ್ನಬಹುದು.

ಹೊಯ್ಸಳರ ಕಾಲದ ಧಾರ್ಮಿಕ ಸಾಹಿತ್ಯಕ್ಕೆ ಶ್ರೀ ರಾಮನುಜಾ-ಚಾರ್ಯರೂ ಮಧ್ವಾಚಾರ್ಯರೂ ಅಮೂಲ್ಯ ಕಾಣಿಕೆಗಳನ್ನಿತ್ತರು.

ಶ್ರೀರಾಮಾನುಜಾಚಾರ್ಯರು 'ಬ್ರಹ್ಮಸೂತ್ರ' ಮತ್ತು 'ಭಗವ-ದ್ಗೀತೆ' ಗಳ ಮೇಲೆ ಭಾಷ್ಯಗಳನ್ನು ಬರೆದರು. 'ವೇದಾರ್ಥ ಸಂಗ್ರಹ', 'ವೇದಾಂತ ಸಾರ', 'ವೇದಾಂತ ದೀಪ' ಮುಂತಾದ ಟೀಕಾ ಗ್ರಂಥಗಳೂ ಅವರಿಂದ ರಚಿಸಲ್ಪಟ್ಟವು.

ಶ್ರೀ ಮಧ್ವಾಚಾರ್ಯರು 'ಋಗ್ಭಾಷ್ಯ' ವನ್ನೂ 'ಸದಾಚಾರ ಸ್ಮೃತಿ', 'ತಂತ್ರಸಾರ', ದ್ವಾದಶ ಸ್ತೋತ್ರ ಕೃಷ್ಣಾಮೃತ ಹರ್ಣವ ಎಂಬ ಗ್ರಂಥಗಳನ್ನೂ ರಚಿಸಿದರು. ಶ್ರೀಮಧ್ವರು ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೂ ವ್ಯಾಖ್ಯಾನಗಳನ್ನು ಬರೆದರು.

ಪರಾಶರಭಟ್ಟರ 'ಶ್ರೀಗುಣರತ್ನ ಕೋಶ', ರಾಮ ಮಿಶ್ರ ದೇಶಿಕರ 'ಶ್ರೀ ಭಾಷ್ಯಾ ವಿವೃತಿ', ವತ್ಸವರದರ 'ತತ್ವಸಾರ', ವರದ ನಾರಾಯಣ ಭಟ್ಟಾರಕರ 'ಪ್ರಜ್ಞ ಪರಿತ್ರಾಣ', ಪರಾಶರರ 'ತತ್ವ ರತ್ನಾಕರ', ವಿಷ್ಣುಚಿತ್ತರ 'ಪ್ರಮೇಯ ಸಂಗ್ರಹ ಸಂಗತಿ ಮಾಲಾ' ಎಂಬುವೂ ಹೊಯ್ಸಳರ ಕಾಲದಲ್ಲಿ ಬರೆಯಲ್ಪಟ್ಟವು.

ಆನಂದ ಬೋಧ ಭಟ್ಟಾಚಾರ್ಯ, ಗಂಗಾಪುರ ಭಟ್ಟಾರಕ, ಅಖಂಡಾನಂದ, ವಾದೀಂದ್ರ, ಭುವನ ಸುಂದರ ಸೂರಿ, ಮತ್ತು ಶಂಕರಾನಂದರು ಅದ್ವೈತ ತತ್ವವನ್ನು ಪ್ರತಿಪಾದಿಸುವ ಗ್ರಂಥಗಳನ್ನು ಬರೆದರು.

ಜೈನ ವಿದ್ವಾಂಸನಾದ ಬಾಲಚಂದ್ರನು 'ಶರ ಚತುಷ್ಟಯು' ಎಂಬ ಗ್ರಂಥದ ಮೇಲೆ ಭಾಷ್ಯವನ್ನು ಬರೆದನು. ರಾಮಚಂದ್ರ ಮಾಲಾಧಾರಿ ಎಂಬಾತನು 'ಗುರು ಪಂಚಸ್ಮೃತಿ' ಯನ್ನು ರಚಿಸಿದನು.

ವೇದಾಂತ ದೇಶಿಕರ ಸೋದರ ಮಾವನಿಂದ ಅನೇಕ ದಾರ್ಶನಿಕ ಗ್ರಂಥಗಳು ಬರೆಯಲ್ಪಟ್ಟವು. ಇತರ ಗ್ರಂಥ ಕರ್ತರಲ್ಲಿ ಕಲ್ಯಾಣಿದೇವಿ, ಶಂಕರಾಚಾರ್ಯ (ತ್ರಿವಿಕ್ರಮ ಪಂಡಿತನ ತಮ್ಮ), ತ್ರಿವಿಕ್ರಮಾರ್ಯದಾಸ, ಪದ್ಮನಾಭ ತೀರ್ಥರು ಉಲ್ಲೇಖನಾರ್ಹರು.

೮. ಹೊಯ್ಸಳರ ಕಲಾಪ್ರೇಮ

ಹೊಯ್ಸಳ ರಾಜ್ಯವು ಲಲಿತ ಕಲೆಗಳು ಹಾಗೂ ವಾಸ್ತು ಶಿಲ್ಪಕಲೆಗೆ ತೌರುಮನೆಯಂತಿದ್ದಿತು. ಸಂಗೀತ, ನೃತ್ಯ ವರ್ಣಚಿತ್ರ, ಮೂರ್ತಿಶಿಲ್ಪ ಮುಂತಾದುವುಗಳಲ್ಲಿ ಪ್ರತಿಭಾನ್ವಿತರಾಗಿದ್ದವರು ಇದ್ದರೆಂದು ಸುಲಭವಾಗಿ ಊಹಿಸಬಹುದು. ಅನೇಕ ಹೊಯ್ಸಳ ರಾಣಿಯರು ಸಂಗೀತ, ನೃತ್ಯ ಗಳಲ್ಲಿ ಪ್ರವೀಣೆಯರಾಗಿದ್ದರು. ಚಿರಘಟ್ಟ ಎಂಬ ವಿಖ್ಯಾತ ಚಿತ್ರಗಾರನಿದ್ದ ಸಂಗತಿಯನ್ನು ರುದ್ರಭಟ್ಟ ಮುಂತಾದ ಕವಿಗಳ ಕಾವ್ಯಕೃತಿಗಳಿಂದ ತಿಳಿಯ ಬಹುದು. ಹನ್ನೆರಡನೆಯ ಶತಮಾನದಲ್ಲಿದ್ದ ಕಲಾವಿದನೊರ್ವನು ಒಂದೇ ಓಲೆಗರಿಯ ಮೇಲೆ ವಿರಾಟ ಪರ್ವದಲ್ಲಿನ ಇಡೀ ಗೋ ಅಪಹರಣ ಪ್ರಕರಣ ವನ್ನು ಕುರಿತು ಬರೆದು ಸರ್ವರ ಮೆಚ್ಚುಗೆಗೂ ಪಾತ್ರನಾದನೆಂದು ಹೇಳ ಲಾಗಿದೆ. ಹೊಯ್ಸಳರ ಶಿಲ್ಪಕಲೆಯಂತೂ ಇಂದಿಗೂ ಜಗದ್ವಿಖ್ಯಾತ ವಾಗಿದೆ.

ಬೇಲೂರು, ಹಳೇಬೀಡು, ಸೋಮನಾಥಪುರ, ತಲಕಾಡು, ಸೋಸೆ ವೂರು, ದೊಡ್ಡಗದ್ದವಳ್ಳಿ, ಕೋರಮಂಗಲ, ಅಮೃತಪುರ, ಅರಸೀಕೆರೆ, ಹಾರನಹಳ್ಳಿ, ಗೋವಿಂದನಹಳ್ಳಿ, ನುಗ್ಗೀಹಳ್ಳಿ, ತುರುವೇಕೆರೆ, ಸೆಟ್ಟಿಕೆರೆ, ಜಾವಗಲ್, ಬಸರಾಳು, ಅನೆಕೊಂಡ ಮುಂತಾದ ಊರುಗಳಲ್ಲಿರುವ ದೇವಾಲಯಗಳು ಹೊಯ್ಸಳ ಶೈಲಿಯ ಶಿಲ್ಪಕಲೆಗೆ ಚಿರಸ್ಮಾರಕವೆನಿಸಿವೆ.

ಹೊಯ್ಸಳ ಶೈಲಿಯ ದೇವಾಲಯಗಳು ಸಾಮಾನ್ಯವಾಗಿ ಜಗಲಿ ಮಾದರಿಯ ವೇದಿಕೆಯ ಮೇಲೆ ನಕ್ಷತ್ರಾಕಾರವಾಗಿ ನಿರ್ಮಿಸಲ್ಪಟ್ಟಿವೆ. ಕಟ್ಟಡದ ರಚನೆಗಾಗಿ ನುಣುಪಾದ ಕಪ್ಪುಬಣ್ಣದ ಬಳಪದ ಕಲ್ಲುಗಳನ್ನು ಬಳಸಲಾಗಿದೆ. ಆದರಿಂದಾಗಿ ಗೋಡೆಗಳ ಮೇಲೆ ಸೂಕ್ಷ್ಮವಾದ ಕುಸುರಿ ಕೆಲಸ ಮಾಡಲು ಸಾಧ್ಯವಾಯಿತು. ಸಾಮಾನ್ಯವಾಗಿ ಹೊಯ್ಸಳರ ಕಾಲದ

ದೇವಾಲಯುಗಳಲ್ಲಿ ಗೋಡೆಗಳಿಂದ ಸುತ್ತುವರೆಯಲ್ಪಟ್ಟ ಕೇಂದ್ರ ಕಟ್ಟಡವೂ ಅನೇಕ ಗೂಡುಗಳೂ ಕಂಬಗಳಿಂದ ಕೂಡಿದ ಪಡಸಾಲೆ ಅಥವಾ ಹಜಾರವೂ ಇವೆ. ಒಂದೇ ದೇವಾಲಯವು ಅನೇಕ ಗುಡಿಗಳನ್ನು ಒಳಗೊಂಡಿರುವುದೂ ಉಂಟು. ಶಿಲ್ಪಿಗಳು ವಿಗ್ರಹಗಳ ಮೇಲೆ ತಮ್ಮ ಹೆಸರುಗಳನ್ನು ಕೆತ್ತಿರುವುದೂ ಹೊಯ್ಸಳರ ಕಾಲದ ವೈಶಿಷ್ಟ್ಯವಾಗಿದೆ.

ಬೇಲೂರು, ಹಳೇಬೀಡುಗಳಲ್ಲಿನ ದೇವಾಲಯುಗಳಲ್ಲಿರುವಷ್ಟು ಕುಸುರಿನ ಕೆಲಸವು ಪ್ರಪಂಚದಲ್ಲಿನ ಬೇರೆ ಯಾವ ಗುಡಿಯಲ್ಲಿಯೂ ಕಂಡು ಬರುವುದಿಲ್ಲವೆಂದು ಆದಿಯ ಪ್ರಾಕ್ತ ಸಂಶೋಧನಾ ನಿಪುಣರಲ್ಲೊಬ್ಬನಾದ ಡಾ|| ಜೇಮ್ಸ್ ಫರ್ಗುಸನ್ ಬರೆದಿದ್ದಾನೆ.

ಬಳ್ಳಿಗಾವೆಯಲ್ಲಿರುವ ತ್ರಿಕೂಟಾಚಲ ಮಾದರಿಯ ದೇವಾಲಯುವಾದ ಕೇದಾರೇಶ್ವರ ದೇವಾಲಯುದ ಗೋಪುರಗಳ ಮೇಲೆ ನಿರ್ಮಿಸಿರುವ ವಿಗ್ರಹಗಳು ಹೊಯ್ಸಳ ಶಿಲ್ಪ ಸೌಂದರ್ಯಕ್ಕೆ ಮೂಲಭೂತವಾಗಿವೆ.

ಸೊಸೆವೂರಿನ ವಾಸಂತಿಕಾ ದೇವಾಲಯದ ಸಪ್ತ ಮಾತೃಕೆಯರು, ಕೇಶವ ವಿಗ್ರಹ, ಯಕ್ಷಣಿಯ ಮೂರ್ತಿಗಳು ಹೊಯ್ಸಳ ಶೈಲಿಯ ಮೊತ್ತ ಮೊದಲಿನ ಶಿಲ್ಪ ಕೃತಿಗಳಿಗೆ ನಿದರ್ಶನಗಳಾಗಿವೆ.

ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿಯ ದೇವಾಲಯವು ಪ್ರಾರಂಭದ ಹೊಯ್ಸಳ ವಾಸ್ತು ಶಿಲ್ಪಕಲೆಗೆ ಮಾದರಿಯೆನ್ನಬಹುದು.

ಬೇಲೂರು, ಹಳೇಬೀಡು, ಸೋಮನಾಥಪುರ, ಬಸರಾಳು ಮತ್ತು ಕೋರಮಂಗಲಗಳಲ್ಲಿರುವ ದೇವಾಲಯುಗಳು ತಮ್ಮ ಅನುಪಮ ಲಾವಣ್ಯದಿಂದ ಕಲಾಪ್ರೇಮಿಗಳ ಹೃದಯುಗಳನ್ನು ಸೂರೆಗೊಳ್ಳುತ್ತಿವೆ. ಆದ್ದರಿಂದ ಅವುಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕೊಡುವುದು ಸೂಕ್ತವಾಗಿದೆ.

ಬೇಲೂರು

ಬೇಲೂರಿನ ವಿಜಯ ನಾರಾಯಣ ಅಥವಾ ಚೆನ್ನಕೇಶವ ದೇವಾಲಯವು ಹೊಯ್ಸಳ ಶಿಲ್ಪಕಲೆಯ ಭಂಡಾರದಂತಿದೆ. ತಲಕಾಡಿನಲ್ಲಿದ್ದ

ಚೋಳರ ಮೇಲಿನ ವಿಜಯದ ಸಂಕೇತವಾಗಿ ಕ್ರಿ. ಶ. 1117 ರಲ್ಲಿ ವಿಷ್ಣು ವರ್ಧನನು ಈ ಭವ್ಯ ದೇಗುಲವನ್ನು ಕಟ್ಟಿಸಿದನು. ಅದೇ ದುರ್ಮುಖಿ ನಾಮ ಸಂವತ್ಸರದಲ್ಲಿ ಅವನು ರಾಮಾನುಜಾಚಾರ್ಯರಿಂದ ತಪ್ತ ಮುದ್ರೆ ಯನ್ನು ಸ್ವೀಕರಿಸಿ, ವೈಷ್ಣವ ಧರ್ಮವನ್ನು ಅವಲಂಬಿಸಿದ ಸ್ಮಾರಕವಾಗಿಯೂ ಅದನ್ನು ನಿರ್ಮಿಸಿರಬಹುದು. ಅದರಲ್ಲಿನ ಮೂಲ ಮೂರ್ತಿಗೆ ವಿಜಯ ನಾರಾಯಣನೆಂದು ನಾಮಕರಣ ಮಾಡಲಾಯಿತು. ಅದೇ ಇಸವಿಯ ಹೇವಿಳಂಬಿ ನಾಮ ಸಂವತ್ಸರದ ಚೈತ್ರ ಶುದ್ಧ ಪಂಚಮಿಯ ದಿನ ದೇವರ ನಿತ್ಯ ನೈಮಿತ್ತಿಕ ದಿವ್ಯಾಂಗ ಭೋಗ ತ್ರಿಕಾಲ ನೈವೇದ್ಯ ಮುಂತಾದುವು ಗಳಿಗಾಗಿ ಅರಸನು ಹಲವು ಗ್ರಾಮಗಳನ್ನು ದಾನಮಾಡಿದನು.

ದಾಸೋಜ, ಚಾವನ, ಚಿಕ್ಕ ಹಂಪ, ಮಲ್ಲಿಯಣ್ಣ, ಪದರಿ ಮಲ್ಲೋಜ, ನಾಗೋಜ, ಕೇಶವದೇವ, ಪೂಯಿನ, ಮಲ್ಲತಮ್ಮ ಮುಂತಾದ ಶಿಲ್ಪಿಗಳು ತಮ್ಮ ಕೈಚಳಕದಿಂದ ನಯನ ಮನೋಹರವಾದ ಶಿಲ್ಪ ಕಲಾಕೃತಿಗಳನ್ನು ಸೃಷ್ಟಿಸಿರುವರು.

178 ಅಡಿ ಉದ್ದ, 156 ಅಡಿ ಅಗಲ ಮತ್ತು ನಾಲ್ಕು ಅಡಿ ಎತ್ತರದ ಜಗಲಿಯ ಮೇಲೆ ಕಟ್ಟಲ್ಪಟ್ಟಿರುವ ಶ್ರೀ ಚೆನ್ನಕೇಶವ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ ಎಂಬ ಮೂರು ಭಾಗಗಳಿವೆ. ಗರ್ಭ ಗೃಹ ನಕ್ಷತ್ರಾಕಾರವಾಗಿದೆ. ಅದನ್ನು ಬಳಪದ ಕಲ್ಲಿನಿಂದ ಕಟ್ಟಿರುವರು. ನವರಂಗದ ದ್ವಾರಗಳ ಪಕ್ಕಗಳಲ್ಲಿ ಸಳನು ಹುಲಿಯನ್ನು ತಿವಿಯುತ್ತಿರುವ ದೃಶ್ಯದ ಶಿಲಾವಿಗ್ರಹಗಳನ್ನು ನೋಡಬಹುದು. ನವರಂಗದ ಗೋಡೆಯ ಮೇಲೆ ಹೊರಗಡೆ ಸುಕನಾಸಿಯ ವರೆಗೆ ಎಂಟು ಸಾಲು ಚಿತ್ರ ಪಟ್ಟಿಕೆಗಳಿವೆ. ಕಟಾಂಜನದ ಮೇಲೆ ಕೊರೆದು ರಂಧ್ರ ಮಾಡಿದ ಜಾಲಂದ್ರಗಳಲ್ಲಿ ಹೂ, ಬಳ್ಳಿ, ಕ್ಷೀರಸಾಗರ ತೀರ್ಥ, ವಾಮನಾವತಾರ, ಕಾಳಿಂಗಮರ್ದನ, ವಿಷ್ಣು ವರ್ಧನನ ಆಸ್ಥಾನ, ಹಿರಣ್ಯಕಶಿಪು ಸಂಹಾರ ಮುಂತಾದುವುಗಳನ್ನು ಕೆತ್ತ ಲಾಗಿದೆ. ಎಲ್ಲಕ್ಕಿಂತಲೂ ವಿಶೇಷವೆಂದರೆ ಸೂರಿಗೆ ಊರೆಯಾಗಿ ಕೆತ್ತಲ್ಪಟ್ಟಿ ರುವ ಮದನಿಕಾಪ್ರತಿಮೆಗಳು. ಅವುಗಳ ಸಂಖ್ಯೆ ಮೂವತ್ತೆಂಟು. ಇವುಗಳನ್ನು ಶಿಲಾಬಾಲಕಿಯರೆಂದೂ ಕರೆಯುವರು. ನವರಂಗದಲ್ಲೂ ಈ ಮಾದರಿಯ

ನಾಲ್ಕು ವಿಗ್ರಹಗಳಿವೆ. ಮದನಿಕಾ ಪ್ರತಿಮೆಗಳು ನರ್ತಿಸುವ, ವಾದ್ಯವನ್ನು ಬಾರಿಸುವ, ಅಲಂಕಾರ ಮಾಡಿಕೊಳ್ಳುತ್ತಿರುವ, ಬೇಟೆಯಾಡುತ್ತಿರುವ ಇತ್ಯಾದಿ ಭಂಗಿಗಳಲ್ಲಿವೆ. ನವರಂಗದಲ್ಲಿರುವ ಸುಖಹಾಸಿನಿ, ನಾಟ್ಯ ಸರಸ್ವತಿ ಮುಂತಾದ ಮದನಿಕಾ ವಿಗ್ರಹಗಳು ಉಲ್ಲೇಖಾರ್ಹವಾಗಿವೆ.

ನವರಂಗದ ಮಂಟಪದಲ್ಲಿ ಸುಂದರ ಹಾಗೂ ಸುವಿಸ್ತಾರವಾಗಿ ಕೆತ್ತಲ್ಪಟ್ಟಿರುವ ಕಂಬಗಳಿವೆ. ಇವುಗಳ ಪೈಕಿ ನರಸಿಂಹ ಕಂಬ ಮತ್ತು ಮೋಹಿನಿ ಕಂಬ ಎಂಬುವು ಕಣ್ಣಿಗೆ ಹಬ್ಬವಾಗಿವೆ. ನರಸಿಂಹ ಕಂಬದ ಮೇಲೆ ಕಡಲೆ ಕಾಳಿನ ಗಾತ್ರದ "ಕಡಲೆ ಬಸವಣ್ಣ" ಇದೆ. ನವರಂಗದ ದ್ವಾರಗಳ ಮುಂಭಾಗದಲ್ಲಿರುವ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳನ್ನು ನೋಡಬಹುದು. ಚೆನ್ನಕೇಶವ ದೇವಾಲಯದ ಮುಂಭಾಗದ ತಳಪಾಯದ ಮೇಲೆ ಆನೆಗಳ ಸಾಲನ್ನೂ ರಾಮಾಯಣ, ಮಹಾಭಾರತಗಳಿಂದಾಯ್ದ ಘಟನೆಗಳ ದೃಶ್ಯಗಳನ್ನೂ ಅತ್ಯಂತ ಸೂಕ್ಷ್ಮವಾಗಿ ಕೊರೆದಿರುವರು.

ಚೆನ್ನಕೇಶವನ ವಿಗ್ರಹವೇ ಒಂದು ಮಹೋನ್ನತ ಕಲಾಕೃತಿಯಾಗಿದೆ. ಆರಡಿ ಎತ್ತರದ ಆ ಕಮನೀಯ ವಿಗ್ರಹವು ಮೂರಡಿ ಎತ್ತರದ ಪೀಠದ ಮೇಲೆ ನಿಂತಿದೆ. ಶಂಖ, ಚಕ್ರ, ಗದಾಪದ್ಮಧಾರಿಯಾದ ಆ ಹಸನ್ಮುಖಿ ವಿಗ್ರಹದ ಎರಡು ಪಾರ್ಶ್ವಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದಾರೆ.

ರಾಣಿ ಶಾಂತಲಾದೇವಿಯಿಂದ ಕಟ್ಟಿಸಲ್ಪಟ್ಟಿರುವ ಕಪ್ಪೆಚೆನ್ನಿಗರಾಯನ ದೇವಾಲಯವು ಒಂದು ನವರಂಗವನ್ನೂ ಎರಡು ಗರ್ಭಗೃಹಗಳನ್ನೂ ಒಳಗೊಂಡಿದೆ. ಈ ದೇವಾಲಯದಲ್ಲಿರುವ ಭುವನೇಶ್ವರಿಗಳನ್ನು ಸೊಗಸಾಗಿ ಕೆತ್ತಲಾಗಿದೆ. ಈ ದೇವಸ್ಥಾನದ ಒಂದು ಗೂಡಿನಲ್ಲಿರುವ ಮಹಿಷಾಸುರಿ ವಿಗ್ರಹವು ಅತ್ಯಂತ ಚೆಲುವಾಗಿದೆ. ವೀರನಾರಾಯಣ ದೇವಾಲಯದ ಮೂಲ ವಿಗ್ರಹವೂ ತುಂಬಾ ಲಕ್ಷಣವಾಗಿದೆ.

ಹಳೆಯಬೀಡು

ಒಂದನೆಯ ನರಸಿಂಹನ ಕಾಲದಲ್ಲಿ ಕಟ್ಟಲ್ಪಟ್ಟ ಹೊಯ್ಸಳೇಶ್ವರನ ದೇವಾಲಯವೂ ಆವನ ಉತ್ತರಾಧಿಕಾರಿಯಾದ ವೀರ ಬಲ್ಲಾಳನ ಕಾಲದಲ್ಲಿ

ನಿರ್ಮಿಸಲ್ಪಟ್ಟ ಕೇದಾರೇಶ್ವರ ದೇವಾಲಯವೂ ಹಳೆಯ ಬೀಡಿನ ದೇವಾಲಯಗಳಲ್ಲಿ ಗಣ್ಯವಾದುವು. ಇಂದಿಗೂ ಅಪೂರ್ಣವಾಗಿಯೇ ಉಳಿದಿರುವ ಹೊಯ್ಸಳೇಶ್ವರನ ದೇವಾಲಯದ ಶಿಲ್ಪ ಸೌಂದರ್ಯವು ವಿಸ್ಮಯಕಾರಿಯಾಗಿದೆ. ಐದಡಿ ಎತ್ತರದ ಜಗಲಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ದೇವಸ್ಥಾನವು ಒಂದು ಜೋಡಿ ಕಟ್ಟಡ. ಆದರಲ್ಲಿ ಒಂದೊಂದು ಕಡೆಗೂ ಒಂದು ಗರ್ಭಗುಡಿ, ಒಂದು ಸುಕನಾಸಿ, ಒಂದು ನವರಂಗ, ಎರಡೆರಡು ದ್ವಾರಗಳು ಇವೆ. ಗರ್ಭಗುಡಿಯು ನಕ್ಷತ್ರಾಕಾರವಾಗಿದೆ. ಗೋಡೆಗಳ ಹೊರಭಾಗದಲ್ಲಿ ಸುತ್ತಲೂ ಒಂದರ ಮೇಲೆ ಒಂದರಂತೆ ಎಂಟು ಸಾಲುಗಳುಳ್ಳ ಚಿತ್ರಪಟ್ಟಿಕೆಯನ್ನು ನೋಡಬಹುದು. ಈ ದೇವಾಲಯದ ನಾನಾಭಾಗಗಳಲ್ಲಿ ಸಾಲು ಸಾಲಾಗಿ ಕೆತ್ತಿರುವ ಆನೆಗಳನ್ನೂ ಕುದುರೆಗಳನ್ನೂ ಸಿಂಹಗಳನ್ನೂ ಹಂಸಗಳನ್ನೂ ಪೌರಾಣಿಕ ಸನ್ನಿವೇಶಗಳ ದೃಶ್ಯಗಳನ್ನೂ ನೋಡಿ ಆನಂದಿಸಬಹುದು. ಪಶ್ಚಿಮ ಗೋಡೆಯಲ್ಲಿ ಅಸಂಖ್ಯಾತ ದೇವತಾ ವಿಗ್ರಹಗಳನ್ನು ಕೊರೆಯಲಾಗಿದೆ ಸೂರ್ಯನಾರಾಯಣ ದೇವಾಲಯದ ಗೋಡೆಯ ಹೊರಮುಖದಲ್ಲಿ ವರಾಹ, ನರಸಿಂಹ, ವೇಣುಗೋಪಾಲ, ತಾಂಡವೇಶ್ವರ, ಗರುಡ, ಸರಸ್ವತಿ, ಮಹಿಷಾಸುರಮರ್ದಿನಿ ಮುಂತಾದ ಅನೇಕ ವಿಗ್ರಹಗಳಿವೆ. ತಟ್ಟೆಯಾಕಾರದ ಭುವನೇಶ್ವರಿಗಳಲ್ಲಿಯೂ ಅನೇಕ ಪ್ರತಿಮೆಗಳನ್ನು ಕಾಣಬಹುದು. ನಂದಿ ಮಂಟಪದಲ್ಲಿರುವ ನಂದಿಗಳು ಬೃಹದಾಕಾರವಾಗಿವೆ.

ದ್ವಾರಸಮುದ್ರ ಕೆರೆಯ ಬಳಿ ನಿಂತಿರುವ ಕೇದಾರೇಶ್ವರ ದೇವಾಲಯವು ಅತ್ಯಂತ ಸುಂದರವಾದುದು. ಪ್ರಕೃತಿಯ ಪ್ರಕೋಪಕ್ಕೂ ಪ್ರಾಯಶಃ ಮುಸ್ಲಿಂ ದಾಳಿಕಾರರ ಆಗ್ರಹಕ್ಕೂ ಈಡಾದ ಈ ದೇವಾಲಯವು ಶಿಥಿಲವಾಗಿದೆ. ಇದೂ ಕೂಡಾ ನಕ್ಷತ್ರಾಕಾರವಾಗಿ ಕಟ್ಟಲ್ಪಟ್ಟಿತ್ತು. ಅತ್ಯಂತ ಸೂಕ್ಷ್ಮವಾದ, ನವಿರಾದ ಕುಸುರಿನ ಕೆಲಸವು ಇಲ್ಲಿನ ಮೂರ್ತಿ ಶಿಲ್ಪಕ್ಕೆ ಅಲೌಕಿಕ ಸೌಂದರ್ಯವನ್ನಿತ್ತಿದೆ. ಮುಖ್ಯ ದ್ವಾರದತ್ತ ತಿರುಗಿ, ನಂದಿಯ ಮೇಲೆ ಕುಳಿತಿರುವ ಶಿವ–ಪಾರ್ವತಿ ವಿಗ್ರಹಗಳು ಲವಲವಿಕೆಯಿಂದ ಕಂಗೊಳಿಸುತ್ತಿವೆ. ಈ ದೇವಾಲಯದಲ್ಲಿನ ನೃತ್ಯ ಮಾಡುತ್ತಿರುವ ಸರಸ್ವತಿ ವಿಗ್ರಹವು ಹರಿಪ ಎಂಬಾತನ ಕೃತಿಯಾಗಿದೆ. ಕೆರೆಯನ್ನು ಎದುರಿಸುತ್ತಿರುವ

ಹಿಂಬಾಗದ ಗೋಡೆಗಳ ಮೇಲೆ ರಾಜ ನರ್ತಕಿಯರನ್ನು ಹೋಲುವ ಸುಂದರ ಪ್ರತಿಮೆಗಳಿವೆ. ಈ ದೇವಾಲಯದಲ್ಲಿರುವ ಮತ್ತೊಂದು ಗಮನಾರ್ಹವಾದ ಕಲಾಕೃತಿಯೆಂದರೆ ಕಾಳಿಂಗ ಮರ್ದನ ಮಾಡುತ್ತಿರುವ ಶ್ರೀಕೃಷ್ಣನ ಶಿಲಾಪ್ರತಿಮೆ.

ಸೋಮನಾಥಪುರ

ಮೂರನೆಯ ನರಸಿಂಹನ ಮಂತ್ರಿಯಾದ ಸೋಮನಿಂದ ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಕಟ್ಟಿಸಲ್ಪಟ್ಟ ಕೇಶವ ದೇವಾಲಯವು ಸುಂದರವಾದ ಕಟ್ಟಡ. ಇಲ್ಲಿ ಮೂರು ಗರ್ಭಗೃಹಗಳಿವೆ. ಸೂಕ್ಷ್ಮವಾದ ಕುಸುರಿನ ಕೆಲಸಕ್ಕೆ ಸೋಮನಾಥಪುರದ ದೇವಾಲಯವು ಪ್ರಸಿದ್ಧವಾಗಿದೆ. ಇದನ್ನು ಬಳಪದ ಕಲ್ಲಿನಿಂದ ನಿರ್ಮಿಸಲಾಗಿದೆ. ಇಲ್ಲಿನ ಮೂರು ಗರ್ಭಗೃಹಗಳೂ ನಕ್ಷತ್ರಾಕಾರವಾಗಿವೆ. ಆದ್ದರಿಂದ ಈ ದೇವಾಲಯವನ್ನು ತ್ರಿಕೂಟಾಚಲವೆನ್ನುವರು.

ಈ ದೇವಸ್ಥಾನವನ್ನು 215 ಅಡಿ ಉದ್ದವೂ 117 ಅಗಲವೂ ಇರುವ ಒಂದು ಅಂಗಳದ ಮಧ್ಯಭಾಗದಲ್ಲಿ ಕಟ್ಟಿದ್ದಾರೆ. ಈ ದೇವಾಲಯದಲ್ಲಿ ಅನೇಕ ಕೈಸಾಲೆ ಮಂಟಪಗಳಿವೆ. ಪ್ರತಿಯೊಂದು ಗರ್ಭಗೃಹದ ಮೇಲೆ ಒಂದು ಶಿಖರವಿದೆ. ಒಂದು ಗರ್ಭಗುಡಿಯಲ್ಲಿ ಜನಾರ್ಧನ ವಿಗ್ರಹವೂ ಮತ್ತೊಂದರಲ್ಲಿ ವೇಣು ಗೋಪಾಲ ವಿಗ್ರಹವೂ ಉಂಟು. ಇವೆರಡೂ ತುಂಬಾ ಮುದ್ದಾಗಿವೆ. ಮತ್ತೊಂದು ಗುಡಿಯಲ್ಲಿರಬೇಕಾಗಿದ್ದ ಕೇಶವ ವಿಗ್ರಹವು ಮಂಗಮಾಯವಾಗಿದೆ.

ಪ್ರತಿಯೊಂದು ಗರ್ಭಗೃಹದ ಮುಂದೆ ಒಂದು ಸುಕನಾಸಿಯಿದೆ. ಮುಖ ಮಂಟಪವು ನವರಂಗಕ್ಕೆ ಅಂಟಿಕೊಂಡಂತಿದೆ. ದೇವಾಲಯದ ಸುತ್ತಲೂ ಇರುವ ಚಿತ್ರ ಪಟ್ಟಿಕೆಯಲ್ಲಿ ಆನೆಗಳು ರಾವುತರು, ಬಳ್ಳಿ, ಮಕರ, ಹಂಸಗಳನ್ನೂ ಪೌರಾಣಿಕ ಸನ್ನಿವೇಶಗಳನ್ನೂ ಸೊಗಸಾಗಿ ಕೆತ್ತಿರುವುದನ್ನು ನೋಡಿ ನಲಿಯಬಹುದು. ಚಿತ್ರ ಪಟ್ಟಿಕೆಯ ಮೇಲೆ ಗರ್ಭಗುಡಿಯ ಸುತ್ತಲೂ ಹೊರಭಾಗದಲ್ಲಿ ಚೆಲುವಾದ ಅನೇಕ ದೊಡ್ಡ ದೊಡ್ಡ ದೇವತಾವಿಗ್ರಹಗಳಿವೆ.

ನವರಂಗ ಮತ್ತು ಮುಖಮಂಟಪಗಳಲ್ಲಿರುವ ಭುವನೇಶ್ವರಿಗಳು ಅರ್ಧಗೋಳಾಕಾರದಲ್ಲಿವೆ. ಅಲ್ಲಿಯೂ ಚಿತ್ರಗಳನ್ನು ಕೊರೆದಿದ್ದಾರೆ. ಗರ್ಭ ಗೃಹ ಮತ್ತು ಸುಕನಾಸಿಯ ಬಾಗಿಲುವಾಡಗಳಲ್ಲಿರುವ ಚಿತ್ರ ಕೆಲಸವೂ ದ್ವಾರಪಾಲಕ ವಿಗ್ರಹಗಳೂ ಉಲ್ಲೇಖನಾರ್ಹವಾದುವು. ಮಧ್ಯದ ಗರ್ಭ ಗೃಹದ ಎರಡು ಪಕ್ಕಗಳಲ್ಲಿರುವ ಗೂಡುಗಳ ಮೇಲಿನ ಗೋಪುರದ ಮೇಲೆ ಗಣಪತಿ, ಮಹಿಷಾಸುರ ಮರ್ದಿನಿ ವಿಗ್ರಹಗಳನ್ನು ವೀಕ್ಷಿಸಬಹುದು.

ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದಲ್ಲೂ ಗೋವಿಂದನ ಹಳ್ಳಿಯ ಪಂಚಲಿಂಗ ದೇವಾಲಯದಲ್ಲೂ ವಿಗ್ರಹಗಳನ್ನು ಕೆತ್ತಿದ ಮಲ್ಲಿ-ತಮ್ಮನಲ್ಲದೆ ಚೌಡಯ್ಯ, ಬಾಲಯ್ಯ, ಮಸಣಿತಮ್ಮ ಮುಂತಾದವರು ಸೋಮನಾಥಪುರದ ದೇವಾಲಯದ ಶಿಲ್ಪಿಗಳಾಗಿದ್ದರು. ಸರಸ್ವತಿಯ ವಿಗ್ರಹ ವನ್ನು ಯಲಮಸಯ ಎಂಬುವನು ಕೆತ್ತಿದನು.

ಬಸರಾಳು

ಮಂಡ್ಯ ಜಿಲ್ಲೆಯಲ್ಲಿರುವ ಬಸರಾಳು ಹೊಯ್ಸಳ ಶೈಲಿಯ ಶಿವದೇವಾ ಲಯದಿಂದಾಗಿ ಪ್ರಖ್ಯಾತವಾಗಿದೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯ ವನ್ನು ಎರಡನೆಯ ನರಸಿಂಹನ ಕಾಲದಲ್ಲಿ ಅಂದರೆ ಕ್ರಿ. ಶ. 1235 ರಲ್ಲಿ ಹರಿಹರ ದಣ್ಣಾಯಕ ಎಂಬ ಉನ್ನತಾಧಿಕಾರಿಯು ಕಟ್ಟಿಸಿದನು. ಮುಂದಿನ ರಾಜರುಗಳೂ ದೇವಾಲಯವನ್ನು ಸಾಕಷ್ಟು ಅಭಿವೃದ್ಧಿಪಡಿಸಿದರು. ಈಗಲೂ ಸುರಕ್ಷಿತವಾಗಿರುವ ಈ ದೇವಾಲಯವು ತ್ರಿಕೂಟಾಚಲ ಮಾದರಿಯಲ್ಲಿದೆ. ಉತ್ತರ ಮತ್ತು ದಕ್ಷಿಣ ದ್ವಾರಗಳಲ್ಲಿ ಎರಡು ಶಿಲಾಗಜಗಳಿವೆ. ದಕ್ಷಿಣ ದ್ವಾರ ದಲ್ಲಿ ಒಂದೇ ಒಂದು ದ್ವಾರಪಾಲಕ ವಿಗ್ರಹವಿದೆ. ಪ್ರಧಾನ ಗರ್ಭಗೃಹದಲ್ಲಿ ಲಿಂಗವಿದೆ. ದಕ್ಷಿಣ ಗರ್ಭಗೃಹದಲ್ಲಿ ಸುಲಕ್ಷಣವಾದ ಸೂರ್ಯವಿಗ್ರಹವೂ ಉತ್ತರ ಗರ್ಭಗೃಹದಲ್ಲಿ ಗರುಡ ಪೀಠವೂ ಇವೆ. ಆದರೆ ಮೊದಲಿದ್ದಿರ ಬಹುದಾದ ವಿಷ್ಣುವಿಗ್ರಹ ಕಾಣೆಯಾಗಿದೆ. ಅದರ ಸ್ಥಾನದಲ್ಲಿ ಸುಂದರ ವಾದ ನಾಗ, ನಾಗಿಣಿಯರನ್ನೊಳಗೊಂಡ ಪ್ರತಿಮೆಯನ್ನಿಡಲಾಗಿದೆ. ಬಾಗಿಲು ವಾಡಗಳಲ್ಲೂ ಚಿತ್ರ ಕೆಲಸವಿದೆ. ಸುಕನಾಸಿಯೂ ಸೊಗಸಾಗಿದೆ. ಸುಕ

ನಾಸಿಯ ಎರಡು ಪಕ್ಕಗಳಲ್ಲಿರುವ ಗೂಡುಗಳಲ್ಲಿ ಗಣಪತಿ ಮತ್ತು ಮಹಿಷಾಸುರ ಮರ್ದಿನಿ ವಿಗ್ರಹಗಳನ್ನು ಕೊರೆಯಲಾಗಿದೆ. ದಕ್ಷಿಣ ಮತ್ತು ಉತ್ತರದಲ್ಲಿ ಎದಿರು-ಬದಿರಾಗಿರುವ ಇನ್ನೆರಡು ಗೂಡುಗಳಲ್ಲಿ ಸುಂದರವಾಗಿ ಕೆತ್ತಲ್ಪಟ್ಟಿರುವ ಸರಸ್ವತಿ ವಿಗ್ರಹವಿದೆ. ದೇವಾಲಯದ ಹೊರಗಿನ ಗೋಡೆಗಳ ಮೇಲೆ ಆನೆಗಳು, ಅಶ್ವಾರೋಹಿಗಳ ಸಾಲುಗಳಿವೆ. ಅವುಗಳ ಮೇಲ್ಭಾಗದಲ್ಲಿ ವಿಶಾಲವಾದ ದೇವತಾ ಪ್ರತಿಮೆಗಳ ಸಾಲುಗಳನ್ನು ನೋಡಬಹುದು. ನಾಟ್ಯ ಪಾರ್ವತಿಯ ಪ್ರತಿಮೆಯಂತೂ ನಯನಮನೋಹರವಾಗಿದೆ. ಗರ್ಭಗೃಹದ ವಿಮಾನದ ಮೇಲೆ ಹೊಯ್ಸಳರ ಲಾಂಛನವಾದ ಸಳನು ಹುಲಿಯನ್ನು ಇರಿಯುತ್ತಿರುವ ದೃಶ್ಯದ ಸುಂದರ ಕಲಾಕೃತಿ ಇದೆ.

ಕೋರಮಂಗಲ

ಹಾಸನಕ್ಕೆ ಈಶಾನ್ಯದಲ್ಲಿ ಎಂಟು ಮೈಲಿ ದೂರದಲ್ಲಿರುವ ಕೋರವಂಗಲ (ಕೋರಮಂಗಲ) ದಲ್ಲಿರುವ ಭೂತೇಶ್ವರ ಅಥವಾ ಬುಚೇಶ್ವರ ದೇವಾಲಯವು ಹೊಯ್ಸಳ ವಾಸ್ತುಶಿಲ್ಪದ ಮತ್ತೊಂದು ಶ್ರೇಷ್ಠ ಕಲಾಕೃತಿಯಾಗಿದೆ. ಒಂದನೆಯ ನರಸಿಂಹನ ಕಾಲದ ಭೂತನಾಥರಾಜ ಅಥವಾ ಬುಚಿರಾಜನೆಂಬ ಬ್ರಾಹ್ಮಣ ಅಧಿಕಾರಿಯು ಅದನ್ನು ಕಟ್ಟಿಸಿ, ವೀರ ಬಲ್ಲಾಳನ ಪಟ್ಟಾಭಿಷೇಕದಂದು ಆ ದೇವರ ಪ್ರತಿಷ್ಠಾಪನೆ ಮಾಡಿಸಿದನು.

ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಎತ್ತರದ ಜಗಲಿಯ ಮೇಲೆ ನಿರ್ಮಿಸಲಾಗಿದೆ. ದೇವಾಲಯವು ಒಂದು ಸೊಗಸಾದ ಮುಖಮಂಟಪ, ಒಂದು ಭವ್ಯವಾದ ನವರಂಗ, ಒಂದು ತೆರೆದ ಸುಕನಾಸಿ ಮತ್ತು ಒಂದು ಗರ್ಭಗೃಹವನ್ನು ಒಳಗೊಂಡಿದೆ. ಪೂರ್ವದಿಕ್ಕಿನಲ್ಲಿ ಸೂರ್ಯನ ಸಣ್ಣ ಗುಡಿಯೊಂದಿದೆ. ಮುಖಮಂಟಪದಲ್ಲಿ ೩೨ ಕಂಬಗಳಿವೆ. ಮಾಳಿಗೆಯ ಒಳಭಾಗದಲ್ಲಿ ತಾವರೆ ಹೂಗಳನ್ನು ಕೊರೆಯಲಾಗಿದೆ. ಅನೇಕ ಕಂಬಗಳಲ್ಲಿಯೂ ಕೆತ್ತನೆಯ ಕೆಲಸವಿದೆ. ದಕ್ಷಿಣ ದ್ವಾರವು ಸುಂದರವಾಗಿ ಕೆತ್ತಲ್ಪಟ್ಟ ಆನೆಗಳಿಂದ ಕಂಗೊಳಿಸುತ್ತಿದೆ. ಸ್ತ್ರೀ ಚಾಮರಧಾರಿಗಳಿಂದ ಕೂಡಿದ ದ್ವಾರಪಾಲಕರನ್ನೂ ನೋಡಬಹುದು. ನವರಂಗದ ಸೂರಿನ ಒಳಭಾಗದಲ್ಲಿಯೂ ಸೊಗಸಾದ ಕೆತ್ತನೆಯ ಕೆಲಸವಿದೆ. ಅಲ್ಲಿರುವ ಕೃಷ್ಣನ

ಅಂದವಾದ ಆಕೃತಿಯು ಉಲ್ಲೇಖನಾರ್ಹವಾಗಿದೆ. ನವರಂಗದ ಬಾಗಿಲ ಮೇಲಿನ ಚೌಕಟ್ಟಿನಲ್ಲಿ ಕೆತ್ತಿರುವ ಗಜಲಕ್ಷ್ಮಿ ಪ್ರತಿಮೆಯೂ ರಮಣೀಯ ವಾಗಿದೆ. ನವರಂಗದ ಬಲಪಾರ್ಶ್ವದಲ್ಲಿರುವ ಗೂಡುಗಳಲ್ಲಿ ಗಣಪತಿ, ಸರಸ್ವತಿ ಸಪ್ತಮಾತೃಕೆಯರ ಸೊಗಸಾದ ವಿಗ್ರಹಗಳನ್ನು ಕೆತ್ತಲಾಗಿದೆ. ಗರ್ಭಗೃಹ ಮತ್ತು ಸುಕನಾಸಿಗಳ ಮಾಳಿಗೆಯ ಒಳಮೈಯಲ್ಲೂ ಕಮಲ ಗಳನ್ನು ಬಿಡಿಸಲಾಗಿದೆ. ಗರ್ಭಗೃಹದಲ್ಲಿ ಬೃಹದಾಕಾರದ ಕಪ್ಪು ಕಲ್ಲಿನ ಲಿಂಗವಿದೆ. ಗರ್ಭಗೃಹಕ್ಕೆ ಸೇರಿದ ವಿಮಾನದಲ್ಲಿ ಐರಾವತಾರೂಢನಾದ ಇಂದ್ರನನ್ನೂ ತಾಂಡವೇಶ್ವರನನ್ನೂ ಹುಲಿಯನ್ನು ತಿವಿಯುತ್ತಿರುವ ಸಳ ನನ್ನೂ ಅಪೂರ್ವ ಕೌಶಲದಿಂದ ಕೆತ್ತಲಾಗಿದೆ. ಈ ದೇವಾಲಯದ ಗೋಡೆ ಗಳ ಒಳ ಹಾಗೂ ಹೊರಭಾಗಗಳು ಶಿಲ್ಪಿಗಳ ಪ್ರತಿಭೆಗೆ ದ್ಯೋತಕವಾಗಿವೆ.

ಸೂರ್ಯ ಮಂದಿರದ ಸೂರಿನ ಒಳಭಾಗದಲ್ಲೂ ಒಂಭತ್ತು ತಾವರೆ ಹೂಗಳನ್ನು ಕೆತ್ತಲಾಗಿದೆ. ಸಪ್ತಾಶ್ವಗಳಿಂದಲೂ ಸಾರಥಿಯಾದ ಅರುಣ ನಿಂದಲೂ ಕೂಡಿದ ಸೂರ್ಯನ ವಿಗ್ರಹವು ಐದು ಅಡಿಗಳ ಅನುಪಮ ಕಲಾ ಕೃತಿಯಾಗಿದೆ. ಸೂರ್ಯನ ಗುಡಿಯ ಬಾಹ್ಯ ಗೋಡೆಗಳ ಮೇಲೆ ಕೆತ್ತಿ ರುವ ಆಕೃತಿಗಳಲ್ಲಿ ಷೋಡಶ ಹಸ್ತಗಳ ನಾಟ್ಯ ಗಣಪತಿಯು ಅಪೂರ್ವ ಮಾದರಿಯಾಗಿದೆ.

ಹೊಯ್ಸಳ ಸಾಮ್ರಾಜ್ಯವು ಆರು ಶತಮಾನಗಳ ಹಿಂದೆಯೇ ಹೇಳ ಹೆಸರಿಲ್ಲದಂತಾದರೂ ಬೇಲೂರು, ಹಳೇಬೀಡು, ಸೋಮನಾಥಪುರ ಬಸ ರಾಳು, ಕೋರಮಂಗಲ ಮುಂತಾದ ಊರುಗಳಲ್ಲಿರುವ ಸುಂದರವಾದ ದೇವಾಲಯುಗಳು ಆ ಸಾಮ್ರಾಜ್ಯದ ವೈಭವದ ಸಂಕೇತವಾಗಿ ಇಂದಿಗೂ ಸಹಸ್ರಾರು ಪ್ರವಾಸಿಗರ ಕಣ್ಮನಗಳಿಗೆ ಅನಿರ್ವಚನೀಯವಾದ ಆನಂದವನ್ನು ನೀಡುತ್ತಿವೆ. ಕನ್ನಡ ನಾಡಿನ ಇತಿಹಾಸದ ಉಜ್ವಲ ಅಧ್ಯಾಯವೊಂದನ್ನು ಆ ಅಮರ ಶಿಲ್ಪಕಲಾಕೃತಿಗಳು ಪದೇ ಪದೇ ನೆನಪಿಗೆ ತಂದುಕೊಡುತ್ತಿವೆ. ಅವು ನಿಜಕ್ಕೂ ಕನ್ನಡಿಗರ ಹೆಮ್ಮೆ.

ಸಿರಿಗನ್ನಡಂ ಗೆಲ್ಗೆ
ಕನ್ನಡ ತಾಯ್ ಬಾಳ್ಗೆ.

ಓದುವಾಗ ನೆನಪಿನಲ್ಲಿಟ್ಟುಕೊಳ್ಳಿ :

ಈ ಗ್ರಂಥದಲ್ಲಿ ಅಲ್ಲಲ್ಲಿ ಉಲ್ಲೇಖಿಸಿರುವ ಶಾಸನಗಳ ಸಾಲು ಇತ್ಯಾದಿ ಕಾಗುಣಿತವನ್ನು ಸ್ವಲ್ಪವೂ ಬದಲಾಯಿಸದೆ ಸಾಮಾನ್ಯವಾಗಿ ಮೂಲ ಶಾಸನಗಳಲ್ಲಿರುವ ಪದಗಳನ್ನೇ ಕೊಡಲಾಗಿದೆ. ಉ. ದಾ. ಹಾನುಂಗಲ್, ಕಣ್ಣನೂರು, ಮಣ್ಣೆ, ಸೋಭಿಸು ಇತ್ಯಾದಿ.

ಅಲ್ಲಲ್ಲಿ ಉಪಯೋಗಿಸಿರುವ ಸಂಕ್ಷಿಪ್ತ ನಾಮಗಳ ಪೂರ್ಣ ರೂಪ ವನ್ನು ಕೆಳಗೆ ಕೊಡಲಾಗಿದೆ. ಶಾಸನಗಳು ದೊರೆತಿರುವ ಊರುಗಳ ಮುಂದೆ ತಾಲ್ಲೂಕುಗಳನ್ನು ಸೇರಿಸಿಕೊಂಡು ಓದಬೇಕು. ಉದಾ: ಹಾಸನ ವೆಂದರೆ ಆ ಪಟ್ಟಣವೂ ಆಗಿರಬಹುದು, ಆ ತಾಲ್ಲೂಕೂ ಆಗಿರಬಹುದು.

E. C, – Epigraphia Carnatica

Ak – ಅರಸೀಕೆರೆ
Ag – ಅರಕಲಗೂಡು
Bl – ಬೇಲೂರು
Bn – ಬೆಂಗಳೂರು
Cm – ಚಿಕ್ಕಮಗಳೂರು
Ch – ಚಾಮರಾಜನಗರ
Cn – ಚನ್ನರಾಯಪಟ್ಟಣ
CB – ಚಿಕ್ಕಬಳ್ಳಾಪುರ
Cd – ಚಿತ್ರದುರ್ಗ
Ck – ಚಿಕ್ಕನಾಯಕನಹಳ್ಳಿ
Dg – ದಾವಣಗೆರೆ
Gb – ಗುಬ್ಬಿ
Gd – ಗೋರಿಬಿದನೂರು
Gu – ಗುಂಡ್ಲಪೇಟೆ
Hn – ಹಾಸನ
Hk – ಹೊಳಲ್ಕೆರೆ
Hg – ಹೆಗ್ಗಡದೇವನ ಕೋಟೆ
Kd – ಕಡೂರು
Kp – ಕೃಷ್ಣರಾಜಪೇಟೆ
Kn – ಕಾನಕಾನಹಳ್ಳಿ(ಕನಕಪುರ)
Md – ಮಂಡ್ಯ
Mj – ಮಂಜರಾಬಾದ್
Mg – ಮೂಡಗೆರೆ
Mi – ಮಳವಳ್ಳಿ
Mk – ಮೊಳಕಾಲ್ಮೂರು
Mr – ಮಾಲೂರು
Ng – ನಾಗಮಂಗಲ
Sb – ಸೊರಬ
Sh – ಶಿವಮೊಗ್ಗ
Sk – ಶಿಕಾರಿಪುರ
Sr – ಶ್ರೀರಂಗಪಟ್ಟಣ
Tn – ತಿರುಮಕೂಡಲು – ನರಸೀಪುರ
Tp – ತಿಪಟೂರು
Tm – ತುಮಕೂರು
Yl – ಎಳಂದೂರು

ACKNOWLEDGEMENT

ಗ್ರಂಥಋಣ

1. Epigraphia Carnatica Volumes I to XII—
(Including E. C. Vol. II Revised by R. Narasimha-
char) B. L. Rice

2. Epigraphia Carnatica. Volumes XIII to XV
—Dr. M. H. Krishna

3. Epigraphia Carnatica. Vol. No. XVI
—Prof K. A. Neelakantasastry

4. The Hoysalas
—J. D. M. Derrett

5. The Hoysala Vamsa
—William Coelho

6. Mysore Gazetteer. Vol. II
—C. Hayavadana Rao

7. A History of South India
—K. A. N. Sastry

3. Glimpses of Karnataka
— Dr. M. V. Krishna Rao

9. Karnataka Through the Ages
Edited by R. R. Diwakar

10. Articles on Several Hoysala Temples published by the Deccan Herald.

11. ಕರ್ನಾಟಕ ಗತವೈಭವ

— ಆಲೂರು ವೆಂಕಟರಾವ್

12. ಕರ್ನಾಟಕ ಚರಿತ್ರೆ

—ಡಾ. ಎಂ. ವಿ. ಕೃಷ್ಣರಾವ್

13. ಕನ್ನಡ ಸಾಹಿತ್ಯ ಚರಿತ್ರೆ

—ಡಾ. ರಂ. ಶ್ರೀ. ಮುಗಳಿ

14. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ

—ತ. ಸು. ಶಾಮರಾಯ ಮತ್ತು ಮೋ. ರಾಜೇಶ್ವರಯ್ಯ

15. ಹಂಪೆಯ ಹರಿಹರ

— ಡಿ. ಎಲ್. ನರಸಿಂಹಾಚಾರ್ಯ

16. ಮೈಸೂರು ದೇಶದ ವಾಸ್ತುಶಿಲ್ಪ

— ಬಿ. ವೆಂಕೋಬರಾವ್

17. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

— ಡಾ. ಎಂ. ಚಿದಾನಂದಮೂರ್ತಿ

ಒಪ್ಪೋಲೆ

ಪುಟ	ಸಾಲು	ತಪ್ಪು	ಸರಿ
೩	೧೪	ಕೆಣ್ಣೂರಿನಲ್ಲಿ	ತೊಣ್ಣೂರಿನಲ್ಲಿ
೨೧	೫	ಜಕ್ಕಿಯಜ್ಜೆ	ಜಕ್ಕಿಯಬ್ಬೆ
೨೭	೮	ವಿಲ್ಲವೆ	ವಿಲ್ಲದೆ
೩೨	೧೬	ವರ್ಗವಣೆ	ವರ್ಗಾವಣೆ
೩೩	೫	ಔರ್ವ	ಓರ್ವ
೩೬	೯	ಅರಕೆಬಿರಿಯ	ಅರಕೆಬಿಯ
,,	೧೯	ನರಸಿಂನ	ನರಸಿಂಹ
,,	೨೨	ನದಸಿಂಹ	ನರಸಿಂಹ
೫೦	೨೬	ತುತ್ತಾದುದನು	ತುತ್ತಾದನೆಂದು
೫೯	೨೫	ರಕ್ತ ಕೊಗಿ	ರಕ್ತ ಕೊಡಗಿ
೬೩	೧೦	ವಾದು	ವಾದ
೬೭	೫	ಭಾಗ್ಯತೆ	ಭ್ಯಾಗತೆ
೭೫	೨೬	ವ	ವ್ಯಕ್ತವಾಗಲಿಲ್ಲ
೭೬	೩	ಬ್ರಾಹಣ	ಬ್ರಾಹ್ಮಣ
೭೭	೧೪	ದಲ್ಲಿಸಿದ	ಸಲ್ಲಿಸಿದ
೮೨	೧೦	ವಿಪ್ರಗೆ	ವಿಪ್ರರಿಗೆ
೮೪	೨	ರಲ್ಲದೆ	ರಲ್ಲದ
೧೦೭	೭	ನನಸಿಂಹ	ನರಸಿಂಹ
Acknow-ledgement	೯	Tnrough	Through